# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## *ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕಃ 15-06-2017ರಂದು ನಡೆದ ಸಭೆಯ ನಡವಳಿಗಳು*

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| ಶ್ರೀಯುತರುಗಳಾದ : | |
| ಎಂ.ಕೆ.ಗುಣಶೇಖರ್ – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ, |
| ಬಿ.ಎನ್.ನಿತೀಶ್ ಪುರುಶೋತ್ತಮ – ಸದಸ್ಯರು | ಜಂಟಿ ಆಯುಕ್ತರು (ಆರೋಗ್ಯ), |
| ಕೆ.ಎಂ.ಮಮತ – ಸದಸ್ಯರು | ಉಪ ಆಯುಕ್ತರು (ಆಡಳಿತ), |
| ಜೆ.ಎನ್.ಶ್ರೀನಿವಾಸಮೂರ್ತಿ – ಸದಸ್ಯರು | ಮುಖ್ಯ ಲೆಕ್ಕಾಧಿಕಾರಿ, |
| ಎಂ.ಮಹದೇವ – ಸದಸ್ಯರು | ಸಹಾಯಕ ಆಯುಕ್ತರು (ಆಸ್ತಿಗಳು), |
| ಪದ್ಮಾವತಿ ನರಸಿಂಹಮೂರ್ತಿ – ಸದಸ್ಯರು | ಮುಖ್ಯ ಆರೋಗ್ಯಾಧಿಕಾರಿ, ಅಧೀಕ್ಷಕರು, ಜೆ.ಜೆ.ಆರ್‌ನಗರ, |
| ಮಮತ ಕೆ.ಬಿ. ವಾಸುದೇವ – ಸದಸ್ಯರು | ಕಾರ್ಯಪಾಲಕ ಅಭಿಯಂತರರು (ಯೋಜನೆ), (ಘನತ್ಯಾಜ್ಯ), |
| ಎಂ.ಪದ್ಮಾವತಿ ಶ್ರೀನಿವಾಸ್ – ಸದಸ್ಯರು | ಕಂದಾಯ ಅಧಿಕಾರಿ (ರಾಜಾಜಿನಗರ), (ಯಲಹಂಕ), (ಚಿಕ್ಕಪೇಟೆ), |
| ಎನ್.ಲೋಕೇಶ್ – ಸದಸ್ಯರು | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಯೋಜನೆ-ದಾಸರಹಳ್ಳಿ, ಯಲಹಂಕ), (ಕೊಡಿಗೆಹಳ್ಳಿ), (ಮಾರುತಿ ಸೇವಾ ನಗರ), |
| ಎಂ. ಶಶಿರೇಖಾ – ಸದಸ್ಯರು | ಸಹಾಯಕ ಕಾನೂನು ಅಧಿಕಾರಿ, |
| ಬಿ.ಸುಮಂಗಲ – ಸದಸ್ಯರು | ಸಂಬಂಧಪಟ್ಟ ಅಧಿಕಾರಿಗಳು, |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

### *01]. ವಿಷಯದ ಸಂಖ್ಯೆಃ ತೆಆಸ್ಥಾಸ/50/2016-17*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 01-08-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, 2015-16 ನೇ ಸಾಲಿನ ಆಯವ್ಯಯದಲ್ಲಿ ಬಿಬಿಎಂಪಿಗೆ ಘೋಷಿಸಿರುವ ರೂ. 1500.00 ಕೋಟಿಗಳ ಅನುದಾನದ ಪೈಕಿ ಸರ್ಕಾರದ ಆದೇಶ ಸಂಖ್ಯೆ : ನಅಇ 279 ಎಸ್.ಎಫ್.ಸಿ 2015, ಬೆಂಗಳೂರು ದಿನಾಂಕ : 08.01.2016 ರಲ್ಲಿ ರೂ. 976.00 ಕೋಟಿಗಳ ಕ್ರಿಯಾಯೋಜನೆಗೆ ಅನುಮೋದನೆ ನೀಡಿದೆ. ಅದರಲ್ಲಿ ಕ್ರ.ಸಂ 1 ರಲ್ಲಿ ಬೆಂಗಳೂರು ನಗರದಲ್ಲಿ ಘನತ್ಯಾಜ್ಯ ಸಂಸ್ಕರಣ ಘಟಕಗಳ ಕಾರ್ಯಾರಂಭಕ್ಕೆ ರೂ. 200.00 ಕೋಟಿಗಳ ಅನುದಾನ ನಿಗಧಿಪಡಿಸಿದೆ. ಸರ್ಕಾರದ ಆದೇಶ ಸಂಖ್ಯೆ: ನಅಇ 238 ಎಸ್.ಎಫ್.ಸಿ 2016, ಬೆಂಗಳೂರು ದಿನಾಂಕ : 18-06-2016 ರಲ್ಲಿ ಮೇಲ್ಕಂಡ ರೂ. 200.00 ಕೋಟಿಗಳಲ್ಲಿ ವಾರ್ಡ್ ಸಂಖ್ಯೆ 40ರ ದೊಡ್ಡಬಿದರಕಲ್ಲು ಘಟಕ, ವಾರ್ಡ್ 198ರ ಲಿಂಗಧೀರನಹಳ್ಳಿ ಘಟಕ, ಸುಬ್ಬರಾಯನ ಪಾಳ್ಯ ಘಟಕ, ಸೀಗೆಹಳ್ಳಿ, ಕನ್ನಹಳ್ಳಿ ಘಟಕಗಳ ಒಟ್ಟು 32 ಕಾಮಗಾರಿಗಳ ಅಂದಾಜು ಮೊತ್ತ ರೂ. 66.00 ಕೋಟಿಗಳಿಗೆ ನಗರೋತ್ಥಾನ ಯೋಜನೆಯ ಲೆಕ್ಕಶೀರ್ಷಿಕೆ ಅಡಿ ಭರಿಸಲು ಅನುಮೋದನೆ ನೀಡಿದೆ. ನಗರೋತ್ಥಾನ ಯೋಜನೆಯ ಕಾಮಗಾರಿಗಳನ್ನು 2016-17ರ ಲೆಕ್ಕಶೀರ್ಷಿಕೆ "P-3106 ನಗರೋತ್ಥಾನ ಕಾಮಗಾರಿಗಳು" Current Works ಅಡಿ ಜಾಬ್‌ಸಂಖ್ಯೆ ನೀಡಬೇಕಿದೆ. ಕಾಮಗಾರಿಗಳಿಗೆ ಜಾಬ್‌ಸಂಖ್ಯೆ ನೀಡಲು ಮಾನ್ಯ ಆಯುಕ್ತರು ಆದೇಶಿಸಿರುತ್ತಾರೆ. 2016-

17ರ ಆಯವ್ಯಯದಲ್ಲಿ (ಪುಟಸಂಖ್ಯೆ 184) ಲೆಕ್ಕಶೀರ್ಷಿಕೆ P–3106ನ CurrentWorks ಅಡಿ ಅನುದಾನ ಮೀಸಲಿರಿಸಿರುವುದಿಲ್ಲ. ಸರ್ಕಾರದ ಅನುಮೋದನೆಯಂತೆ ಕಾಮಗಾರಿಗಳನ್ನು ಸಾರ್ವಜನಿಕ ಹಿತದೃಷ್ಟಿಯಿಮದ ತುರ್ತಾಗಿ ಕೈಗೊಳ್ಳಬೇಕಿದೆ. ಆಯವ್ಯಯದಲ್ಲಿ ಅನುದಾನ ಮೀಸಲಿರಿಸದ ಕಾರಣ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ನಿರೀಕ್ಷಿಸಿ 32 ಕಾಮಗಾರಿಗಳ ಮೊತ್ತ ರೂ. 6600.00 ಲಕ್ಷಗಳ ಅನುದಾನವನ್ನು 2016–17ರ ಲೆಕ್ಕಶೀರ್ಷಿಕೆ P–3106ನ Current Works ಅಡಿ ಅಳವಡಿಸಿಕೊಂಡು 310–17–000026 ರಿಂದ 310–17–000057 ರವರೆಗೆ ಜಾಬ್‌ಸಂಖ್ಯೆ ನೀಡಲಾಗಿದೆ. ಘಟನೋತ್ತರ ಮಂಜೂರಾತಿಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***–ಮುಂದೂಡಿದೆ–***

## *02]. ವಿಷಯದ ಸಂಖ್ಯೆಃ ತೆಆಸ್ಥಾಸ/133/2016–17*

ಆಯುಕ್ತರ ದಿನಾಂಕ: 04–08–2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಘನತ್ಯಾಜ್ಯ ನಿರ್ವಹಣೆ ನಿಯಮ 2016 ದಂತೆ ನಗರ ಸ್ಥಳೀಯ ಸಂಸ್ಥೆಗಳು ಘನತ್ಯಾಜ್ಯ ವಸ್ತುವನ್ನು ಮೂಲದಿಂದಲೇ ಅಂದರೆ ಮನೆಮನೆಗಳಿಂದ ಮತ್ತು ಇತರೆ ತ್ಯಾಜ್ಯ ಉತ್ಪಾದಕರಿಂದ ಸಂಗ್ರಹಿಸಿ ವೈಜ್ಞಾನಿಕ ರೀತಿಯಲ್ಲಿ ವಿಲೇವಾರಿ ಮಾಡಬೇಕಾಗಿರುತ್ತದೆ.ಈ ನಿಟ್ಟಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಸದರಿ ನಿಯಮಾನುಸಾರ ಘನತ್ಯಾಜ್ಯ ನಿರ್ವಹಣೆಗಾಗಿ ವಾರ್ಷಿಕ ಸುಮಾರು 500 ಕೋಟಿಯಷ್ಟು ಮೊತ್ತವನ್ನು ವೆಚ್ಚಮಾಡುತ್ತಿದ್ದು, ಈ ಮೊತ್ತವು ಪ್ರತಿ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುತ್ತದೆ.ಈ ನಿಟ್ಟಿನಲ್ಲಿ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಕಟ್ಟಡದ ಪ್ರದೇಶವನ್ನು ಆಧಾರವಾಗಿರಿಸಿಕೊಂಡು ಕರ್ನಾಟಕ ಪೌರ ನಿಗಮಗಳ ಕಾಯಿದೆ 1976 ಪ್ರಕರಣ 103 B ಅನ್ವಯ, ತೆರಿಗೆ ನಿಯಮಾವಳಿ 19 A ರಲ್ಲಿ ಘನತ್ಯಾಜ್ಯ ನಿರ್ವಹಣೆಗೆ ಉಪಕರ ದರಗಳನ್ನು ನಿಗಧಿಪಡಿಸಲಾಗಿರುತ್ತದೆ. ಇದರ ಆಧಾರದಲ್ಲಿ, ಉಲ್ಲೇಖ 3ರಂತೆ ಘನತ್ಯಾಜ್ಯ ನಿರ್ವಹಣಾ ಉಪಕರವನ್ನು ಕಂದಾಯ ಇಲಾಖೆಯು ಆಸ್ತಿ ತೆರಿಗೆ ಸಂಗ್ರಹಿಸುವ ಸಮಯದಲ್ಲಿ ಆಸ್ತಿ ತೆರಿಗೆಯೊಂದಿಗೆ ವಸೂಲಿ ಮಾಡಲು ದಿನಾಂಕ: 29–12–2010 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯಲ್ಲಿ ನಿರ್ಣಯದಂತೆ, 2011–12ನೇ ಸಾಲಿನಿಂದ ಉಪಕರಗಳನ್ನು ಲೆಕ್ಕ ಶೀರ್ಷಿಕೆ 'ಘನತ್ಯಾಜ್ಯ ನಿರ್ವಹಣೆ ಕರ ಸಂಖ್ಯೆ R0194' ರಡಿಯಲ್ಲಿ ನಿರ್ವಹಿಸಲು ಸೂಚಿಸಿ ಈ ಕೆಳಕಂಡ ಉಪಕರಗಳನ್ನು ವಸೂಲಿ ಮಾಡಲು ದಿನಾಂಕ: 15–02–2011 ರಂದು ಅಧಿಸೂಚನೆ ಹೊರಡಿಸಲಾಗಿರುತ್ತದೆ.

### I. ವಾಸದ ಕಟ್ಟಡಗಳಿಗೆ

| ವಿವರ | ಮಾಹೆಯಾನ |
|---|---|
| • 1000 ಚದರಡಿ ವರೆಗೆ ಇರುವ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 10 |
| • 1001 ಚದರಡಿ ಇಂದ' 3000 ಚದರಡಿ ವರೆಗೆ ಇರುವ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 30 |
| • 3001 ಚದರಡಿ ಗಿಂತ ಮೇಲ್ಪಟ್ಟ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 50 |

### II . ವಾಣಿಜ್ಯ ಕಟ್ಟಡಗಳಿಗೆ

| ವಿವರ | ಮೊತ್ತ |
|---|---|
| • 1000 ಚದರಡಿ ವರೆಗೆ ಇರುವ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 50 |
| • 1001 ಚದರಡಿ ಇಂದ 5000 ಚದರಡಿ ವರೆಗೆ ಇರುವ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 100 |
| • 5001 ಚದರಡಿ ಗಿಂತ ಮೇಲ್ಪಟ್ಟ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 200 |

### III . ಕೈಗಾರಿಕ ಕಟ್ಟಡಗಳಿಗೆ

| ವಿವರ | ಮೊತ್ತ |
|---|---|
| • 1000 ಚದರಡಿ ವರೆಗೆ ಇರುವ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 100 |
| • 1001 ಚದರಡಿ ಇಂದ 5000 ಚದರಡಿ ವರೆಗೆ ಇರುವ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 200 |
| • 5001 ಚದರಡಿ ಗಿಂತ ಮೇಲ್ಪಟ್ಟ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 300 |

### IV. ಹೋಟೆಲ್‌ಗಳು, ಕಲ್ಯಾಣ ಮಂಟಪಗಳು, ನರ್ಸಿಂಗ್ ಹೋಂಗಳು

| ವಿವರ | ಮೊತ್ತ |
|---|---|
| • 1000 ಚದರಡಿ ವರೆಗೆ ಇರುವ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 300 |
| • 1001 ಚದರಡಿ ಇಂದ 5000 ಚದರಡಿ ವರೆಗೆ ಇರುವ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 500 |
| • 5001 ಚದರಡಿ ಗಿಂತ ಮೇಲ್ಪಟ್ಟ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 600 |

ಘನತ್ಯಾಜ್ಯಗಳ ನಿರ್ವಹಣೆಗಾಗಿ2011-12ನೇ ಸಾಲಿನಿಂದ 2014-15ರವರೆಗೂ ಘನತ್ಯಾಜ್ಯದ ನಿರ್ವಹಣೆ ವೆಚ್ಚ ಮತ್ತು ಘನತ್ಯಾಜ್ಯ ಉಪಕರ ಸಂಗ್ರಹವಾಗಿರುವ ಮೊತ್ತವು ಈ ಕೆಳಕಂಡಿರುತ್ತದೆ.ಅದರಂತೆ ಘನತ್ಯಾಜ್ಯ ನಿರ್ವಹಣೆಗೆ ಮಾಡಿರುವ ವೆಚ್ಚಕ್ಕೆ ಹೋಲಿಸಿದರೆ ಸಂಗ್ರಹವಾಗಿರುವ ಘನತ್ಯಾಜ್ಯ ಉಪಕರ ಮೊತ್ತವು ಕೇವಲ ಶೇ.9 ರಿಂದ 15% ರಷ್ಟು ಮಾತ್ರ.

| ಕ್ರ. ಸಂ | ವಿವರ | ವಾರ್ಷಿಕ ವೆಚ್ಚ (ರೂ. ಕೋಟಿಗಳಲ್ಲಿ) | | ವಾರ್ಷಿಕ ಘನತ್ಯಾಜ್ಯ ಉಪಕರ ಸಂಗ್ರಹಣೆ (ರೂ. ಕೋಟಿಗಳಲ್ಲಿ) | ವೆಚ್ಚ ಭರಿತ (Cost recovery) |
|---|---|---|---|---|---|
| 1. | • ಸ್ವಚ್ಛತೆ ಮತ್ತು ಕಸ ಸಾಗಾಣಿಕೆ<br>• ಘನತ್ಯಾಜ್ಯ ನಿರ್ವಹಣೆ ಕೇಂದ್ರ ಹಳೆ ಹಾಗೂ ಹೊಸ ಪ್ರದೇಶಗಳಲ್ಲಿ<br>• ಘನತ್ಯಾಜ್ಯ ವಿಲೇವಾರಿ ನಿರ್ವಹಣೆ ವೆಚ್ಚ<br>• ಘನತ್ಯಾಜ್ಯ ವಿಲೇವಾರಿ ನಿರ್ವಹಣೆ | 2011-12 | 237.42 | 36.18 | 15.23% |
| 2. | | 2012-13 | 286.28 | 37.67 | 13.15% |
| 3. | | 2013-14 | 352.21 | 37.67 | 10.60% |
| 4. | | 2014-15 | 421.13 | 41.07 | 9.75% |

ಮುಂದುವರೆದಂತೆ, ಘನತ್ಯಾಜ್ಯ ನಿರ್ವಹಣಾ ವ್ಯವಸ್ಥೆಯನ್ನು ಸುಧಾರಿಸಲು ಸೇವಾ ವೆಚ್ಚವನ್ನು ಭರಿಸಲು ಬಳಕೆದಾರರಿಗೆ ವೆಚ್ಚಗಳನ್ನು ವಿಧಿಸುವುದು ಮತ್ತು ವಸೂಲಾತಿ ಮಾಡುವುದು ಕೇಂದ್ರ ಸರ್ಕಾರದ ಜವಾಹರಲಾಲ್ ನೆಹರು ರಾಷ್ಟ್ರೀಯ ನಗರ ನವೀಕರಣ ಅಭಿಯಾನದ (ಜೆ.ಎನ್.ಎನ್.ಯು.ಆರ್.ಎಂ) ಅಡಿಯಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ ಅಗತ್ಯವಿದ್ದಂತಹ ಕಡ್ಡಾಯ ಸುಧಾರಣೆಗಳಲ್ಲಿ ಒಂದಾಗಿದ್ದು, ಪೂರ್ಣ ಪ್ರಮಾಣದ ಘನತ್ಯಾಜ್ಯದ ನಿರ್ವಹಣೆ ವೆಚ್ಚವನ್ನು (Operation and Maintenance cost) ಉಪಕರ (ಸೇವಾ ಶುಲ್ಕ) ಮೂಲಕ ಸಂಗ್ರಹಣೆ ಮಾಡಿ ನಿರ್ವಹಣೆ ಮಾಡಬೇಕಾಗಿದ್ದು, ಈ ನಿಟ್ಟಿನಲ್ಲಿ ಉಪಕರ (ಸೇವಾ ಶುಲ್ಕ)ವನ್ನು ಪರಿಷ್ಕರಿಸಲು ಜಂಟಿ ಕಾರ್ಯದರ್ಶಿಗಳು,ಕೇಂದ್ರ ನಗರಾಭಿವೃದ್ಧಿ ಇಲಾಖೆ ರವರು ದಿನಾಂಕ: 02-07-2012 ರಲ್ಲಿಯೇ

ಸೂಚಿಸಿರುತ್ತಾರೆ ಹಾಗೂ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಸ್ಥಳೀಯ ಸಂಸ್ಥೆಗಳ ವರದಿ ಮಾರ್ಚ್ 2013ಕ್ಕೆ (CAG-2013) ಕೊನೆಗೊಂಡ ವರ್ಷದ ವರದಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಉಪಕರ ಕುರಿತು ಕೆಲವೊಂದು ಸಲಹೆಗಳೊಂದಿಗೆ ಉತ್ಪತ್ತಿ ಮಾಡಲಾದ ತ್ಯಾಜ್ಯಗಳ ಸ್ವರೂಪ ಮತ್ತು ಪರಿಮಾಣಕ್ಕೆ ತಕ್ಕಂತೆ ಸೂಕ್ತವಾದ ಸೆಸ್ಸ್ ಮೊತ್ತವನ್ನು ವಿಧಿಸುವಂತೆ ಅಭಿಪ್ರಾಯ ನೀಡಲಾಗಿರುತ್ತದೆ.

ಈ ಕುರಿತಂತೆ ದಿನಾಂಕ:10–02–2016 ರಂದು ಅಪರ ಮುಖ್ಯ ಕಾರ್ಯದರ್ಶಿಯವರು, ನಗರಾಭಿವೃದ್ಧಿ ಇಲಾಖೆರವರ ಅಧ್ಯಕ್ಷತೆಯಲ್ಲಿ ರಾಜಸ್ಥಾನ ಸರ್ಕಾರವು ಘನತ್ಯಾಜ್ಯ ವಿಲೇವಾರಿಯ ಬಗ್ಗೆ ಬಳಕೆದಾರರ ಮೇಲೆ ಶುಲ್ಕ ವಿಧಿಸುವ ಬಗ್ಗೆ ಹಾಗೂ ಘನತ್ಯಾಜ್ಯವನ್ನು ಸಂಗ್ರಹಿಸುವ, ಸಾಗಾಣಿಕೆ ಹಾಗೂ ಘನತ್ಯಾಜ್ಯವನ್ನು ಉಪಯೋಗಿಸಿ ಪುನರ್‌ಬಳಕೆಯ ಬಗ್ಗೆ ನಡೆದ ಸಭೆಯಲ್ಲಿ ಪ್ರಸ್ತುತ ಘನತ್ಯಾಜ್ಯ ನಿರ್ವಹಣೆಗೆ ಪಾಲಿಕೆಯು ಮಾಡುತ್ತಿರುವ ವೆಚ್ಚ ಮತ್ತು ವಸೂಲಾತಿಯಾಗುವ ಘನತ್ಯಾಜ್ಯ ನಿರ್ವಹಣೆ ಕರದಲ್ಲಿ ತುಂಬಾ ವ್ಯತ್ಯಾಸವಿರುವುದರ ಕುರಿತು ಸಭೆಯಲ್ಲಿ ಚರ್ಚಿಸಲಾಗಿ ಪಾಲಿಕೆಯು ಆಸ್ತಿ ತೆರಿಗೆ ವಸೂಲಾತಿ ಮಾಡುವ ಸಂದರ್ಭದಲ್ಲಿ ಇನ್ನಿತರ ಇಲಾಖೆಯ ನಿಯಮಾವಳಿಯಂತೆ ಆರೋಗ್ಯ ಕರ, ಗ್ರಂಥಾಲಯ ಕರ ಮತ್ತು ಭಿಕ್ಷುಕರ ಕರಗಳನ್ನು ಶೇಖಡವಾರು ವಸೂಲಾತಿ ಮಾಡುತ್ತಿದ್ದು ಇದರಂತೆ ಘನತ್ಯಾಜ್ಯ ನಿರ್ವಹಣೆಯ ಕರವನ್ನು ಸಹ ಶೇಕಡವಾರು ದರದಲ್ಲಿ ವಸೂಲಿ ಮಾಡುವುದರಿಂದ ಪಾಲಿಕೆಯ ಸಂಪನ್ಮೂಲಗಳನ್ನು ವೃದ್ಧಿಸಬಹುದಾಗಿದ್ದು, ಈ ಉದ್ದೇಶಕ್ಕಾಗಿ ಪಾಲಿಕೆಯು ಮಾಡುವ ವೆಚ್ಚವನ್ನು ಸರದೂಗಿಸಲು ಕ್ರಮವಹಿಸುವ ಕುರಿತು, ಸದರಿ ಸಭೆಯಲ್ಲಿ ಗಂಭೀರವಾಗಿ ಚರ್ಚಿಸಿ ಈ ಕೆಳಕಂಡಂತೆ' ಆದೇಶಿಸಲಾಗಿರುತ್ತದೆ.

"ಘನತ್ಯಾಜ್ಯ ನಿರ್ವಹಣೆಗೆ ಪಾಲಿಕೆಯು ಮಾಡುತ್ತಿರುವ ವೆಚ್ಚವನ್ನು ಈ ಉದ್ದೇಶಕ್ಕಾಗಿ ವಿಧಿಸುವ ಕರವಸೂಲಾತಿಯಲ್ಲಿ ಸರಿದೂಗಿಸುವ ದೃಷ್ಟಿಯಿಂದ ಆಸ್ತಿ ತೆರಿಗೆ ಮೇಲೆ ಶೇ.15% ರಷ್ಟು ಘನತ್ಯಾಜ್ಯ ನಿರ್ವಹಣೆ ಕರ ವಸೂಲಾತಿ ಮಾಡಲು ಮುನ್ಸಿಪಲ್ ಕಾಯ್ದೆ/ ನಿಯಮಾವಳಿಗೆ ಸೂಕ್ತ ತಿದ್ದುಪಡಿ ಮಾಡಿ, ಪಾಲಿಕೆಯಿಂದ ಸೂಕ್ತ ಪ್ರಸ್ತಾವನೆಯನ್ನು ಸರ್ಕಾರದ ಪರಿಶೀಲಿನೆಗೆ ತುರ್ತಾಗಿ ಸಲ್ಲಿಸುವಂತೆ ಹಾಗೂ ರಾಜಸ್ಥಾನ ನಿಯಮಗಳಲ್ಲಿರುವಂತೆ ದಂಡಗಳನ್ನು ವಿಧಿಸಲು ಸಹಪ್ರಸ್ತಾವನೆಯನ್ನು ಸಲ್ಲಿಸಲು ತಿಳಿಸಲಾಗಿರುತ್ತದೆ."

ಈ ಹಿನ್ನೆಲೆಯಲ್ಲಿ ಸರ್ಕಾರದ ಆದೇಶದನ್ವಯ ಘನತ್ಯಾಜ್ಯ ಕರವನ್ನು ಪರಿಷ್ಕೃತಗೊಳಿಸಲು ಕರ್ನಾಟಕ ಮುನ್ಸಿಪಲ್ ಕಾಯ್ದೆ/ ನಿಯಮಾವಳಿ ತಿದ್ದುಪಡಿ ತರುವ ಅವಶ್ಯಕತೆಯಿರುವುದರಿಂದ ಪ್ರಸ್ತುತ ಆಸ್ತಿ ತೆರಿಗೆಯ ಶೇ.15%ರಷ್ಟು ಹೆಚ್ಚಿಸಿದಲ್ಲಿ ವಾರ್ಷಿಕ ಆಸ್ತಿ ತೆರಿಗೆ ರೂ.2000 ಕೋಟಿ ಎಂದುಕೊಂಡಲ್ಲಿ ರೂ. 300 ಕೋಟಿ ಘನತ್ಯಾಜ್ಯ ಉಪಕರಗಳನ್ನು ಸಂಗ್ರಹಿಸಬಹುದಾಗಿದ್ದು ಮತ್ತು ಭಾರತ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು ಸ್ಥಳೀಯ ಸಂಸ್ಥೆಗಳ ವರದಿ ಮಾರ್ಚ್ 2013ಕ್ಕೆ (ಸಿಎಜಿ–2013)ರವರ ವರದಿಯಲ್ಲಿ ಘನತ್ಯಾಜ್ಯ ನಿರ್ವಹಣೆಯ ಉಪಕರ ಕುರಿತು ನೀಡಿರುವಸಲಹೆಗಳಂತೆ ಧಾರ್ಮಿಕ ಸಂಸ್ಥೆಗಳಲ್ಲಿಯೂ ಹಾಗೂ ಬಾಡಿಗೆ ನೀಡಿರುವ ಪಾಲಿಕೆಯ ಕಟ್ಟಡಗಳಲ್ಲೂ ಕೂಡ ತ್ಯಾಜ್ಯ ಉತ್ಪಾದನೆ ಪ್ರಮಾಣದ ಮೇಲೆ ಉಪಕರಗಳನ್ನು ಸಂಗ್ರಹಿಸಬೇಕಾಗಿದ್ದು, ಈ ಬಗ್ಗೆಕಾನೂನು ಕೋಶದ ಮುಖ್ಯಸ್ಥರಿಗೆ' ಅಭಿಪ್ರಾಯಹಾಗೂ ಶೇ. 15%ರಷ್ಟು ಘನತ್ಯಾಜ್ಯ ಕರಗಳನ್ನು ವಿಧಿಸಿದಲ್ಲಿ ಪ್ರಸ್ತುತ ಪಡೆಯುತ್ತಿರುವ ಕರಗಳ ಯಾವುದೇ ಪ್ರಕರಣಗಳಲ್ಲಿ ಕಡಿಮೆಗೊಳ್ಳುವ ಕುರಿತಂತೆ ಉಪ ಆಯುಕ್ತರು ಕಂದಾಯ ರವರ ಅಭಿಪ್ರಾಯ ಕೂಡ ಪಡೆಯಲಾಗಿರುತ್ತದೆ. ಅದರಂತೆ ಕಾನೂನು ಕೋಶದ ಮುಖ್ಯಸ್ಥರು ಕರ್ನಾಟಕ ಮುನ್ಸಿಪಲ್ ಕಾಯ್ದೆ 1976 ರಲ್ಲಿ ಸೆಕ್ಷನ್ 103B (2) ರಲ್ಲಿ ತಿದ್ದುಪಡಿ ತರಲು ಪ್ರತಿ ಆಸ್ತಿ ತೆರಿಗೆಗೆ ಗರಿಷ್ಟ ರೂ. 5 ಸಾವಿರ ಪ್ರತಿ ಮಾಹೆ ಮೀರದಂತೆ ನಿಗಧಿಪಡಿಸಲು ಅಭಿಪ್ರಾಯಿಸಿರುತ್ತಾರೆ.ಸದರಿ ಪ್ರಸ್ತಾನೆಯ ಕುರಿತು ಉಪ ಆಯುಕ್ತರು ಕಂದಾಯ ರವರು ವಾರ್ಷಿಕ ರೂ. 5ಲಕ್ಷಕ್ಕಿಂತ ಮೇಲ್ಪಟ್ಟು ಆಸ್ತಿ ತೆರಿಗೆ ಪಾವತಿಸುತ್ತಿರುವ ಹಲವಾರು ಪ್ರಕರಣಗಳಿದ್ದು, ಈ ರೀತಿ ಮಿತಿಗೊಳಿಸಿದ್ದಲ್ಲಿ ನಗರ ಪಾಲಿಕೆಗೆ ಆರ್ಥಿಕ ನಷ್ಟ ಉಂಟಾಗುತ್ತದೆಂದು ಅಭಿಪ್ರಾಯಿಸಿರುವ ಹಿನ್ನೆಲೆಯಲ್ಲಿ ಪಾಲಿಕೆ ವ್ಯಾಪ್ತಿಯಲ್ಲಿರುವ ಎಲ್ಲಾ ಕಟ್ಟಡಗಳಿಗೆ ಹಾಗೂ ಖಾಲಿ

ನಿವೇಶನಗಳಿಗೆ ಆಸ್ತಿತೆರಿಗೆಯ ಮೇಲೆ ಶೇ.15% ರಷ್ಟು ಘನತ್ಯಾಜ್ಯ ಉಪಕರಗಳನ್ನು ಸಂಗ್ರಹಿಸುವುದು ಸೂಕ್ತವಾಗಿರುತ್ತದೆ. ಇದಲ್ಲದೇಪಾಲಿಕೆಯು ಹಾಲಿ ಕೆ.ಎಂ.ಸಿ ತಿದ್ದುಪಡಿ ಕಾಯ್ದೆ ಷೆಡ್ಯೂಲ್–13 ಸೆಕ್ಷನ್ 431 (A) ರಲ್ಲಿ ಸೂಚಿಸಿರುವಂತೆ ಘನತ್ಯಾಜ್ಯ ನಿಯಮ ಉಲ್ಲಂಘನೆಗಳಿಗೆ ದಂಡ ವಿಧಿಸಲಾಗುತ್ತಿದ್ದು, ಅವುಗಳನ್ನು ಒಳಗೊಂಡಂತೆ ರಾಜಸ್ಥಾನ ಸರ್ಕಾರವು ವಿಧಿಸುತ್ತಿರುವ ಘನತ್ಯಾಜ್ಯ ನಿಯಮದಡಿ ವಿವಿಧ ಉಲ್ಲಂಘನೆಯ ಪ್ರಕರಣಗಳಿಗೆ ದಂಡ ವಿಧಿಸುತ್ತಿರುವ ರೀತ್ಯಾ ಪಾಲಿಕೆಯು ಅಳವಡಿಸಿಕೊಳ್ಳಬಹುದಾಗಿರುತ್ತದೆ.(ಅನುಬಂಧ–ಅ ಲಗತ್ತಿಸಿದೆ) ಮೇಲೆ ವಿವರಿಸಿದ ಹಿನ್ನಲೆಯಲ್ಲಿ ಈ ಕೆಳಕಂಡ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಸಲ್ಲಿಸಿದೆ.

1. ಪಾಲಿಕೆ ವ್ಯಾಪ್ತಿಯಲ್ಲಿರುವ ಎಲ್ಲಾ ಕಟ್ಟಡಗಳಿಗೆ ಹಾಗೂ ಖಾಲಿ ನಿವೇಶನಗಳಿಗೆ ಆಸ್ತಿತೆರಿಗೆಯ ಮೇಲೆ ಶೇ.15% ರಷ್ಟು ಘನತ್ಯಾಜ್ಯ ಉಪಕರಗಳನ್ನು 2017–18 ಸಾಲಿನಿಂದ ಸಂಗ್ರಹಿಸುವ ಬಗ್ಗೆ.
2. ರಾಜಸ್ಥಾನ ಸರ್ಕಾರವು ವಿಧಿಸುತ್ತಿರುವ ಘನತ್ಯಾಜ್ಯ ನಿಯಮ ಉಲ್ಲಂಘನೆಯ ಪ್ರಕರಣಗಳಿಗೆ ದಂಡ ವಿಧಿಸುತ್ತಿರುವ ರೀತ್ಯಾ ಪಾಲಿಕೆಯು ಅಳವಡಿಸಿಕೊಳ್ಳುವ ಕುರಿತು.

**ದಿನಾಂಕ: 29–12–2016 ರ ಪಾಲಿಕೆ ಸಭೆಯಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಪರಿಶೀಲನೆಗಾಗಿ ವಿಷಯವನ್ನು ಕಳುಹಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.**

***–ಮುಂದೂಡಿದೆ–***

## *03]. ವಿಷಯದ ಸಂಖ್ಯೆಃ ತೆಆಸ್ಥಾಸ/157/2016–17*

ಆಯುಕ್ತರ ದಿನಾಂಕ: 20–01–2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ:ನಅಇ 344 ಎಂಎನ್‌ಜಿ 2016, ದಿನಾಂಕ:22–10–2016 ರಲ್ಲಿ ಪಶು ಸಂಗೋಪನಾ ಮತ್ತು ಪಶು ವೈದ್ಯ ಸೇವಾ ಇಲಾಖೆಯ ಕಛೇರಿ ಆದೇಶ ಸಂಖ್ಯೆ: ಆಪಸಂ/ಸಿಬ್ಬಂದಿ–3/ವಿವ–31/2016–17 ದಿನಾಂಕ:30–08–2016 ರಂತೆ ಶ್ರೀ ಲಕ್ಷ್ಮೀನಾರಾಯಣ ಮತ್ತು ಶ್ರೀ ಜಿ.ಚಿನ್ಮಲಾದ್ರಿ ಬೃಹನ್ಮಠ್, ಹಿರಿಯ ಪಶು ವೈದ್ಯಕೀಯ ಪರಿವೀಕ್ಷಕರು, ಪಶುಪಾಲನಾ ಮತ್ತು ಪಶು ವೈದ್ಯ ಸೇವಾ ಇಲಾಖೆ ಇವರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಖಾಲಿ ಇರುವ ಹಿರಿಯ ಪರಿವೀಕ್ಷಕರ ಹುದ್ದೆಗೆ ನಿಯೋಜಿಸಲಾಗಿರುತ್ತದೆ.

ಶ್ರೀ ಲಕ್ಷ್ಮೀನಾರಾಯಣ ಮತ್ತು ಶ್ರೀ ಜಿ.ಚಿನ್ಮಲಾದ್ರಿ ಬೃಹನ್ಮಠ್, ಹಿರಿಯ ಪಶು ವೈದ್ಯಕೀಯ ಪರಿವೀಕ್ಷಕರು, ಮಾನ್ಯ ಆಯುಕ್ತರು ರವರ ಕಛೇರಿಯಲ್ಲಿ ದಿನಾಂಕ: 24–10–2016 ರಂದು ಕರ್ತವ್ಯದ ಮೇಲೆ ಹಾಜರಾತಿಯನ್ನು ಸಲ್ಲಿಸಿರುತ್ತಾರೆ. ಪ್ರಸ್ತುತ ಪಾಲಿಕೆಯಲ್ಲಿ ಹಿರಿಯ ಪಶು ವೈದ್ಯಕೀಯ ಪರಿವೀಕ್ಷಕರ ಹುದ್ದೆ ಖಾಲಿ ಇರುತ್ತದೆ.

ಮೇಲ್ಕಂಡ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆಯಲ್ಲಿ ಶ್ರೀ.ಜಿ.ಚಿನ್ಮಲಾದ್ರಿ ಬೃಹನ್ಮಠ್, ಹಿರಿಯ ಪಶು ವೈದ್ಯಕೀಯ ಪರಿವೀಕ್ಷಕರು, ಪಶುಪಾಲನಾ ಮತ್ತು ಪಶು ವೈದ್ಯ ಸೇವಾ ಇಲಾಖೆ ಇವರನ್ನು ಪಾಲಿಕೆಗೆ ಎರವಲು ಸೇವೆಯ ಮೇಲೆ ಹಿರಿಯ ಪಶುವೈದ್ಯಕೀಯ ಪರಿವೀಕ್ಷಕರ ಹುದ್ದೆಯಲ್ಲಿ ಕರ್ತವ್ಯದ ಮೇಲೆ ತೆಗೆದುಕೊಳ್ಳುವ ಬಗ್ಗೆ ಕಡತವನ್ನು ಅಭಿಪ್ರಾಯಕ್ಕಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿಯ ಮೇರೆಗೆ **ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಗಳಡಿ ಪಶುವೈದ್ಯಕೀಯ ವಿಭಾಗ ಕಛೇರಿ ಹಾಗೂ ಸದರಿ ಕಛೇರಿಗೆ ಯಾವುದೇ ಹುದ್ದೆಗಳು ಮಂಜೂರಾಗದೆ ಇದ್ದಾಗ್ಯೂ ಹಲವಾರು ಅಧಿಕಾರಿಗಳು ಪಶುವೈದ್ಯಕೀಯ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಈ ಬಗ್ಗೆ ಸಭೆಯಲ್ಲಿ**

ಚರ್ಚಿಸಲಾಗಿ, ಪ್ರಸ್ತುತ ಪಾಲಿಕೆಯ ಅಧೀನದಲ್ಲಿರುವ 04 ವಧಾಗಾರಗಳ ಮೇಲುಸ್ತುವಾರಿ ಹಾಗೂ ಕೋಳಿ ಮತ್ತು ಮಾಂಸದ ಅಂಗಡಿಗಳಿಗೆ ಉದ್ದಿಮೆ ಪರವಾನಗಿ ನೀಡುವ ಕೆಲಸ ಕಾರ್ಯಗಳನ್ನು ಮಾತ್ರ ಈ ವಿಭಾಗದಿಂದ ನಿರ್ವಹಿಸುತ್ತಿದ್ದು, ಪಶು ವೈದ್ಯಕೀಯ ವಿಭಾಗ ಜಾರಿಯಲ್ಲಿ ಇಲ್ಲದ ಸಮಯದಲ್ಲಿ, ಸದರಿಯವರು ನಿರ್ವಹಿಸುತ್ತಿರುವ ಕೆಲಸ ಕಾರ್ಯಗಳನ್ನು ಪಾಲಿಕೆಯ ಆರೋಗ್ಯ ಇಲಾಖೆಯ ವತಿಯಿಂದ ನಿರ್ವಹಿಸಲಾಗುತ್ತಿದುದ್ದರಿಂದ, ಪಶುಪಾಲನೆ ವಿಭಾಗದಲ್ಲಿ ಸುಮಾರು 28 ಮಂದಿ ಅಧಿಕಾರಿ / ನೌಕರರುಗಳು ಮಂಜೂರಾತಿ ಇಲ್ಲದ ಹುದ್ದೆಗಳಲ್ಲಿ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿದ್ದು, ಇದರಿಂದಾಗಿ ಸದರಿಯವರುಗಳಿಗೆ ವೇತನ ಹಾಗೂ ಇತರೆ ಭತ್ಯೆಗಳ ಪಾವತಿಯಿಂದಾಗಿ ಪಾಲಿಕೆಗೆ ಆರ್ಥಿಕ ಹೊರೆ ಹೆಚ್ಚಾಗಿರುತ್ತದೆ.

ಆದ್ದರಿಂದ, ಅನಗತ್ಯ ಹಾಗೂ ಮಂಜೂರಾತಿ ಇಲ್ಲದ ಹುದ್ದೆಗಳಲ್ಲಿ ಪಶುವೈದ್ಯಕೀಯಕ್ಕೆ ಸಂಬಂಧಿಸಿದ ಅಧಿಕಾರಿ/ನೌಕರರುಗಳು ಕಾರ್ಯನಿರ್ವಹಿಸುತ್ತಿದ್ದು, ಸಾರ್ವಜನಿಕ ಹಿತದೃಷ್ಟಿಯಿಂದ ಇವರುಗಳ ಅವಶ್ಯಕತೆ ಕಂಡು ಬರುತ್ತಿಲ್ಲವಾದ್ದರಿಂದ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ವ್ಯತಿರಿಕ್ತವಾಗಿ ಪಶುಪಾಲನೆ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ / ಸಿಬ್ಬಂದಿಗಳನ್ನು ಪಾಲಿಕೆಯ ಸೇವೆಯಿಂದ ಬಿಡುಗಡೆಗೊಳಿಸುವ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಗೆ ಸಭೆಯ ಮುಂದೆ ಕಡತವನ್ನು ಮಂಡಿಸುವುದೆಂದು ತೀರ್ಮಾನಿಸಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ: 22.02.2017ರ ಸಭೆಯ ನಿರ್ಣಯ.

**ನಿರ್ಣಯ:** ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ: ನಅಇ 344ಎಂಎನ್‌ಜಿ 2016, ದಿನಾಂಕ: 22-10-2016ರ ಆದೇಶದಂತೆ ಪಶು ಸಂಗೋಪನಾ ಮತ್ತು ಪಶು ವೈದ್ಯ ಸೇವಾ ಇಲಾಖೆಯ ಕಛೇರಿ ಆದೇಶ ಸಂಖ್ಯೆ: ಆಪಸಂ/ಸಿಬ್ಬಂದಿ-3/ವಿವ-31/2016-17, ದಿನಾಂಕ: 30.08.2016ರ ಪ್ರಕಾರ ಪ್ರಸ್ತಾವನೆಯಲ್ಲಿ ತಿಳಿಸಿರುವ ಅಧಿಕಾರಿ/ಸಿಬ್ಬಂದಿಗಳನ್ನು ಪಶು ಸಂಗೋಪನಾ ಮತ್ತು ಪಶು ವೈದ್ಯ ಸೇವಾ ಇಲಾಖೆಯಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಖಾಲಿಯಿರುವ ಹಿರಿಯ ಪರಿವೀಕ್ಷಕರ ಹುದ್ದೆಗೆ ಈ ತಕ್ಷಣದಿಂದ ಜಾರಿಗೆ ಬರುವಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಕರ್ತವ್ಯ ನಿರ್ವಹಿಸಲು ನಿಯೋಜಿಸಿರುವಂತೆ ದಿನಾಂಕ: 24.10.2016 ರಂದು ಕರ್ತವ್ಯದ ಮೇಲೆ ಹಾಜರಾತಿಯನ್ನು ಸಲ್ಲಿಸಿರುವ ಅಧಿಕಾರಿ/ಸಿಬ್ಬಂಧಿಗಳನ್ನು ಎರವಲು ಸೇವೆಯ ಮೇರೆಗೆ ಕರ್ತವ್ಯದ ಮೇಲೆ ತೆಗೆದುಕೊಳ್ಳಲು ಅನುಮೋದನೆ ಕೋರಿ ಮಂಡಿಸಿರುವ ಹಿನ್ನಲೆಯಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ದಿನಾಂಕ: 22.02.2017ರ ನಿರ್ಣಯದಲ್ಲಿ ಈ ಹುದ್ದೆಗಳು ಮಂಜೂರಾತಿ ಹುದ್ದೆಗಳಾಗಿರುವುದಿಲ್ಲವೆಂದು, ಇವರುಗಳನ್ನು ಪಾಲಿಕೆಗೆ ನಿಯೋಜಿಸಿಕೊಳ್ಳುವುದರಿಂದ ಆರ್ಥಿಕವಾಗಿ ಹೊರೆಯಾಗಲಿದ್ದು, ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ವ್ಯತಿರಿಕ್ತವಾಗುವುದರಿಂದ ಈಗಾಗಲೇ ಪಶುಪಾಲನೆ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳನ್ನು ಪಾಲಿಕೆಯ ಸೇವೆಯಿಂದ ಬಿಡುಗಡೆಗೊಳಿಸುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುತ್ತಾರೆ. ಈ ವಿಷಯದ ಬಗ್ಗೆ ಸಭೆಯಲ್ಲಿ ಹಾಜರಿದ್ದ ಉಪ ಆಯುಕ್ತರು (ಆಡಳಿತ) ರವರೊಂದಿಗೆ ಚರ್ಚಿಸಲಾಗಿ, 'ಪ್ರಸ್ತಾವನೆಯಲ್ಲಿ ತಿಳಿಸಿರುವ

**ಅಧಿಕಾರಿ/ಸಿಬ್ಬಂದಿಗಳ ಸೇವೆಯು ಪಾಲಿಕೆಗೆ ಅವಶ್ಯಕತೆಯಿರುವುದಾಗಿ ತಿಳಿಸಿರುತ್ತಾರೆ'. ಆದುದರಿಂದ ಈ ಪ್ರಕರಣದಲ್ಲಿ ಸದರಿ ಅಧಿಕಾರಿ/ಸಿಬ್ಬಂದಿಗಳ ಸೇವೆ ನಗರ ಪಾಲಿಕೆಗೆ ಅಗತ್ಯವಿದೆಯೇ ಅಥವಾ ಇಲ್ಲವೇ? ಎಂಬ ಬಗ್ಗೆ ಹಾಗೂ ಈಗಾಗಲೇ ಕರ್ತವ್ಯಕ್ಕೆ ಹಾಜರಾತಿ ಸಲ್ಲಿಸಿ ಸುಮಾರು ಏಳೆಂಟು ತಿಂಗಳುಗಳು ಆಗಿರುವುದರಿಂದ ವೇತನ ಮತ್ತು ಇತರೆ ಭತ್ಯೆಗಳನ್ನು ನೀಡುವ ಬಗ್ಗೆ ಕಾನೂನು ತೊಡಕಾಗುವುದರಿಂದ ಅಂತಿಮ ತೀರ್ಮಾನಕ್ಕಾಗಿ ಪಾಲಿಕೆ ಸಭೆಯ ಮುಂದೆ ಮಂಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## ***04]. ವಿಷಯದ ಸಂಖ್ಯೆ: ತೆಆಸ್ಥಾಸ/158/2016-17***

ಆಯುಕ್ತರ ದಿನಾಂಕ: 25-10-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಈ ಕೆಳಕಂಡ ಹಿರಿಯ ಪಶುವೈದ್ಯಕೀಯ ಪರೀಕ್ಷಕರುಗಳನ್ನು ಸದರಿಯವರ ಹೆಸರಿನ ಮುಂದೆ ಸೂಚಿಸಿರುವ ಸರ್ಕಾರದ ಆದೇಶದಂತೆ ಪಾಲಿಕೆಯಲ್ಲಿ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಖಾಲಿ ಇರುವ ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗೆ ನಿಯೋಜನೆ ಮೇಲೆ ಮರುಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿರುತ್ತಾರೆ.

| **ಕ್ರ.ಸಂ.** | **ಅಧಿಕಾರಿ / ನೌಕರರ ಹೆಸರು** | **ಹಾಜರಾತಿ ದಿನಾಂಕ** | **ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ** |
|---|---|---|---|
| 1 | ಶ್ರೀ ರಮೇಶ್, ಎಸ್.ಟಿ | 06-09-2016 | ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ನಅಇ 306 ಎಂಎನ್‌ಜಿ 2016, ದಿನಾಂಕ:03-09-2016 |
| 2 | ಶ್ರೀಮತಿ ಕೆ.ಎಸ್.ಸುಧಾಮಣಿ | 01-09-2016 | ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ನಅಇ 269 ಎಂಎನ್‌ಜಿ 2016, ದಿನಾಂಕ:31-08-2016 |
| 3 | ಶ್ರೀಮತಿ ಬಿ.ಆರ್.ಚಂದ್ರಿಕ | 06-09-2016 | ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ನಅಇ 268 ಎಂಎನ್‌ಜಿ 2016, ದಿನಾಂಕ:31-08-2016 |
| 4 | ಶ್ರೀ ಬಿ.ರಮೇಶ್ | 06-09-2016 | ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ನಅಇ 305 ಎಂಎನ್‌ಜಿ 2016, ದಿನಾಂಕ:03-09-2016 |
| 5 | ಶ್ರೀ ಬಿ.ನಾಗೇಶ್ | 08-09-2016 | ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ನಅಇ 275 ಎಂಎನ್‌ಜಿ 2016, ದಿನಾಂಕ:03-08-2016 |
| 6 | ಶ್ರೀ ವಿ.ನಾರಾಯಣಸ್ವಾಮಿ | 06-09-2016 | ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ನಅಇ 307 ಎಂಎನ್‌ಜಿ 2016, ದಿನಾಂಕ:03-09-2016 |

ಪರಿಶೀಲಿಸಲಾಗಿ, ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯಂತೆ ಪಶುವೈದ್ಯಕೀಯ ವಿಭಾಗದಲ್ಲಿ ಯಾವುದೇ ಮಂಜೂರಾದ ಹುದ್ದೆಗಳು ಇರುವುದಿಲ್ಲ. ಆದರೆ, ಈ ಕೆಳಕಂಡಂತೆ ಪಾಲಿಕೆಯ ಪಶುವೈದ್ಯಕೀಯ ವಿಭಾಗದ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಹುದ್ದೆಗಳನ್ನು ಗುರುತಿಸಿ ಈ ಸಂಬಂಧ ಪಾಲಿಕೆ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ತಿದ್ದುಪಡಿ ಮಾಡುವ ಸಂಬಂಧ ಕಡತವು ವ್ಯವಹರಣೆಯಲ್ಲಿರುತ್ತದೆ.

| ಕ್ರ. ಸಂ. | ಹುದ್ದೆಗಳ ವಿವರ | ಮಂಜೂರಾಗಬೇಕಾದ ಹುದ್ದೆಗಳ ಸಂಖ್ಯೆ |
|---|---|---|
| 1 | ಜಂಟಿ ನಿರ್ದೇಶಕರು (ಪಶುಪಾಲನೆ) | 01 |
| 2 | ಉಪ ನಿರ್ದೇಶಕರು (ಪಶುಪಾಲನೆ) | 01 |
| 3 | ಸಹಾಯಕ ನಿರ್ದೇಶಕರು (ಪಶುಪಾಲನೆ) | 10 |
| 4 | ಪಶುವೈದ್ಯಾಧಿಕಾರಿಗಳು | 13 |
| 5 | ಜಾನುವಾರು ಅಧಿಕಾರಿಗಳು | 08 |
| 6 | ಹಿರಿಯ ಪಶುವೈದ್ಯಕೀಯ ಪರೀಕ್ಷಕರು | 27 |

ಅದರಂತೆ ಪಾಲಿಕೆಯಲ್ಲಿ ಸದರಿ ಹುದ್ದೆಗಳನ್ನು ಪಶುಪಾಲನೆ ಮತ್ತು ಪಶುಸೇವಾ ಇಲಾಖೆ ವತಿಯಿಂದ ಎರವಲು ಸೇವೆಯ ಮೇಲೆ ನಿಯೋಜಿಸಿಕೊಂಡು ಕಾರ್ಯನಿರ್ವಹಿಸಲಾಗುತ್ತಿದೆ. ಪ್ರಸ್ತುತ ಪಾಲಿಕೆಯಲ್ಲಿ ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳು ಖಾಲಿ ಇರುತ್ತದೆ.

ಮೇಲ್ಕಂಡ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆಯಂತೆ ಸದರಿ ಹಿರಿಯ ಪಶುವೈದ್ಯಕೀಯ ಪರಿವೀಕ್ಷಕರುಗಳನ್ನು ಪಾಲಿಕೆಗೆ ಎರವಲು ಸೇವೆಯ ಮೇಲೆ ಕರ್ತವ್ಯದ ಮೇಲೆ ತೆಗೆದುಕೊಳ್ಳುವ ಬಗ್ಗೆ ಕಡತವನ್ನು ಮಾಹಿತಿ / ಅಭಿಪ್ರಾಯಕ್ಕಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿಯ ಮೇರೆಗೆ **ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಗಳಡಿ ಪಶುವೈದ್ಯಕೀಯ ವಿಭಾಗ ಕಛೇರಿ ಹಾಗೂ ಸದರಿ ಕಛೇರಿಗೆ ಯಾವುದೇ ಹುದ್ದೆಗಳು ಮಂಜೂರಾಗದೆ ಇದ್ದಾಗ್ಯೂ ಹಲವಾರು ಅಧಿಕಾರಿಗಳು ಪಶುವೈದ್ಯಕೀಯ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಈ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ, ಪ್ರಸ್ತುತ ಪಾಲಿಕೆಯ ಅಧೀನದಲ್ಲಿರುವ 04 ವಧಾಗಾರಗಳ ಮೇಲುಸ್ತುವಾರಿ ಹಾಗೂ ಕೋಳಿ ಮತ್ತು ಮಾಂಸದ ಅಂಗಡಿಗಳಿಗೆ ಉದ್ದಿಮೆ ಪರವಾನಗಿ ನೀಡುವ ಕೆಲಸ ಕಾರ್ಯಗಳನ್ನು ಮಾತ್ರ ಈ ವಿಭಾಗದಿಂದ ನಿರ್ವಹಿಸುತ್ತಿದ್ದು, ಪಶು ವೈದ್ಯಕೀಯ ವಿಭಾಗ ಜಾರಿಯಲ್ಲಿ ಇಲ್ಲದ ಸಮಯದಲ್ಲಿ, ಸದರಿಯವರು ನಿರ್ವಹಿಸುತ್ತಿರುವ ಕೆಲಸ ಕಾರ್ಯಗಳನ್ನು, ಪಾಲಿಕೆಯ ಆರೋಗ್ಯ ಇಲಾಖೆಯ ವತಿಯಿಂದ ನಿರ್ವಹಿಸಲಾಗುತ್ತಿದುದ್ದರಿಂದ, ಪಶುಪಾಲನೆ ವಿಭಾಗದಲ್ಲಿ ಸುಮಾರು 28 ಮಂದಿ ಅಧಿಕಾರಿ / ನೌಕರರುಗಳು ಮಂಜೂರಾತಿ ಇಲ್ಲದ ಹುದ್ದೆಗಳಲ್ಲಿ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿದ್ದು, ಇದರಿಂದಾಗಿ ಸದರಿಯವರುಗಳಿಗೆ ವೇತನ ಹಾಗೂ ಇತರೆ ಭತ್ಯೆಗಳ ಪಾವತಿಯಿಂದಾಗಿ ಪಾಲಿಕೆಗೆ ಆರ್ಥಿಕ ಹೊರೆ ಹೆಚ್ಚಾಗಿರುತ್ತದೆ.**

**ಆದ್ದರಿಂದ, ಅನಗತ್ಯ ಹಾಗೂ ಮಂಜೂರಾತಿ ಇಲ್ಲದ ಹುದ್ದೆಗಳಲ್ಲಿ ಪಶುವೈದ್ಯಕೀಯಕ್ಕೆ ಸಂಬಂಧಿಸಿದ ಅಧಿಕಾರಿ/ನೌಕರರುಗಳು ಕಾರ್ಯನಿರ್ವಹಿಸುತ್ತಿದ್ದು, ಸಾರ್ವಜನಿಕ ಹಿತದೃಷ್ಟಿಯಿಂದ ಇವರುಗಳ ಅವಶ್ಯಕತೆ ಕಂಡು ಬರುತ್ತಿಲ್ಲವಾದ್ದರಿಂದ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ವ್ಯತಿರಿಕ್ತವಾಗಿ ಪಶುಪಾಲನೆ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ / ಸಿಬ್ಬಂದಿಗಳನ್ನು ಪಾಲಿಕೆಯ ಸೇವೆಯಿಂದ ಬಿಡುಗಡೆಗೊಳಿಸುವ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಗೆ ಸಭೆಯ ಮುಂದೆ ಕಡತವನ್ನು ಮಂಡಿಸುವುದೆಂದು ತೀರ್ಮಾನಿಸಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ: 22.02.2017ರ ಸಭೆಯ ನಿರ್ಣಯ.**

**ನಿರ್ಣಯ:–** ಸರ್ಕಾರದ ಅಧಿಕೃತ ಜ್ಞಾಪನ ಪತ್ರದಂತೆ ಪ್ರಸ್ತಾವನೆಯಲ್ಲಿ ತಿಳಿಸಿರುವಂತೆ 06 ಮಂದಿ ಹಿರಿಯ ಪಶುವೈದ್ಯಕೀಯ ಪರಿವೀಕ್ಷಕರುಗಳನ್ನು ಬೃಹತ್ ಬೆಂಗಳೂರು

ಮಹಾನಗರ ಪಾಲಿಕೆಯಲ್ಲಿ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಕರ್ತವ್ಯ ನಿರ್ವಹಿಸಲು ನಿಯೋಜಿಸಿಕೊಂಡು ಕಾರ್ಯನಿರ್ವಹಿಸಲಾಗುತ್ತಿದ್ದು, ಪಾಲಿಕೆಗೆ ಎರವಲು ಸೇವೆಯ ಮೇರೆಗೆ ಕರ್ತವ್ಯದ ಮೇಲೆ ತೆಗೆದುಕೊಳ್ಳಲು ಅನುಮೊದನೆ ಕೋರಿ ಮಂಡಿಸಿರುವ ಹಿನ್ನಲೆಯಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ದಿನಾಂಕ: 27.01.2017ರ ನಿರ್ಣಯದಲ್ಲಿ ಈ ಹುದ್ದೆಗಳು ಮಂಜೂರಾತಿ ಹುದ್ದೆಗಳಾಗಿರುವುದಿಲ್ಲವೆಂದು, ಇವರುಗಳನ್ನು ಪಾಲಿಕೆಗೆ ನಿಯೋಜಿಸಿಕೊಳ್ಳುವುದರಿಂದ ಆರ್ಥಿಕವಾಗಿ ಹೊರೆಯಾಗಲಿದ್ದು, ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ವ್ಯತಿರಿಕ್ತವಾಗುವುದರಿಂದ ಈಗಾಗಲೇ ಪಶುಪಾಲನೆ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳನ್ನು ಪಾಲಿಕೆಯ ಸೇವೆಯಿಂದ ಬಿಡುಗಡೆಗೊಳಿಸುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುತ್ತಾರೆ. ಈ ವಿಷಯದ ಬಗ್ಗೆ ಸಭೆಯಲ್ಲಿ ಹಾಜರಿದ್ದ ಉಪ ಆಯುಕ್ತರು (ಆಡಳಿತ) ರವರೊಂದಿಗೆ ಚರ್ಚಿಸಲಾಗಿ, **'ಪ್ರಸ್ತಾವನೆಯಲ್ಲಿ ತಿಳಿಸಿರುವ ಅಧಿಕಾರಿ/ಸಿಬ್ಬಂದಿಗಳ ಸೇವೆಯು ಪಾಲಿಕೆಗೆ ಅವಶ್ಯಕತೆಯಿರುವುದಾಗಿ ತಿಳಿಸಿರುತ್ತಾರೆ'.** ಆದುದರಿಂದ ಈ ಪ್ರಕರಣದಲ್ಲಿ ಸದರಿ ಅಧಿಕಾರಿ/ಸಿಬ್ಬಂದಿಗಳ ಸೇವೆ ನಗರ ಪಾಲಿಕೆಗೆ ಅಗತ್ಯವಿದೆಯೇ ಅಥವಾ ಇಲ್ಲವೇ? ಎಂಬ ಬಗ್ಗೆ ಹಾಗೂ ಈಗಾಗಲೇ ಕರ್ತವ್ಯಕ್ಕೆ ಹಾಜರಾತಿ ಸಲ್ಲಿಸಿ ಸುಮಾರು ಐದಾರು ತಿಂಗಳುಗಳು ಆಗಿರುವುದರಿಂದ ವೇತನ ಮತ್ತು ಇತರೆ ಭತ್ಯೆಗಳನ್ನು ನೀಡುವ ಬಗ್ಗೆ ಕಾನೂನು ತೊಡಕಾಗುವುದರಿಂದ ಅಂತಿಮ ತೀರ್ಮಾನಕ್ಕಾಗಿ ಪಾಲಿಕೆ ಸಭೆಯ ಮುಂದೆ ಮಂಡಿಸುವುದೆಂದು ಸಮಿತಿಯು ತೀರ್ಮಾನಿಸಿತು.

## ***05]. ವಿಷಯದ ಸಂಖ್ಯೆಃ ತೆಆಸ್ಥಾಸ/164/2016-17***

ಆಯುಕ್ತರ ದಿನಾಂಕ: 25.02.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಸರ್ಕಾರದ ಆದೇಶ ಸಂಖ್ಯೆ:ನಅಇ 449 ಬೆಂಅಸೇ 2016, ಬೆಂಗಳೂರು ದಿನಾಂಕ: 14-09-2016ರ ಸರ್ಕಾರದ ಆದೇಶದನ್ವಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಶದಲ್ಲಿರುವ 60 ಕೆರೆಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸಲು ಸರ್ಕಾರವು ಆದೇಶ ಮಾಡಿರುತ್ತದೆ.

ಸರ್ಕಾರದ ಆದೇಶದಲ್ಲಿ ನಮೂದಿಸಿರುವ ಕೆರೆಗಳು ಕೆಳಕಂಡಂತೆ ಇರುತ್ತವೆ;

| **ಕ್ರ. ಸಂ.** | **ಹಸ್ತಾಂತರಿಸುವ ಕೆರೆಗಳ ಪಟ್ಟಿ** | **ತಾಲ್ಲೂಕು ಹೆಸರು** | **ಕೆರೆ ವಿಸ್ತೀರ್ಣ** | |
|---|---|---|---|---|
| | | | **ಎಕರೆ** | **ಗುಂಟೆ** |
| 1 | ಜಿಮ್‌ಕೆನಹಳ್ಳಿ ಕೆರೆ | ಬೆಂಗಳೂರು ಪೂರ್ವ | 8 | 24 |
| 2 | ಕಲ್ಕರೆ-ರಾಂಪುರ ಕೆರೆ | ಬೆಂಗಳೂರು ಪೂರ್ವ | 107 | 2 |
| 3 | ನಗರೇಶ್ವರ ನಾಗೇನಹಳ್ಳಿ ಕೆರೆ | ಬೆಂಗಳೂರು ಪೂರ್ವ | 11 | 8 |

| | | | | |
|---|---|---|---|---|
| 4 | ಚಿಕ್ಕಬೆಟ್ಟಹಳ್ಳಿ ಕೆರೆ | ಬೆಂಗಳೂರು ಉತ್ತರ | 1 | 32 |
| 5 | ಅಬ್ಬಿಗೆರೆ ಕೆರೆ | ಬೆಂಗಳೂರು ಉತ್ತರ–ಹೆಚ್ಚುವರಿ | 47 | 13 |
| 6 | ಬೆಲ್ಲಹಳ್ಳಿ ಕೆರೆ | ಬೆಂಗಳೂರು–ಉತ್ತರ–ಹೆಚ್ಚುವರಿ | 18 | 32 |
| 7 | ಲಕ್ಷ್ಮೀಪುರ ಕೆರೆ | ಬೆಂಗಳೂರು–ಉತ್ತರ–ಹೆಚ್ಚುವರಿ | 10 | 20 |
| 8 | ಶಿವನಹಳ್ಳಿ ಕೆರೆ | ಬೆಂಗಳೂರು ಉತ್ತರ–ಹೆಚ್ಚುವರಿ | 18 | 12 |
| 9 | ಶ್ರೀನಿವಾಸಪುರ ಕೆರೆ | ಬೆಂಗಳೂರು ಉತ್ತರ–ಹೆಚ್ಚುವರಿ | 3 | 14 |
| 10 | ವಡೇರಹಳ್ಳಿ ಕೆರೆ | ಬೆಂಗಳೂರು ಉತ್ತರ–ಹೆಚ್ಚುವರಿ | 9 | 34 |
| 11 | ವಿಭೂತಿಪುರ ಕೆರೆ | ಬೆಂಗಳೂರು ಪೂರ್ವ | 45 | 18 |
| 12 | ಕೋನಸಂದ್ರ ಕೆರೆ | ಬೆಂಗಳೂರು ದಕ್ಷಿಣ | 37 | 14 |
| 13 | ಕೋತ್ತನೂರು ಕೆರೆ | ಬೆಂಗಳೂರು ದಕ್ಷಿಣ | 18 | 9 |
| 14 | ಸೋಂಪುರ ಕೆರೆ | ಬೆಂಗಳೂರು ದಕ್ಷಿಣ | 18 | 20 |
| 15 | ತಲಘಟ್ಟಪುರ ಕೆರೆ | ಬೆಂಗಳೂರು ದಕ್ಷಿಣ | 19 | 16 |
| 16 | ವೆಂಟೇಶಪುರ ಕೆರೆ | ಬೆಂಗಳೂರು ಉತ್ತರ | 10 | 35 |
| 17 | ಬೆಳ್ಳಂದೂರು ಕೆರೆ | ಬೆಂಗಳೂರು ಪೂರ್ವ | 919 | 17 |
| 18 | ವರ್ತೂರು ಕೆರೆ | ಬೆಂಗಳೂರು ಪೂರ್ವ | 470 | 34 |
| 19 | ಹರಳುಕುಂಟೆ ಕೆರೆ / ಸೋಮಸಂದ್ರ ಕೆರೆ | ಬೆಂಗಳೂರು ದಕ್ಷಿಣ | 16 | 29 |
| 20 | ಮಹದೇವಪುರ ಕೆರೆ | ಬೆಂಗಳೂರು ಪೂರ್ವ | 13 | 11 |
| 21 | ಮೇಸ್ತ್ರೀಪಾಳ್ಯ ಕೆರೆ | ಬೆಂಗಳೂರು ದಕ್ಷಿಣ | 9 | 18 |
| 22 | ಜುನ್ನಸಂದ್ರ ಕೆರೆ | ಬೆಂಗಳೂರು ಪೂರ್ವ | 24 | 33 |
| 23 | ಸೀತಾರಾಂಪಾಳ್ಯ ಕೆರೆ | ಬೆಂಗಳೂರು ಪೂರ್ವ | 23 | 37 |
| 24 | ನಲ್ಲೂರಹಳ್ಳಿ ಕೆರೆ | ಬೆಂಗಳೂರು ಪೂರ್ವ | 47 | 39 |
| 25 | ಕೆಳಗಿನ ಕೆರೆ / ಬೈರಸಂದ್ರ ಕೆರೆ | ಬೆಂಗಳೂರು ಪೂರ್ವ | 12 | 21 |
| 26 | ಗುಂಜೂರು ಮೌಜಿ ಕೆರೆ | ಬೆಂಗಳೂರು ಪೂರ್ವ | 63 | 39 |
| 27 | ಗುಂಜೂರು ಪಾಳ್ಯ ಕೆರೆ | ಬೆಂಗಳೂರು ಪೂರ್ವ | 36 | 27 |
| 28 | ಆಲಹಳ್ಳಿ / ಅಂಜನಾಪುರ ಕೆರೆ | ಬೆಂಗಳೂರು ದಕ್ಷಿಣ | 21 | 25 |
| 29 | ಬಸಾಪುರ ಕೆರೆ | ಬೆಂಗಳೂರು ದಕ್ಷಿಣ | 10 | 29 |
| 30 | ಬಸವನಪುರ ಕೆರೆ | ಬೆಂಗಳೂರು ದಕ್ಷಿಣ | 7 | 94 |
| 31 | ಚೌಡೇಶ್ವರಿ ಕೆರೆ / ಬೆರಟನ ಅಗ್ರಹಾರ ಕೆರೆ | ಬೆಂಗಳೂರು ದಕ್ಷಿಣ | 11 | 34 |
| 32 | ಚಿಕ್ಕಬೇಗೂರು ಕೆರೆ | ಬೆಂಗಳೂರು ದಕ್ಷಿಣ | 43 | 5 |
| 33 | ಚುಂಚಘಟ್ಟ ಕೆರೆ | ಬೆಂಗಳೂರು ದಕ್ಷಿಣ | 20 | 31 |
| 34 | ದೇವರ ಕೆರೆ | ಬೆಂಗಳೂರು ದಕ್ಷಿಣ | 7 | 15 |
| 35 | ದೊಡ್ಡಕಲ್ಲಸಂದ್ರ ಕೆರೆ | ಬೆಂಗಳೂರು ದಕ್ಷಿಣ | 21 | 16 |
| 36 | ಗೌಡನಪಾಳ್ಯ ಕೆರೆ (ಕದಿರೇನಹಳ್ಳಿ) | ಬೆಂಗಳೂರು ದಕ್ಷಿಣ | 9 | 30 |
| 37 | ಗುಬ್ಬಲಾಳು ಕೆರೆ | ಬೆಂಗಳೂರು ದಕ್ಷಿಣ | 8 | 10 |
| 38 | ಹುಳಿಮಾವು ಕೆರೆ | ಬೆಂಗಳೂರು ದಕ್ಷಿಣ | 145 | 26 |
| 39 | ಕೋನಪ್ಪನ ಅಗ್ರಹಾರ ಕೆರೆ | ಬೆಂಗಳೂರು ದಕ್ಷಿಣ | 5 | 17 |
| 40 | ಲಿಂಗಧೀರನಹಳ್ಳಿ ಕೆರೆ | ಬೆಂಗಳೂರು ದಕ್ಷಿಣ | 5 | 22 |

| | | | | |
|---|---|---|---|---|
| 41 | ಮೀನಾಕ್ಷಿ ಕೆರೆ | ಬೆಂಗಳೂರು ದಕ್ಷಿಣ | 18 | 32 |
| 42 | ನ್ಯಾನಪ್ಪನಹಳ್ಳಿ ಕೆರೆ | ಬೆಂಗಳೂರು ದಕ್ಷಿಣ | 6 | 7 |
| 43 | ಪಟ್ಟಣಗೆರೆ / ಕೆಂಚನಹಳ್ಳಿ ಕೆರೆ | ಬೆಂಗಳೂರು ದಕ್ಷಿಣ | 4 | 30 |
| 44 | ಸುಬೇದಾರನ ಕೆರೆ | ಬೆಂಗಳೂರು ದಕ್ಷಿಣ | 6 | 5 |
| 45 | ವರಹಸಂದ್ರ ಕೆರೆ | ಬೆಂಗಳೂರು ದಕ್ಷಿಣ | 17 | 20 |
| 46 | ವಸಂತಪುರ ಕೆರೆ | ಬೆಂಗಳೂರು ದಕ್ಷಿಣ | 7 | 10 |
| 47 | ಎಲ್ಲೇನಹಳ್ಳಿ ಕೆರೆ | ಬೆಂಗಳೂರು ದಕ್ಷಿಣ | 4 | 39 |
| 48 | ಚಿಕ್ಕಮ್ಮನಹಳ್ಳಿ ಕೆರೆ | ಬೆಂಗಳೂರು ದಕ್ಷಿಣ | 6 | 19 |
| 49 | ಸ್ವರ್ಣಕುಂಟೆ ಗುಡ್ಡೆ ಕೆರೆ | ಬೆಂಗಳೂರು ದಕ್ಷಿಣ | 9 | 5 |
| 50 | ಭೀಮಪ್ಪನಕುಪ್ಪೆ ಕೆರೆ | ಬೆಂಗಳೂರು ದಕ್ಷಿಣ | 39 | 24 |
| 51 | ಚಿಕ್ಕಬಸ್ತಿ ಕೆರೆ | ಬೆಂಗಳೂರು ದಕ್ಷಿಣ | 7 | 2.7 |
| 52 | ಗಾಂಧಿನಗರ ಕೆರೆ (ಹೊಸಕೆರೆ) | ಬೆಂಗಳೂರು ಉತ್ತರ | 43 | 30 |
| 53 | ಕನ್ನಲ್ಲಿ ಕೆರೆ | ಬೆಂಗಳೂರು ದಕ್ಷಿಣ | 68 | 19 |
| 54 | ಕೆಂಚನಪುರ ಕೆರೆ | ಬೆಂಗಳೂರು ದಕ್ಷಿಣ | 17 | 20 |
| 55 | ನರಸಪ್ಪನಹಳ್ಳಿ ಕೆರೆ | ಬೆಂಗಳೂರು ಉತ್ತರ | 53 | 24 |
| 26 | ಶ್ರೀಗಂಧಕಾವಲು ಕೆರೆ | ಬೆಂಗಳೂರು ಉತ್ತರ | 6 | 33 |
| 57 | ಸೂಲಿ ಕೆರೆ | ಬೆಂಗಳೂರು ದಕ್ಷಿಣ | 53 | 7 |
| 58 | ದೊಡ್ಡಬಿದರಕಲ್ಲು ಕೆರೆ | ಬೆಂಗಳೂರು ಉತ್ತರ | 40 | 5 |
| 59 | ಕೆ.ಆರ್.ಪುರಂ (ಬಿ.ಇ.ಎಂ.ಎಲ್ ಕೆರೆ)–ಬೆನ್ನಿಗಾನಹಳ್ಳಿ ಕೆರೆ | ಬೆಂಗಳೂರು ಪೂರ್ವ | 45 | 39 |
| 60 | ಕೋಣನಕುಂಟೆ ಕೆರೆ | ಬೆಂಗಳೂರು ದಕ್ಷಿಣ | 10 | 14 |

ಪ್ರಸ್ತುತ ಪಾಲಿಕೆಯ ವ್ಯಾಪ್ತಿಯಲ್ಲಿ ಇರುವ 90 ಜೀವಂತ (ಕೆರೆಗಳನ್ನು) ನಿರ್ವಹಣೆ ಮಾಡುತ್ತಿದ್ದು, ಈ ಪೈಕಿ 55 ಕೆರೆಗಳನ್ನು ಅಭಿವೃದ್ಧಿಪಡಿಸಲಾಗಿದೆ. ಉಳಿದ ಕೆರೆಗಳನ್ನು ಹಂತ ಹಂತವಾಗಿ ಅಭಿವೃದ್ಧಿಪಡಿಸಲು ರಾಜ್ಯ ಸರ್ಕಾರವು 2016–17ನೇ ಸಾಲಿನಲ್ಲಿ ನಗರೋತ್ಥಾನ ಅನುದಾನದಲ್ಲಿ ರೂ.106 ಕೋಟಿಗಳನ್ನು ಮತ್ತು ರಾಜ್ಯ ಸರ್ಕಾರದ ಸರೋವರ ಅಭಿವೃದ್ಧಿ ಅನುದಾನದಲ್ಲಿ ರೂ.50.00 ಕೋಟಿಗಳನ್ನು ಒದಗಿಸಿದ್ದು ಕ್ರಿಯಾ ಯೋಜನೆಯು ಸರ್ಕಾರದಿಂದ ಅನುಮೋದನೆಗೊಂಡಿರುತ್ತದೆ.

ದಿನಾಂಕ: 14–09–2016ರ ಸರ್ಕಾರದ ಆದೇಶದ ಪ್ರಸ್ತಾವನೆಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಶದಲ್ಲಿರುವ ಕೆರೆಗಳ ಅಭಿವೃದ್ಧಿಗಾಗಿ ಸುಮಾರು ರೂ.2000.00 ಕೋಟಿಗಳಿಗಿಂತ ಹೆಚ್ಚು ಆರ್ಥಿಕ ಸಂಪನ್ಮೂಲದ ಅವಶ್ಯವಿದ್ದು, ಪ್ರಸ್ತುತ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆರ್ಥಿಕ ಸ್ಥಿತಿಯು ಉತ್ತಮವಾಗಿಲ್ಲದಿರುವ ಕಾರಣ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನಗರಕ್ಕೆ ಅನೇಕ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬೃಹತ್ ಯೋಜನೆಗಳನ್ನು ಕೈಗೊಳ್ಳಲು ಕಷ್ಟಸಾಧ್ಯವಾಗಿದ್ದು, ಇದರ ಜೊತೆಯಲ್ಲಿ ಕೆರೆಗಳ ನಿರ್ವಹಣೆ ಮತ್ತು ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತಿಲ್ಲವೆಂದು ತಿಳಿಸಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾರ್ಯವ್ಯಾಪ್ತಿಯಲ್ಲಿರುವ 91 ಕೆರೆಗಳ ಪೈಕಿ 60 ಕೆರೆಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸುತ್ತಿರುವುದಾಗಿ ತಿಳಿಯಪಡಿಸಲಾಗಿದೆ.

ಸರ್ಕಾರದ ಆದೇಶದಂತೆ 60 ಕೆರೆಗಳನ್ನು ಪಾಲಿಕೆಗೆ ಹಸ್ತಾಂತರಿಸಿಕೊಂಡಲ್ಲಿ ಇವುಗಳ ಅಭಿವೃದ್ಧಿ ಹಾಗೂ ನಿರ್ವಹಣೆಗೆ ಈ ಸಾಲಿನಲ್ಲಿ ಯಾವುದೇ ಅನುದಾನದ ಲಭ್ಯತೆ ಇರುವುದಿಲ್ಲ. ಪ್ರಸ್ತುತ ಸರ್ಕಾರವು

ನೀಡಿರುವ ಅನುದಾನ (2016-17) ವನ್ನು ಪಾಲಿಕೆ ವಶದಲ್ಲಿರುವ ಕೆರೆಗಳ ಅಭಿವೃದ್ಧಿಗಾಗಿ ಬಳಸಲಾಗುತ್ತಿದೆ.

ಪಾಲಿಕೆಗೆ ಹಸ್ತಾಂತರಿಸಲು ಉದ್ದೇಶಿಸಿರುವ 60 ಕೆರೆಗಳ ಪೈಕಿ ಬೆಳ್ಳಂದೂರು ಕೆರೆ (ಸುಮಾರು 919 ಎಕರೆ ವಿಸ್ತೀರ್ಣ) ಮತ್ತು ವರ್ತೂರು ಕೆರೆ (ಸುಮಾರು 470 ಎಕರೆ ವಿಸ್ತೀರ್ಣ) ಗಳು ಅತಿ ದೊಡ್ಡ ಕೆರೆಗಳಾಗಿದ್ದು ಈ ಎರಡು ಕೆರೆಗಳ ಅಭಿವೃದ್ಧಿಗಾಗಿಯೇ ಸುಮಾರು ರೂ.750 ಕೋಟಿ ಅನುದಾನದ ಅವಶ್ಯಕತೆ ಇರುತ್ತದೆ. ಅಲ್ಲದೆ ಇತರೆ ಕೆರೆಗಳ ಸಮಗ್ರ ಅಭಿವೃದ್ಧಿಗಾಗಿ ಮತ್ತು ನಿರ್ವಹಣೆಗಾಗಿ ಐದು ವರ್ಷಗಳ ಕಾಲಾವಧಿಯಲ್ಲಿ ಪ್ರತಿ ವರ್ಷ ಕನಿಷ್ಠ ರೂ.200.00 ಕೋಟಿಗಳ ಅನುದಾನದ ಅವಶ್ಯಕತೆ ಇರುತ್ತದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶದಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ 60 ಕೆರೆಗಳನ್ನು ಪಾಲಿಕೆಯ ವಶಕ್ಕೆ ಪಡೆಯುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೋಟಗಾರಿಕೆ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಭೆಯ ಮುಂದೆ ಟಿಪ್ಪಣಿಯನ್ನು ಮಂಡಿಸಲಾಗಿತ್ತು.

ಸದರಿ ವಿಷಯವಾಗಿ ತೋಟಗಾರಿಕೆ ಸ್ಥಾಯಿ ಸಮಿತಿಯು ದಿನಾಂಕ: 11-01-2017 ರಂದು ನಡೆದ ಸಮಿತಿಯ ಸಭೆಯಲ್ಲಿ ಸದರಿ ವಿಷಯವನ್ನು ಪಾಲಿಕೆಯ ಕೌನ್ಸಿಲ್ ಸಭೆಯ ಮುಂದೆ ಮಂಡಿಸಲು ತೀರ್ಮಾನಿಸಲಾಗಿರುತ್ತದೆ. ಇದರಂತೆ ಈ ವಿಷಯವಾಗಿ **ದಿನಾಂಕ: 30.01.217ರಂದು ನಡೆದ ಪಾಲಿಕೆಯ ಕೌನ್ಸಿಲ್ ಸಭೆಯಲ್ಲಿ "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯಕ್ಕಾಗಿ ಕಡತವನ್ನು ಸಮಿತಿಗೆ ಕಳುಹಿಸಿ, ಸಮಿತಿಯ ನಿರ್ಣಯದೊಂದಿಗೆ ಕಡತವನ್ನು ಕೌನ್ಸಿಲ್ ಸಭೆಗೆ ಮರು ಮಂಡಿಸಲು ಅಗತ್ಯ ಕ್ರಮವಹಿಸುವದು" ಎಂಬುದಾಗಿ ನಿರ್ಣಯವಾಗಿರುತ್ತದೆ. ಈ ಮೇರೆಗೆ ಸದರಿ ವಿಷಯವಾಗಿ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.**

**ನಿರ್ಣಯ: ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ 60 ಕೆರೆಗಳ ಅಭಿವೃದ್ಧಿಗಾಗಿ ಸರ್ಕಾರದಿಂದ ಅನುದಾನ ಕೋರುವ ಬಗ್ಗೆ ಕೌನ್ಸಿಲ್ ಸಭೆಯ ಮುಂದೆ ಮಂಡಿಸುವುದೆಂದು ಸಮಿತಿಯು ತೀರ್ಮಾನಿಸಿತು**

## ***06]. ವಿಷಯದ ಸಂಖ್ಯೆಃ ತೆಆಸ್ಥಾಸ/168/2016-17***

ಮಾನ್ಯ ಆಯುಕ್ತರ ದಿ: 21-01-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ ಸಂಖ್ಯೆ: 137ರ ಶ್ರೀಮತಿ.ಅಹಲ್ಯ ಚಿತ್ತರಂಜನ್ ರವರು ಸ್ವತ್ತಿನ ಸಂಖ್ಯೆ:10, (ಹಳೆದು 315), 2ನೇ ಅಡ್ಡರಸ್ತೆ, ಎನ್.ಆರ್.ಕಾಲೋನಿ, ಈ ಸ್ವತ್ತನ್ನು ಪಾಲಿಕೆಯಿಂದ 1949 ರಲ್ಲಿ ಹರಾಜು ಮುಖಾಂತರ ಪಡೆದಿದ್ದು, ಕ್ರಯಪತ್ರ ಪಡೆಯದೇ ಇರುವುದರಿಂದ ಕ್ರಯಪತ್ರ ನೀಡಲು ಕೋರಿರುತ್ತಾರೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮೂಲ ಖಾತೆದಾರರಾದ ಶ್ರೀಮತಿ. ಪಾರ್ವತಮ್ಮ ರವರಿಗೆ ಸ.ಆ.ಸಂಖ್ಯೆ:2012/3/ಎಂಐ-67-48-100, ದಿನಾಂಕ:17-08-1949ರ ಸರ್ಕಾರಿ ಆದೇಶದಂತೆ ಸಾರ್ವಜನಿಕ ಹರಾಜಿನ ಮೂಲಕ ಖರೀದಿಸಿದ ಸ್ವತ್ತನ್ನು ಸ್ಥಿರೀಕರಿಸಲಾಗಿದೆ. ತದನಂತರ ಅದರಂತೆ ಕೆಲವೊಂದು ನಿಬಂಧನೆಗಳನ್ನು ವಿಧಿಸಿ, ಅಗ್ರಿಮೆಂಟ್ ಪತ್ರದ ನೊಂದಣಿ ಸಂಖ್ಯೆ:10/1950-1951, ದಿನಾಂಕ:17-10-1950 ರಂದು ಉಪ ನೊಂದಾಣಾಧಿಕಾರಿ, ಬೆಂಗಳೂರು ನಗರ ಉತ್ತರ, ಬೆಂಗಳೂರು ರವರ ಮುಖಾಂತರವಾಗಿ ಆಯುಕ್ತರು, ಕಾರ್ಪೋರೇಷನ್ ಸಿಟಿ ಬೆಂಗಳೂರು ರವರು ಸ್ವತ್ತಿನ ಕರಾರು ಪತ್ರ ಮಾಡಿಕೊಟ್ಟಿದ್ದು ನೊಂದಾಯಿಸಲಾಗಿದೆ. ಸ್ವತ್ತಿನ ವಿಸ್ತೀರ್ಣ 40x60=2400 ಚದರಡಿಗಳಾಗಿರುತ್ತದೆ.

ತದನಂತರ ಶ್ರೀ.ವಿ.ಗುರುರಾಜ್ ರವರಿಗೆ ನೊಂದಾಯಿತ ಶುದ್ಧ ಕ್ರಯಪತ್ರದ (ಈ ಕ್ರಯಪತ್ರದ ನೊಂದಾವಣಿ ಸಂಖ್ಯೆ:3941/1974-1975, ದಿನಾಂಕ:04-12-1974 ರಂದು ಹಿರಿಯ ಉಪ ನೊಂದಾಣಾಧಿಕಾರಿ, ಚಾಮರಾಜಪೇಟೆ, ಬೆಂಗಳೂರು) ಮುಖಾಂತರವಾಗಿ ಶ್ರೀಮತಿ.ಪಾರ್ವತಮ್ಮ

ರವರಿಂದ ಸ್ವತ್ತಿನ ನಿವೇಶನದ ವಿಸ್ತೀರ್ಣ 40x60=2400 ಚದರಡಿಗಳ ಪೈಕಿ ಆಧಾರ 16x40=640 ಚದರಡಿಗಳನ್ನು ಪಡೆದುಕೊಂಡು, ನಗರ ಪಾಲಿಕೆಯಲ್ಲಿ ಸ್ವತ್ತಿನ ಸಂಖ್ಯೆ:10/1 ಎಂದು ಖಾತಾ ನೊಂದಾಯಿಸಲ್ಪಟ್ಟಿದೆ.

ಶ್ರೀಮತಿ.ಪಾರ್ವತಮ್ಮ ರವರು ಉಳಿಸಿಕೊಂಡಿರುವ ಉಳಿಕೆ ವಿಸ್ತೀರ್ಣ 40x44=1760 ಚದರಡಿಗಳಲ್ಲಿ ಶ್ರೀ.ವಿ.ಗುರುರಾಜ್ ರವರಿಗೆ ಓಡಾಡಲು ದಾರಿಯಾಗಿ ವಿಸ್ತೀರ್ಣ 3x44=132 ಅಡಿಗಳಾಗಿದ್ದು, ನಂತರ ಶ್ರೀಮತಿ.ಪಾರ್ವತಮ್ಮ ರವರ ಭಾಗಕ್ಕೆ ಉಳಿದಿರುವ ವಿಸ್ತೀರ್ಣ 44x37=1628 ಚದರಡಿಗಳಾಗಿರುತ್ತದೆ.

ಆರ್.ಎಸ್.ಪಾರ್ವತಮ್ಮ ರವರು ದಿನಾಂಕ:02-08-1993 ರಂದು ಮರಣ ಹೊಂದಿದ್ದು, ಇವರ ಪತಿಯಾದ ನಾರಾಯಣಸ್ವಾಮಿ.ಆರ್ ರವರು ದಿನಾಂಕ:28-12-1972 ರಂದು ಮರಣ ಹೊಂದಿರುತ್ತಾರೆ. ಸದರಿಯವರ ಮರಣ ಸಮರ್ಥನ ಪತ್ರವನ್ನು ಇದರೊಂದಿಗೆ ಲಗತ್ತಿಸಿದೆ.

ಆರ್.ಎಸ್.ಪಾರ್ವತಮ್ಮ ಮತ್ತು ನಾರಾಯಣಸ್ವಾಮಿ.ಆರ್ ಈ ದಂಪತಿಗಳಿಗೆ ದಿನಾಂಕ: 12-10-1972 ರಂದು ನೀಡಿರುವ ವಂಶವೃಕ್ಷದ ಪ್ರಕಾರ ಶ್ರೀಮತಿ.ಆರ್.ಎನ್.ಕಮಲಮ್ಮ, ಡಾ॥ ಆರ್.ಎನ್.ಶ್ರೀನಾಥ್, ಶ್ರೀಮತಿ.ಉಷಾಮಣಿ, ಶ್ರೀಮತಿ.ಆರ್.ಎನ್.ಆಹಲ್ಯ, ಶ್ರೀ.ಆರ್.ಎನ್.ವಿಶ್ವನಾಥ್, ಶ್ರೀಮತಿ.ಆರ್.ಭಾರ್ಗವಿ, ಶ್ರೀ.ಆರ್.ಎನ್.ಮುಕುಂದ, ಡಾ॥ಆರ್.ಎನ್.ಶ್ರೀಧರ್, ಶ್ರೀಮತಿ. ಆರ್.ಎನ್.ಲಲಿತ, ಶ್ರೀ.ಆರ್.ಎನ್.ರವಿಶಂಕರ್ ಮಕ್ಕಳಿರುತ್ತಾರೆ ಎಂದು ವಂಶವೃಕ್ಷವನ್ನು ನೀಡಿರುತ್ತಾರೆ.

ಶ್ರೀಮತಿ.ಆಹಲ್ಯ ಚಿತ್ತರಂಜನ್ ರವರ ಹೆಸರಿಗೆ ಸ್ವತ್ತನ್ನು ನೊಂದಾಯಿತ ಜನರಲ್ ಫವರ್ ಆಫ್ ಆಟ್ನಾರ್ನಿ ಮೂಲಕ (ನೊಂದಾವಣಿ ಸಂಖ್ಯೆ:79/2010-2011, ದಿನಾಂಕ:30-07-2010 ರಂದು ಹಿರಿಯ ಉಪ ನೊಂದಾಣಾಧಿಕಾರಿ, ಬಸವನಗುಡಿ, ಬೆಂಗಳೂರು) ಶ್ರೀಮತಿ.ಆರ್.ಎನ್. ಕಮಲಮ್ಮ, ಡಾ॥ಆರ್.ಎನ್.ಶ್ರೀನಾಥ್,ಶ್ರೀಮತಿ.ಉಷಾ.ಸಿ.ಶೇಖರ್, ಶ್ರೀ.ಆರ್.ಎನ್.ವಿಶ್ವನಾಥ್, ಡಾ॥ಆರ್.ಎನ್.ಶ್ರೀಧರ್, ಶ್ರೀಮತಿ.ಆರ್.ಎನ್.ಲಲಿತ, ಶ್ರೀ.ಆರ್.ಎನ್.ರವಿಶಂಕರ್ ರವರುಗಳು ನೀಡಿದ್ದು, ಸ್ವತ್ತಿನ ಅಳತೆ 44x40=1760 ಚದರಡಿಗಳೆಂದು ನಮೂದಿಸಿದ್ದು, 3x44=132 ಚದರಡಿಗಳ ಬಹುತ್ವದ ದಾರಿ ಹೊರತುಪಡಿಸಿದಲ್ಲಿ, ಉಳಿಕೆ ವಿಸ್ತೀರ್ಣ 44x37=1628 ಚದರಡಿಗಳಾಗಿರುತ್ತದೆ.

ಈ ಜನರಲ್ ಫವರ್ ಆಫ್ ಆಟ್ನಾರ್ನಿ ಮೂಲಕ ಎಲ್ಲರೂ ತಮ್ಮ ಹಕ್ಕನ್ನು ಶ್ರೀಮತಿ.ಅಹಲ್ಯ ಚಿತ್ತರಂಜನ್ ರವರಿಗೆ ನೀಡಿರುವುದರಿಂದ ಸದರಿಯವರಿಗೆ ನಗರ ಪಾಲಿಕೆಯಿಂದ ಶುದ್ಧ ಕ್ರಯಪತ್ರವನ್ನು ಮಾಡಿಕೊಡಲು ಕೋರಿರುವ ಮೇರೆಗೆ, ಪೂರ್ವ ಪಶ್ಚಿಮ 44 ಅಡಿಗಳು ಮತ್ತು ಉತ್ತರ ದಕ್ಷಿಣ 37 ಅಡಿಗಳಾಗಿದ್ದು, ಸದರಿ ಸ್ವತ್ತಿಗೆ ಈ ಕೆಳಕಂಡಂತೆ ಚಕ್ಕುಬಂದಿ ಇರುತ್ತದೆ.

| | | |
|---|---|---|
| ಪೂರ್ವಕ್ಕೆ | : | 3x44 ಅಡಿಗಳ ಪ್ಯಾಸೇಜ್ |
| ಪಶ್ಚಿಮಕ್ಕೆ | : | ಖಾಸಗಿ ಸ್ವತ್ತು |
| ಉತ್ತರಕ್ಕೆ | : | ಸೀಮಾ ಗುರುರಾಜ್ ರವರ ಸ್ವತ್ತು |
| ದಕ್ಷಿಣಕ್ಕೆ | : | 2ನೇ ಅಡ್ಡರಸ್ತೆ ಎನ್.ಆರ್.ಕಾಲೋನಿ |

ಕಂಡಿಕೆ (45) ರಲ್ಲಿ ಉಪ ಆಯುಕ್ತರು (ಆಸ್ತಿಗಳು) ರವರ ಅವಲೋಕನದಂತೆ ಪರಿಶೀಲಿಸಲಾಗಿ, ಮೂಲತ: ಹರಾಜಿನಲ್ಲಿ ಸ್ವತ್ತು ಪಡೆದುಕೊಂಡ ಶ್ರೀಮತಿ.ಆರ್.ಎಸ್.ಪಾರ್ವತಮ್ಮ ರವರಿಗೆ ಇಲ್ಲಿಯವರೆವಿಗೂ ಯಾವುದೇ ಕ್ರಯಪತ್ರವನ್ನು ನಗರ ಪಾಲಿಕೆಯಲ್ಲಿ ಮಾಡಿಕೊಟ್ಟಿರುವುದಿಲ್ಲ ಮತ್ತು ನಗರ ಪಾಲಿಕೆಯಿಂದ ಈ ಹಿಂದೆ ನೀಡಿದ್ದ ಅಗ್ರಿಮೆಂಟ್ ಪತ್ರದ ಆಧಾರದ ಮೇಲೆ ಸುಮಾರು ವರ್ಷಗಳ ಹಿಂದೆಯೇ ಶ್ರೀಮತಿ.ಆರ್.ಎಸ್.ಪಾರ್ವತಮ್ಮ ರವರಿಗೆ ನಗರ ಪಾಲಿಕೆಯಿಂದ ಸ್ವತ್ತಿಗೆ ಮುನ್ಸಿಪಲ್ ಸಂಖ್ಯೆ:10, 2ನೇ ಅಡ್ಡರಸ್ತೆ, ಎನ್.ಆರ್.ಕಾಲೋನಿ, ವಾರ್ಡ್-51/154 ಖಾತಾ

ನೊಂದಾವಣೆಯಾಗಿರುತ್ತದೆ. ಈ ಬಗ್ಗೆ ಸಂಬಂಧಪಟ್ಟ ಭೂಮಾಪಕರಿಂದ ವರದಿ ಪಡೆಯಲಾಗಿದ್ದು, ಕಂಡಿಕೆ (93) ಮತ್ತು (94) ಅನ್ನು ಅವಗಾಹಿಸಬಹುದಾಗಿದೆ.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆ ಮುಂದೆ ದಿನಾಂಕ:14-12-2011ರ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಮಂಡಿಸಲಾಗಿದ್ದು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ದಿನಾಂಕ:20-06-2012 ವಿಷಯ ಸಂಖ್ಯೆ:ತೆಆಸ್ಥಾಸ/61/2012-13ರ ಸಭೆಯ ನಡವಳಿಯಲ್ಲಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ಥಳ ತನಿಖೆ ಮಾಡಿ ಕೆಲವು ಮಾಹಿತಿಯನ್ನು ಒದಗಿಸಲು ಕೋರಿರುತ್ತಾರೆ. ಅದರಂತೆ, ಈ ಬಗ್ಗೆ ಕಂಡಿಕೆ (90) ರಲ್ಲಿ ವಿವರಿಸಿರುವಂತೆ ಹಾಗೂ ಸ್ಥಳ ತನಿಖೆ ಮಾಡಿ ಈ ಕೆಳಕಂಡಂತೆ ವರದಿಸಿದೆ.

1. ಸದರಿ ಸ್ವತ್ತಿನಲ್ಲಿ ಅರ್ಜಿದಾರರ ವಂಶಸ್ಥರು ವಾಸವಿರುವುದು ಕಂಡು ಬರುತ್ತದೆ. ಈ ಬಗ್ಗೆ ಪುಟ ಸಂಖ್ಯೆ:112 ರಲ್ಲಿ ತಹಶೀಲ್ದಾರ್ ಬೆಂಗಳೂರು ದಕ್ಷಿಣ ತಾಲ್ಲೂಕು ರವರು ದಿನಾಂಕ:13-11-2014 ರಂದು ನೀಡಿರುವ ವಾಸದ ದೃಢೀಕರಣ ಪತ್ರದಲ್ಲಿ ಶ್ರೀಮತಿ.ಅಹಲ್ಯ ಚಿತ್ತರಂಜನ್ W/o ಚಿತ್ತರಂಜನ್ ರವರು ನಂ:10, 2ನೇ ಕ್ರಾಸ್, ಎನ್.ಆರ್.ಕಾಲೋನಿ, ಬನಶಂಕರಿ, ಬೆಂಗಳೂರು ಎಂದು ನಮೂದಿಸಿರುತ್ತಾರೆ.
2. ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ಕಡತದಲ್ಲಿ ಪುಟ ಸಂಖ್ಯೆ:63 ರಿಂದ 73ರ ವರೆಗೆ ಅವಗಾಹನೆಗೆ ಮಂಡಿಸಿದೆ. ಕ್ರಯಪತ್ರದ ನೊಂದಾಣಿ ಪತ್ರದ ಸಂಖ್ಯೆ:2230/50-51 ದಿನಾಂಕ:06-10-1950 ಹಾಗೂ ನೊಂದಾಣಿ ಪತ್ರ ಸಂಖ್ಯೆ:3941/1974-75ರ ಲಭ್ಯ ಮೂಲ ದಾಖಲೆಗಳನ್ನು ಅವಗಾಹನೆಗೆ ಮಂಡಿಸಿದೆ.
3. ಅರ್ಜಿದಾರರ ಶ್ರೀಮತಿ.ಅಹಲ್ಯ ಚಿತ್ತರಂಜನ್ ರವರು ಸದರಿ ಸ್ವತ್ತಿನ ಉತ್ತರಾಧಿಕಾರಿ ಎನ್ನುವ ಕುರಿತು ಪತ್ರ (Succession Certificate) ಪುಟ ಸಂಖ್ಯೆ:119 ರಲ್ಲಿ ತಹಶೀಲ್ದಾರ್ ಬೆಂಗಳೂರು ದಕ್ಷಿಣ ತಾಲ್ಲೂಕು ರವರು ನೀಡಿರುವ ಉತ್ತರಾಧಿಕಾರಿ ಪತ್ರ Surviving family member certificate ಒದಗಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಈ ಹಿಂದೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 20-06-2012 ವಿಷಯ ಸಂಖ್ಯೆ:ತೆಆಸ್ಥಾಸ/61/2012-13 ಸಭೆಯ ನಡವಳಿಯಲ್ಲಿ ಗಮನಿಸಿದ ಕೆಲವು ಅಂಶಗಳಿಗೆ ಮಾಹಿತಿಯನ್ನು ಸಂಗ್ರಹಿಸಿ ಮೇಲಿನ ವಿವರಣೆ ಆಧಾರದೊಂದಿಗೆ ಕ್ರಯಪತ್ರ ಮಾಡಿಕೊಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ **ದಿನಾಂಕ: 21-01-2017ರ ಮಾನ್ಯ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ ಶ್ರೀಮತಿ ಅಹಲ್ಯ ಚಿತ್ತರಂಜನ್‌ರವರ ಸ್ವತ್ತಿಗೆ ಶುದ್ಧ ಕ್ರಯಪತ್ರವನ್ನು ನೀಡಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 16.02.2017ರ ಸಭೆಯ ನಿರ್ಣಯ.**

**ನಿರ್ಣಯ: ಆಯುಕ್ತರ ದಿನಾಂಕ: 21-01-2017ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು**

## ***07]. ವಿಷಯದ ಸಂಖ್ಯೆ: ತೆಆಸ್ಥಾಸ/171/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 06.03.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ದಿನಾಂಕ: 23.01.2017 ರಂದು ಮಾನ್ಯ ಪಾಲಿಕೆ ಸದಸ್ಯರು ವಾರ್ಡ್ ಸಂ:54ರವರು ಮಾನ್ಯ ಆಯುಕ್ತರು

ರವರಿಗೆ ವಿಳಾಸಿಸಿ ಪತ್ರ ನೀಡಿ ವಾರ್ಡ್ ಸಂಖ್ಯೆ:54 ಹೂಡಿ ವ್ಯಾಪ್ತಿಯ ಒಳಪಟ್ಟು 20 ಅಭಿವೃದ್ಧಿ ಕಾಮಗಾರಿಗಳನ್ನು 2013–14 ಹಾಗೂ 2014–15ನೇ ಸಾಲಿನ ಲೆಕ್ಕಶೀರ್ಷಿಕೆ ಪಿ–1771 ಹಾಗೂ ಪಿ–2201 ಅನುದಾನದಡಿ ವಿವಿಧ ದಿನಾಂಕಗಳಂದು ಒಟ್ಟು ರೂ.335.96 ಲಕ್ಷಗಳಿಗೆ ಕಾಮಗಾರಿ ಸಂಕೇತ ನೀಡಿರುವ ಕಾಮಗಾರಿಗಳನ್ನು ಫ್ರೀಜ್ ಮಾಡಿರುವುದನ್ನು ಡಿ–ಫ್ರೀಜ್ ಮಾಡಲು ಕೋರಿದ್ದು, ಕಾಮಗಾರಿಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| Sl no | Name of the work | Job code | Est Amount |
|---|---|---|---|
| 1. | Improvement to roads at Kumbena Agrhara village in Hoody ward no: 54 | 054-13-000015 | 19.99 |
| 2. | Improvement to drains & roads at Kumbena Agrhara village in Hoody ward no: 54 | 054-13-000016 | 10.00 |
| 3. | Improvements to roads at Belathur village in ward no:54 | 054-14-000019 | 19.98 |
| 4. | Improvements to roads at Sadaramangala village in ward no:54 | 054-14-000016 | 10.00 |
| 5. | Improvements to cross roads in Bilishivale & Geddalahalli road at Byrathi village in Hoody ward no:54 | 054-13-000007 | 19.99 |
| 6. | Improvement to roads and drains at Ramaiah layout, Chikkabyrathi in Byarathi village in ward no-54 | 054-14-000009 | 10.00 |
| 7. | Improvement to roads and drains at Byarathi Bande village in ward no-54 | 054-15-000003 | 10.00 |
| 8. | Improvement to balance roads and drains at Byarathi Village in ward no-54 | 054-15-000004 | 10.00 |
| 9. | Improvement to roads and drains at Ayyappanagara (phase-1) in ward no -54 | 054-15-000005 | 20.00 |
| 10. | Improvement to roads and drains at Ayyappanagara (phase-2) in ward no -54 | 054-15-000006 | 20.00 |
| 11. | Improvement to roads and drains at Ayyappanagara (phase-3) in ward no -54 | 054-15-000007 | 20.00 |
| 12. | Improvement to roads and drains at Ayyappanagara (phase-4) in ward no -54 | 054-15-000008 | 20.00 |
| 13. | Improvement to roads and drains at Ayyappanagara (phase-5) in ward no -54 | 054-15-000009 | 20.00 |
| 14. | Improvement to roads and drains at Sadaramangala village in ward no -54 | 054-15-000010 | 11.00 |
| 15. | Improvement to roads and drains at Kumbena agrahara in ward no -54 | 054-15-000011 | 15.00 |
| 16. | Improvement to roads and drains at From Beltur to Kadugudi in ward no -54 | 054-15-000012 | 20.00 |
| 17. | Development of roads in Varnasi Chikkaramaiah Layout in Hoody ward no:54 | 054-13-000028 | 20.00 |
| 18. | Development of roads in Ramaiah layout at Varnasi in Hoody ward no:54 | 054-13-000029 | 20.00 |
| 19. | Development of Cross roads at Kumbena Agrahara in | 054-13-000033 | 20.00 |

| | | | |
|---|---|---|---|
| | Hoody ward no:54 | | |
| 20. | Asphalting to cross roads of Hanumanthanagara at Bilishivale in Hoody ward no:54 | 054-13-000035 | 20.00 |

ಪಾಲಿಕೆಯ ಮುಖ್ಯ ಆರ್ಥಿಕ ಲೆಕ್ಕಾಧಿಕಾರಿಗಳು ವರದಿ ಮಾಡಿರುವಂತೆ 2016–17ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ–1771ನ Spill over works ಗಳಿಗಾಗಿ ರೂ.7500.00 ಲಕ್ಷಗಳ ಮತ್ತು Pending Bills ಗಳಿಗಾಗಿ ರೂ.9000.00 ಲಕ್ಷಗಳ ಅನುದಾನ ಮೀಸಲಿರಿಸಿದ್ದು, ಲೆಕ್ಕಶೀರ್ಷಿಕೆ ಪಿ–2201 ಅಡಿ Spill over works ಗಳಿಗಾಗಿ ರೂ.1000.00 ಲಕ್ಷಗಳ ಮತ್ತು Pending Bills ಗಳಿಗಾಗಿ ರೂ.1000.00 ಲಕ್ಷಗಳ ಅನುದಾನ ಮೀಸಲಿರಿಸಿದ್ದು Spill over works/Pending Bills ಗಳ ಪಟ್ಟಿಯಲ್ಲಿ ಸೇರ್ಪಡೆಗೊಂಡಿರುವ ಬಗ್ಗೆ ಪ್ರಧಾನ ಅಭಿಯಂತರರು ವರದಿ ನೀಡಬೇಕಿದೆ ಎಂದು ತಿಳಿಸಿರುತ್ತಾರೆ.

ಮುಖ್ಯ ಅಭಿಯಂತರರು (ಮಹದೇವಪುರ) ರವರು ವರದಿ ಮಾಡಿರುವಂತೆ ಮೇಲ್ಕಾಣಿಸಿದ ಎಲ್ಲಾ ಕಾಮಗಾರಿಗಳು ಮುಂದುವರೆದ ಕಾಮಗಾರಿಗಳ ಪಟ್ಟಿಯಲ್ಲಿ ಸೇರ್ಪಡೆ ಆಗಿಲ್ಲದೆ ಇರುವುದರಿಂದ ಮತ್ತು ಮೇಲ್ಕಾಣಿಸಿದ ಉಲ್ಲೇಖದ ಅಡಿಯಲ್ಲಿ ಮಾನ್ಯ ಆಯುಕ್ತರವರು ಅನುಮೋದಿಸಿದಂತೆ ಅನುದಾನವನ್ನು re-appropriation ಮಾಡುವ ಷರತ್ತಿಗೆ ಒಳಪಟ್ಟು ಮೇಲ್ಕಾಇಸಿದ ಎಲ್ಲಾ 20 ಕಾಮಗಾರಿಗಳನ್ನು ಡಿ–ಫ್ರೀಜ್ ಮಾಡುವ ಪ್ರಸ್ತಾವನೆಯ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

***–ಮುಂದೂಡಿದೆ–***

## ***08]. ವಿಷಯದ ಸಂಖ್ಯೆಃ ತೆಆಸ್ಥಾಸ/173/2016–17***

ಆಯುಕ್ತರ ದಿನಾಂಕ: 09.03.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, 2015–16 ರ 14ನೇ ಹಣಕಾಸು ಆಯೋಗದ ಅನುದಾನದಡಿ ಸರ್ಕಾರದ ಆದೇಶ ಸಂಖ್ಯೆ ನಅಇ 524 ಎಸ್.ಎಫ್.ಸಿ 2015 / ದಿನಾಂಕ 05–01–2016 ರಲ್ಲಿ ರೂ. 17033.00 ಲಕ್ಷಗಳ ಕ್ರಿಯಾ ಯೋಜನೆಯ ಕಾಮಗಾರಿಗಳಿಗೆ ಅನುಮೋದನೆ ನೀಡಿದೆ. ಸಾಮೂಹಿಕ / ಸಾರ್ವಜನಿಕ ಶೌಚಾಲಯ ಮತ್ತು ಸಪ್ವೇಜ್‌ಗಳ ನಿರ್ವಹಣೆ ಕಾಮಗಾರಿಗಳಿಗೆ ರೂ. 1098.05 ಲಕ್ಷಗಳ ಅನುದಾನ ನಿಗಧಿಪಡಿಸಿದ್ದು, ವಲಯವಾರು ಅನುದಾನ ನಿಗದಿ ಮಾಡಿರುತ್ತದೆ. ರೂ. 1098.05 ಲಕ್ಷಗಳ ಪೈಕಿ 2015–16 ನೇ ಸಾಲಿನಲ್ಲಿ ಕ್ರಿಯಾಯೋಜನೆಯೊಂದಿಗೆ ಪ್ರಸ್ತಾವನೆ ಸಲ್ಲಿಸಿರುವ ರೂ. 288.38 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲಾಗಿದೆ. ಕ್ರಿಯಾ ಯೋಜನೆ ಸಲ್ಲಿಸದೇ ಇದ್ದುದರಿಂದ ಉಳಿದ ವಲಯಗಳ ಮೊತ್ತ ರೂ. 809.67 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಿರುವುದಿಲ್ಲ.

ಬೊಮ್ಮನಹಳ್ಳಿ ವಲಯದ ಸಾರ್ವಜನಿಕ ಶೌಚಾಲಯ ಮತ್ತು ಸಪ್ವೇಜ್‌ಗಳ ನಿರ್ವಹಣೆ ಕಾಮಗಾರಿಗಳಿಗೆ ರೂ. 88.73 ಲಕ್ಷಗಳ ಅನುದಾನ ನಿಗಧಿಪಡಿಸಿದ್ದು, ಮುಖ್ಯ ಅಭಿಯಂತರರು (ಬೊಮ್ಮನಹಳ್ಳಿ) ರವರು ಬೆಂಗಳೂರು (ದಕ್ಷಿಣ) ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ವಾರ್ಡ್ 184 ಮತ್ತು ವಾರ್ಡ್ 196ರ ಒಟ್ಟು ಮೊತ್ತ ರೂ. 88.73 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಮುಖ್ಯ ಲೆಕ್ಕಾಧಿಕಾರಿಗಳು 2015–16 ರ 14ನೇ ಹಣಕಾಸು ಆಯೋಗದ ಅನುದಾನದಡಿ ಮಂಜೂರಾಗಿದ್ದ ರೂ. 170.33 ಕೋಟಿಗಳು ಪಾಲಿಕೆಗೆ ಬಿಡುಗಡೆಯಾಗಿರುವುದಾಗಿ ಮತ್ತೊಂದು ಕಡತದಲ್ಲಿ ವರದಿಸಿರುವ ಮೇರೆಗೆ ಹಾಗೂ ಸರ್ಕಾರದಿಂದ ಅನುದಾನ ಬಿಡುಗಡೆಯಾಗಿರುವುದರಿಂದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಯೊಂದಿಗೆ 2016–17ರ 14ನೇ ಹಣಕಾಸು ಆಯೋಗದ ಅನುದಾನದ

ಲೆಕ್ಕಶೀರ್ಷಿಕೆ ಪಿ–3110 ಅಡಿ ಅಳವಡಿಸಿಕೊಂಡು ರೂ. 461.37 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲಾಗಿದೆ. 2015–16ರ ಸಾರ್ವಜನಿಕ ಶೌಚಾಲಯ ಮತ್ತು ಸೆಪ್ಟೇಜ್‌ಗಳ ನಿರ್ವಹಣೆ ವಿವರಗಳು ಈ ಕೆಳಕಂಡಂತಿದೆ.

**(Rs in Lakhs)**

| Zone | Allocation | Job No. Issued | | Balance |
|---|---|---|---|---|
| | | 2015-16 | 2016-17 | |
| Dasarahalli | 44.37 | 44.37 | | 0.00 |
| West | 244.01 | 244.01 | | 0.00 |
| South | 244.01 | 243.91 | | 0.00 |
| East | 244.01 | | 243.91 | 0.00 |
| Raja Rajeswarinagar | 77.64 | | | 77.64 |
| Yalahanka | 61.00 | | | 61.00 |
| Mahadevapura | 94.28 | | | 94.28 |
| Bommanahalli | 88.73 | | | 88.73 |
| **Total** | **1098.05** | **288.38** | **461.37** | **348.20** |

2015–16ನೇ ಸಾಲಿನ 14ನೇ ಹಣಕಾಸು ಆಯೋಗದ ಅನುದಾನ ಬಿಡುಗಡೆಯಾಗಿರುವುದರಿಂದ 2016–17ರ 14ನೇ ಹಣಕಾಸು ಆಯೋಗದ ಅನುದಾನದ ಲೆಕ್ಕಶೀರ್ಷಿಕೆ ಪಿ–3110 ಅಡಿ ಅನುದಾನ ಅಳವಡಿಸಿಕೊಂಡು ಬೊಮ್ಮನಹಳ್ಳಿ ವಲಯದ ರೂ.88.73 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಆಯುಕ್ತರ ದಿನಾಂಕ: 09–03–2017 ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು**

***09]. ವಿಷಯದ ಸಂಖ್ಯೆ: ತೆಆಸ್ಥಾಸ/182/2016–17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 13.03.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಮುಖ್ಯ ಅಭಿಯಂತರರು (ದಕ್ಷಿಣ) ವಲಯದ ವ್ಯಾಪ್ತಿಗೆ ಬರುವ ಕಾರ್ಯಪಾಲಕ ಅಭಿಯಂತರರು (ಯೋಜನೆ–ದಕ್ಷಿಣ) ವಿಭಾಗದ ಕೆಳಕಂಡ ಕಾಮಗಾರಿಯನ್ನು ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆಯಲಾಗಿತ್ತು.

| **ಕ್ರಮ ಸಂಖ್ಯೆ** | **ಕಾಮಗಾರಿಯ ಹೆಸರು** | **ಟೆಂಡರ್‌ಗಿಟ್ಟ ಮೊತ್ತ (ರೂ. ಗಳಲ್ಲಿ)** |
|---|---|---|
| 1 | Supply of Date Entry Operation Services to Bruhat Bangalore Mahanagara Palike Joint Commissioner (South) | 1,38,00,000/– |

ಸದರಿ ಕಾಮಗಾರಿಗೆ ಇ–ಪ್ರೋಕ್ಯೂರ್‌ಮೆಂಟ್ ಮುಖೇನ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಪ್ರಕಟಣೆಯನ್ನು ವಿಜಯವಾಣಿ ಮತ್ತು ದಿ ನ್ಯೂ ಇಂಡಿಯನ್ ಇಕ್ಸಪ್ರೆಸ್ ದಿನಪತ್ರಿಕೆಗಳಲ್ಲಿ

ದಿ:05.05.2016 ರಂದು ಪ್ರಕಟಿಸಲಾಗಿತ್ತು. ಸದರಿ ಟೆಂಡರ್‌ನಲ್ಲಿ ಏಕೈಕ ಗುತ್ತಿಗೆದಾರರು ಭಾಗವಹಿಸಿದ್ದು ವಿವರಗಳು ಕೆಳಕಂಡಂತಿರುತ್ತದೆ.

| ಕ್ರ. ಸಂ | ಗುತ್ತಿಗೆದಾರರ ಹೆಸರು | ಟೆಂಡರ್‌ಗಿಟ್ಟ ಮೊತ್ತ (ರೂ. ಗಳಲ್ಲಿ) | ಪ್ರತಿ ಕಂಪ್ಯೂಟರ್ ಆಪರೇಟರ್‌ಗೆ ಪ್ರತಿ ಮಾಹೆಗೆ ನಮೂದಿಸಿರುವ ಮೊತ್ತ | ಎರಡು ವರ್ಷಗಳಿಗೆ ಮೊತ್ತ |
|---|---|---|---|---|
| 1 | ಶ್ರೀ.ಸಿ.ವಿ.ಉದಯ್ ಕುಮಾರ್ | 1,38,00,000/– | 12,520.00 (ಎಲ್ಲಾ ತೆರಿಗೆಗಳು ಸೇರಿ) | 75 * 12,520 * 24 = 2,25,36,000.00 |

ಮೇಲ್ಕಂಡ ಅಂಶಗಳನ್ನು ತಮ್ಮ ಗಮನಕ್ಕೆ ತರುತ್ತಾ, ಏಕೈಕ ಬಿಡ್ಡುದಾರರು ಶ್ರೀ.ಸಿ.ವಿ.ಉದಯ್‌ಕುಮಾರ್, (ಮೆ॥ಉದ್ಯೋಗ್ ಎಂಟರ್‌ಪ್ರೈಸಸ್) ರವರು ನಮೂದಿಸಿರುವ ದರ ಎಲ್ಲಾ ತೆರಿಗೆ ಸೇರಿ ಪ್ರತಿ ಕಂಪ್ಯೂಟರ್ ಆಪರೇಟರ್‌ಗೆ ರೂ.12,520/– ಗಳಂತೆ ಒಟ್ಟು 75 ಕಂಪ್ಯೂಟರ್ ಆಪರೇಟರ್‌ಗಳಿಗೆ ಒಟ್ಟು 24 ತಿಂಗಳ ಗುತ್ತಿಗೆ ಅವಧಿಗೆ ನೀಡಬೇಕಾಗಿರುವ ಒಟ್ಟು ವೇತನದ ಮೊತ್ತ (75 * 12,520/– * 24) ರೂ.2,25,36,000/–) ಗಳು ಆಗಿರುವ ಕಾರಣ ಸದರಿ ಟೆಂಡರ್ ಅನುಮೋದನೆಗಾಗಿ ಕಾರ್ಯಪಾಲಕ ಅಭಿಯಂತರರು (ಯೋಜನೆ–ದಕ್ಷಿಣ) ರವರು ಕಡತವನ್ನು ಸಲ್ಲಿಸಿರುತ್ತಾರೆ.

ಕಾರ್ಯಪಾಲಕ ಅಭಿಯಂತರರು (ಯೋಜನೆ–ದಕ್ಷಿಣ) ರವರ ಪ್ರಸ್ತಾವನೆಯಂತೆ, ಗುತ್ತಿಗೆದಾರರಾದ ಶ್ರೀ.ಸಿ.ವಿ.ಉದಯ್‌ಕುಮಾರ್, (ಮೆ॥ಉದ್ಯೋಗ್ ಎಂಟರ್‌ಪ್ರೈಸಸ್) ರವರು ನಮೂದಿಸಿರುವ ದರ ಎಲ್ಲಾ ತೆರಿಗೆ ಸೇರಿ ಪ್ರತಿ ಕಂಪ್ಯೂಟರ್ ಆಪರೇಟರ್‌ಗೆ ರೂ.12,520/– ಗಳಂತೆ ಒಟ್ಟು 75 ಕಂಪ್ಯೂಟರ್ ಆಪರೇಟರ್‌ಗಳಿಗೆ ಒಟ್ಟು 24 ತಿಂಗಳ ಗುತ್ತಿಗೆ ಅವಧಿಗೆ ನೀಡಬೇಕಾಗಿರುವ ಒಟ್ಟು ವೇತನದ ಮೊತ್ತ (75 * 12,520/– * 24) ರೂ.2,25,36,000/–) ಗಳು ಸದರಿ ಟೆಂಡರ್‌ಗೆ ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಸದರಿ ಪ್ರಸ್ತಾವನೆಯಲ್ಲಿ ತಿಳಿಸಿರುವಂತೆ 75 ಗಣಕಯಂತ್ರ ನಿರ್ವಾಹಕರುಗಳ ಅವಶ್ಯಕತೆ ಇರುವ ಬಗ್ಗೆ ಸಮಿತಿಯ ಮುಂದೆ ಸೂಕ್ತ ಸ್ಪಷ್ಟೀಕರಣ ನೀಡಲು ಕಡತವನ್ನು ಹಿಂದಿರುಗಿಸಿದೆ.**

### *10]. ವಿಷಯದ ಸಂಖ್ಯೆಃ ತೆಆಸ್ಥಾಸ/199/2016–17*

ಆಯುಕ್ತರ ದಿನಾಂಕ: 18.03.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶ್ರೀ ಹೆಚ್.ಆರ್. ವೀರಭದ್ರ, ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ರಾಹುಲ್ ಗಾಂಧಿ ಯುವಶಕ್ತಿ (ರಿ) ನಂ.1226, 40 ಅಡಿ ರಸ್ತೆ, 7ನೇ ಮೈನ್, ಮುನೇಶ್ವರ ಬ್ಲಾಕ್, ಬೆಂಗಳೂರು–560026. 2016–17ನೇ ಸಾಲಿನ ಪಾಲಿಕೆಯ ಆಯವ್ಯಯದಲ್ಲಿ ಸಂಘ/ಸಂಸ್ಥೆಗಳಿಗೆ ಮೀಸಲಿರಿಸಿದ ಅನುದಾನ ರೂ.500.00 ಲಕ್ಷಗಳ ಮೊತ್ತದಲ್ಲಿ ಭಾರತದ ಮಾಜಿ ಪ್ರಧಾನಿ ದಿವಂಗತ ಶ್ರೀಮತಿ ಇಂದಿರಾ ಗಾಂಧಿಯವರ ಪ್ರತಿಮೆಯನ್ನು ವಿಧಾನಸೌಧದ ಪಶ್ಚಿಮ ದ್ವಾರದ ಮುಂಭಾಗದಲ್ಲಿ ಪ್ರತಿಷ್ಠಾಪಿಸುವ ಬಗ್ಗೆ ಅನುದಾನವನ್ನು ಮಂಜೂರು ಮಾಡಲು ಕೋರಿದ್ದು ರೂ.85.00 ಲಕ್ಷಗಳ ಅಂದಾಜು ಪಟ್ಟಿಯನ್ನು ಸಲ್ಲಿಸಿದ್ದು, ಸಹಾಯಧನವನ್ನು ಬಿಡುಗಡೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

ತತ್ಸಂಬಂಧ ಕೋಡ್ 48ರ ಕೊಡುಗೆ ಮತ್ತು ಅನುದಾನದಡಿಯಲ್ಲಿ ಮಂಜೂರು ಮಾಡಲು ಮೇಲಿನ ಅಂಶಗಳನ್ನು ಸ್ಥಾಯಿ ಸಮಿತಿಯ ಆದ್ಯ ಗಮನಕ್ಕೆ ತರುತ್ತಾ ಶ್ರೀ ಹೆಚ್.ಆರ್. ವೀರಭದ್ರ, ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ರಾಹುಲ್ ಗಾಂಧಿ ಯುವಶಕ್ತಿ (ರಿ) ಬೆಂಗಳೂರು ರವರಿಗೆ ಸಹಾಯಧನ ಮಂಜೂರಾತಿ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**_–ಮುಂದೂಡಿದೆ–_**

## ***11]. ವಿಷಯದ ಸಂಖ್ಯೆಃ ತೆಆಸ್ಥಾಸ/201/2016–17***

ಆಯುಕ್ತರ ದಿನಾಂಕ: 19–01–2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಕೃತ ಜ್ಞಾಪನ ಪತ್ರದ ಸಂಖ್ಯೆ: ನಅಇ 253 ಎಂಎನ್‌ಜಿ 2016, ದಿನಾಂಕ: 23–12–2016 ರಲ್ಲಿ ಡಾ॥ ಕೆ.ವಿ.ವೇಣುಗೋಪಾಲ್, ಉಪ ನಿರ್ದೇಶಕರು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ಇವರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೊ ಅಲ್ಲಿಯವರೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಖಾಲಿ ಇರುವ ಉಪ ನಿರ್ದೇಶಕರು (ಪಶುಪಾಲನೆ) ಹುದ್ದೆಗೆ ನಿಯೋಜಿಸಲಾಗಿರುತ್ತದೆ.

ಡಾ॥ ಕೆ.ವಿ.ವೇಣುಗೋಪಾಲ್, ಉಪ ನಿರ್ದೇಶಕರು (ಪಶುಪಾಲನೆ) ರವರು ಮಾನ್ಯ ಆಯುಕ್ತರವರ ಕಛೇರಿಯಲ್ಲಿ ದಿನಾಂಕ: 02.01.2017 ರಂದು ಕರ್ತವ್ಯದ ಮೇಲೆ ಹಾಜರಾತಿಯನ್ನು ಸಲ್ಲಿಸಿರುತ್ತಾರೆ. ಪ್ರಸ್ತುತ ಪಾಲಿಕೆಯಲ್ಲಿ ಉಪ ನಿರ್ದೇಶಕರು (ಪಶುಪಾಲನೆ) ಹುದ್ದೆ ಖಾಲಿ ಇರುತ್ತದೆ.

ಮೇಲ್ಕಂಡ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆಯಲ್ಲಿ ಡಾ॥ ಕೆ.ವಿ.ವೇಣುಗೋಪಾಲ್, ಉಪ ನಿರ್ದೇಶಕರು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ಇವರನ್ನು ಪಾಲಿಕೆಗೆ ಎರವಲು ಸೇವೆಯ ಮೇಲೆ ಉಪ ನಿರ್ದೇಶಕರು (ಪಶುಪಾಲನೆ) ಹುದ್ದೆಯಲ್ಲಿ ಕರ್ತವ್ಯದ ಮೇಲೆ ತೆಗೆದುಕೊಳ್ಳುವ ಬಗ್ಗೆ ಕಡತವನ್ನು ಅಭಿಪ್ರಾಯಕ್ಕಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಮೇರೆಗೆ, <u>**ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಗಳಡಿ ಪಶುವೈದ್ಯಕೀಯ ವಿಭಾಗ ಕಛೇರಿ ಹಾಗೂ ಸದರಿ ಕಛೇರಿಗೆ ಯಾವುದೇ ಹುದ್ದೆಗಳು ಮಂಜೂರಾಗದೆ ಇದ್ದಾಗ್ಯೂ ಹಲವಾರು ಅಧಿಕಾರಿಗಳು ಪಶುವೈದ್ಯಕೀಯ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಈ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ, ಪ್ರಸ್ತುತ ಪಾಲಿಕೆಯ ಅಧೀನದಲ್ಲಿರುವ 04 ವಧಾಗಾರಗಳ ಮೇಲುಸ್ತುವಾರಿ ಹಾಗೂ ಕೋಳಿ ಮತ್ತು ಮಾಂಸದ ಅಂಗಡಿಗಳಿಗೆ ಉದ್ದಿಮೆ ಪರವಾನಗಿ ನೀಡುವ ಕೆಲಸ ಕಾರ್ಯಗಳನ್ನು ಮಾತ್ರ ಈ ವಿಭಾಗದಿಂದ ನಿರ್ವಹಿಸುತ್ತಿದ್ದು, ಪಶು ವೈದ್ಯಕೀಯ ವಿಭಾಗ ಜಾರಿಯಲ್ಲಿ ಇಲ್ಲದ ಸಮಯದಲ್ಲಿ, ಸದರಿಯವರು ನಿರ್ವಹಿಸುತ್ತಿರುವ ಕೆಲಸ ಕಾರ್ಯಗಳನ್ನು ಪಾಲಿಕೆಯ ಆರೋಗ್ಯ ಇಲಾಖೆಯ ವತಿಯಿಂದ ನಿರ್ವಹಿಸಲಾಗುತ್ತಿದುದ್ದರಿಂದ, ಪಶುಪಾಲನೆ ವಿಭಾಗದಲ್ಲಿ ಸುಮಾರು 28 ಮಂದಿ ಅಧಿಕಾರಿ / ನೌಕರರುಗಳು ಮಂಜೂರಾತಿ ಇಲ್ಲದ ಹುದ್ದೆಗಳಲ್ಲಿ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿದ್ದು, ಇದರಿಂದಾಗಿ ಸದರಿಯವರುಗಳಿಗೆ ವೇತನ ಹಾಗೂ ಇತರೆ ಭತ್ಯೆಗಳ ಪಾವತಿಯಿಂದಾಗಿ ಪಾಲಿಕೆಗೆ ಆರ್ಥಿಕ ಹೊರೆ ಹೆಚ್ಚಾಗಿರುತ್ತದೆ.**</u>

<u>**ಆದ್ದರಿಂದ, ಅನಗತ್ಯ ಹಾಗೂ ಮಂಜೂರಾತಿ ಇಲ್ಲದ ಹುದ್ದೆಗಳಲ್ಲಿ ಪಶುವೈದ್ಯಕೀಯಕ್ಕೆ ಸಂಬಂಧಿಸಿದ ಅಧಿಕಾರಿ/ನೌಕರರುಗಳು ಕಾರ್ಯನಿರ್ವಹಿಸುತ್ತಿದ್ದು, ಸಾರ್ವಜನಿಕ ಹಿತದೃಷ್ಟಿಯಿಂದ ಇವರುಗಳ ಅವಶ್ಯಕತೆ ಕಂಡು ಬರುತ್ತಿಲ್ಲವಾದ್ದರಿಂದ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ವ್ಯತಿರಿಕ್ತವಾಗಿ ಪಶುಪಾಲನೆ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ / ಸಿಬ್ಬಂದಿಗಳನ್ನು ಪಾಲಿಕೆಯ ಸೇವೆಯಿಂದ**</u>

**ಬಿಡುಗಡೆಗೊಳಿಸುವ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಕಡತವನ್ನು ಮಂಡಿಸುವುದೆಂದು ತೀರ್ಮಾನಿಸಿರುವ ಸಿಬ್ಬಂದಿ ಮತ್ತು ಆಢಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ: 18.03.2017ರ ಸಭೆಯ ನಿರ್ಣಯ.**

**ನಿರ್ಣಯ:** ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಕೃತ ಜ್ಞಾಪನ ಪತ್ರದ ಸಂಖ್ಯೆ: ನಅಇ 253ಎಂಎನ್‌ಜಿ 2016, ದಿನಾಂಕ: 23-12-2016ರ ಆದೇಶದಂತೆ ಡಾ॥ ಕೆ.ವಿ.ವೇಣುಗೋಪಾಲ್, ಉಪ ನಿರ್ದೇಶಕರು, ಪಶು ಸಂಗೋಪನಾ ಮತ್ತು ಮೀನುಗಾರಿಕೆ ಇಲಾಖೆ ಇವರನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಕರ್ತವ್ಯ ನಿರ್ವಹಿಸಲು ನಿಯೋಜಿಸಿರುವಂತೆ ದಿನಾಂಕ: 02.01.2017 ರಂದು ಕರ್ತವ್ಯದ ಮೇಲೆ ಹಾಜರಾತಿಯನ್ನು ಸಲ್ಲಿಸಿರುವ ಇವರನ್ನು ಪಾಲಿಕೆಗೆ ಎರವಲು ಸೇವೆಯ ಮೇರೆಗೆ ಕರ್ತವ್ಯದ ಮೇಲೆ ತೆಗೆದುಕೊಳ್ಳಲು ಅನುಮೊದನೆ ಕೋರಿ ಮಂಡಿಸಿರುವ ಹಿನ್ನಲೆಯಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ದಿನಾಂಕ: 18.03.2017ರ ನಿರ್ಣಯದಲ್ಲಿ ಈ ಹುದ್ದೆಗಳು ಮಂಜೂರಾತಿ ಹುದ್ದೆಗಳಾಗಿರುವುದಿಲ್ಲವೆಂದು, ಇವರುಗಳನ್ನು ಪಾಲಿಕೆಗೆ ನಿಯೋಜಿಸಿಕೊಳ್ಳುವುದರಿಂದ ಆರ್ಥಿಕವಾಗಿ ಹೊರೆಯಾಗಲಿದ್ದು, ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ವ್ಯತಿರಿಕ್ತವಾಗುವುದರಿಂದ ಈಗಾಗಲೇ ಪಶುಪಾಲನೆ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳನ್ನು ಪಾಲಿಕೆಯ ಸೇವೆಯಿಂದ ಬಿಡುಗಡೆಗೊಳಿಸುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುತ್ತಾರೆ. ಈ ವಿಷಯದ ಬಗ್ಗೆ ಸಭೆಯಲ್ಲಿ ಹಾಜರಿದ್ದ ಉಪ ಆಯುಕ್ತರು (ಆಡಳಿತ) ರವರೊಂದಿಗೆ ಚರ್ಚಿಸಲಾಗಿ, **'ಪ್ರಸ್ತಾವನೆಯಲ್ಲಿ ತಿಳಿಸಿರುವ ಅಧಿಕಾರಿಯ ಸೇವೆಯು ಪಾಲಿಕೆಗೆ ಅವಶ್ಯಕತೆಯಿರುವುದಾಗಿ ತಿಳಿಸಿರುತ್ತಾರೆ'**. ಆದುದರಿಂದ ಈ ಪ್ರಕರಣದಲ್ಲಿ ಸದರಿ ಅಧಿಕಾರಿಯ ಸೇವೆ ನಗರ ಪಾಲಿಕೆಗೆ ಅಗತ್ಯವಿದೆಯೇ ಅಥವಾ ಇಲ್ಲವೇ? ಎಂಬ ಬಗ್ಗೆ ಹಾಗೂ ಈಗಾಗಲೇ ಕರ್ತವ್ಯಕ್ಕೆ ಹಾಜರಾತಿ ಸಲ್ಲಿಸಿ ಸುಮಾರು ಐದಾರು ತಿಂಗಳುಗಳು ಆಗಿರುವುದರಿಂದ ವೇತನ ಮತ್ತು ಇತರೆ ಭತ್ಯೆಗಳನ್ನು ನೀಡುವ ಬಗ್ಗೆ ಕಾನೂನು ತೊಡಕಾಗುವುದರಿಂದ ಅಂತಿಮ ತೀರ್ಮಾನಕ್ಕಾಗಿ ಪಾಲಿಕೆ ಸಭೆಯ ಮುಂದೆ ಮಂಡಿಸುವುದೆಂದು ಸಮಿತಿಯು ತೀರ್ಮಾನಿಸಿತು.

## *12]. ವಿಷಯದ ಸಂಖ್ಯೆ: ತೆಆಸ್ಥಾಸ/205/2016-17*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 24.03.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ದಾಸನಪುರ ಹೋಬಳಿ ಗಿಡ್ಡೇನಹಳ್ಳಿ ಸರ್ವೆ ನಂ.80ರಲ್ಲಿ 50 ಎಕರೆ ಜಮೀನು ಸರ್ಕಾರದಿಂದ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು ರವರ ಆದೇಶದ ಸಂಖ್ಯೆ: ಎಲ್.ಎನ್.ಡಿ.(ಎನ್)/ಸಿ.ಆರ್/135/1998-99, ದಿನಾಂಕ: 01.02.2000ರಂತೆ ಮಂಜೂರಾಗಿದ್ದು, ಈ ಪೈಕಿ 25ಎಕರೆ ಜಮೀನನ್ನು ಭೂಮಿ ಹಸ್ತಾಂತರ ಪತ್ರದ ಸಂಖ್ಯೆ: ಎಲ್.ಎನ್.ಡಿ.(ಡಿ)ಸಿ.ಆರ್/132/2015-16, ದಿನಾಂಕ: 14.03.2016ರಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರ ಮಾಡಲಾಗಿರುತ್ತದೆ. ಸದರಿ

ಜಮೀನನ್ನು ಒತ್ತುವರಿದಾರರಿಂದ ಸಂರಕ್ಷಿಸಿಕೊಳ್ಳುವ ನಿಟ್ಟಿನಲ್ಲಿ ಸುತ್ತುಗೋಡೆ (ಕಾಂಪೌಂಡ್) ನಿರ್ಮಿಸುವುದು ಅತ್ಯವಶ್ಯಕವಾಗಿರುತ್ತದೆ. ಈ ಹಿನ್ನಲೆಯಲ್ಲಿ ಸದರಿ ಕಾಮಗಾರಿಗೆ ಅತ್ಯವಶ್ಯಕ ಅಂಶಗಳನ್ನೊಳಗೊಂಡಂತೆ ರೂ.226.00 ಲಕ್ಷಗಳಿಗೆ ಬೆಂಗಳೂರು ವೃತ್ತದ 2015-16ನೇ ಸಾಲಿನ ದರಗಳನ್ನು ಆಧರಿಸಿ ಅಂದಾಜು ಪಟ್ಟಿಯನ್ನು ತಯಾರಿಸಿ ಅನುಮೋದನೆ ಮತ್ತು ಜಾಬ್ ನಂಬರ್ ನೀಡಲು ಕೋರಿ 2016-17ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ ಪಿ0607 ಅಡಿಯಲ್ಲಿ ಸಲ್ಲಿಸಲಾಗಿತ್ತು.

ಮುಖ್ಯಲೆಕ್ಕಾಧಿಕಾರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು 2016-17ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ ಪಿ0607 ಅಡಿಯಲ್ಲಿ ಅನುದಾನ ಲಭ್ಯವಿಲ್ಲವೆಂದು ತಿಳಿಸಿರುತ್ತಾರೆ. ಪಾಲಿಕೆಯ ಆಸ್ತಿಯನ್ನು ಸಂರಕ್ಷಿಸಿಕೊಳ್ಳಲು 2016-17ನೇ ಸಾಲಿನ ಬೇರೆ ಲೆಕ್ಕಶೀರ್ಷಿಕೆಗಳಲ್ಲಿ ಉಳಿತಾಯವಾಗುವ ಅನುದಾನದಲ್ಲಿ ಮರುಹೊಂದಾಣಿಕೆ ಮಾಡಿ ಸದರಿ ರೂ.226.00 ಲಕ್ಷಗಳ ಕಾಮಗಾರಿಗೆ ಅನುಮೋದನೆ ಮತ್ತು ಜಾಬ್ ನಂಬರ್ ನೀಡಲು ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***-ಮುಂದೂಡಿದೆ-***

## *13]. ವಿಷಯದ ಸಂಖ್ಯೆಃ ತೆಆಸ್ಥಾಸ/01/2017-18*

ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ದಿನಾಂಕ: 20.03.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೆಂಗಳೂರು (ದಕ್ಷಿಣ) ವಿಧಾನ ಸಭಾ ವ್ಯಾಪ್ತಿಯಲ್ಲಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ದಕ್ಷಿಣ ವಲಯ ವ್ಯಾಪ್ತಿಯಲ್ಲಿ ಬರುವ ಎಸ್.ಬಿಂಗೀಪುರ ಸರ್ವೇ ಸಂಖ್ಯೆ 179 ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಕಸ ವಿಲೇವಾರಿ ಮಾಡಲಾಗುತ್ತಿದ್ದು, ಇದರಿಂದ ಸದರಿ ಗ್ರಾಮದ ಕೆಲವು ಭಾಗದಲ್ಲಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಅಂತರ್ಜಲವು ಕಲುಷಿತಗೊಂಡಿದ್ದು, ಇದರಿಂದ ಕುಡಿಯುವ ನೀರಿಗೆ ತೊಂದರೆಯಾಗುತ್ತಿದೆ ಎಂದು ಎಸ್.ಬಿಂಗೀಪುರ ಗ್ರಾಮಸ್ಥರು ಹಾಗೂ ಅದರ ಸುತ್ತಮುತ್ತಲಿನ ಗ್ರಾಮದ ಸ್ಥಳೀಯರು ದೂರು ನೀಡಿದ್ದರು.

ಅದರಂತೆ ದಿನಾಂಕ: 22.07.2015 ರಂದು ಮಾನ್ಯ ಆಯುಕ್ತರು, ಮಾನ್ಯ ಆಡಳಿತಗಾರರು, ಬೆಂಗಳೂರು ದಕ್ಷಿಣ ಲೋಕಸಭಾ ಸದಸ್ಯರವರು ಇನ್ನಿತರ ಅಧಿಕಾರಿಗಳು ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಎಸ್.ಬಿಂಗೀಪುರದ ಸ್ಥಳೀಯರು ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಈಗಾಗಲೇ ಬೋರ್‌ವೆಲ್ ನೀರನ್ನು ಟ್ಯಾಂಕರ್ ಮೂಲಕ ಸರಬರಾಜು ಮಾಡಲಾಗುತ್ತಿದ್ದು, ಕುಡಿಯುವ ನೀರಿನ ಮೂಲಗಳು ಕಲುಷಿತಗೊಂಡಿರುವುದರಿಂದ ಬೋರ್‌ವೆಲ್ ನೀರಿನ ಬದಲಾಗಿ ಕಾವೇರಿ ನೀರನ್ನು ಒದಗಿಸುವಂತೆ ಕೋರಿರುವ ಮೇರೆಗೆ ಸುತ್ತಮುತ್ತಲಿನ 3 ಗ್ರಾಮಗಳ ಗ್ರಾಮಸ್ಥರಿಗೆ ಟ್ಯಾಂಕರ್‌ಗಳ ಮೂಲಕ ಕಾವೇರಿ ನೀರನ್ನು ಸರಬರಾಜು ಮಾಡಲು ಬೆಂಗಳೂರು ಜಲ ಮಂಡಳಿಯ ಅಧಿಕಾರಿಗಳೊಂದಿಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಮಾನ್ಯ ಆಡಳಿತಗಾರರವರು ಸೂಚಿಸಿದ್ದರು.

ಆದರೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (BWSSB) ವತಿಯಿಂದ ಸರಬರಾಜು ಮಾಡಲು ಉದ್ದೇಶಿಸಿದ್ದ ನೀರಿನ ಮೂಲ ಸ್ಥಾನವು ಬಹಳ ದೂರವಿದ್ದು ಅಲ್ಲಿಂದ ಕೇವಲ ಎರಡು ಲೋಡ್‌ಗಳು ಪ್ರತಿ ದಿನ ಸರಬರಾಜು ಮಾಡಲು ಸಾಧ್ಯವಿದ್ದುದರಿಂದ ಹಾಗೂ ಗ್ರಾಮಗಳಿಗೆ ದಿನ ಪ್ರತಿ ಕನಿಷ್ಠ ಎಂಟು ಲೋಡ್‌ಗಳ ನೀರು ಸರಬರಾಜು ಅವಶ್ಯಕತೆ ಇದ್ದುದರಿಂದ ಬೆಂಗಳೂರು ಜಲ ಮಂಡಳಿಯ ವತಿಯಿಂದ ಸರಬರಾಜು ಮಾಡುತ್ತಿದ್ದ ಎರಡು ಲೋಡ್‌ಗಳೊಂದಿಗೆ ಖಾಸಗಿ ನೀರು ಸರಬರಾಜು ಟ್ಯಾಂಕರ್‌ಗಳಿಂದ ಉಳಿದ ಆರು ಲೋಡ್‌ಗಳ ನೀರನ್ನು ಸರಬರಾಜು ಮಾಡಲು ಮಾನ್ಯ ಆಡಳಿತಗಾರರು ನೀಡಿರುವ ನಡವಳಿಕೆಯಂತೆ ಕಂಡಿಕೆ (18) ರಿಂದ (28)ರ ವರೆಗಿನ ವರದಿಯನ್ನು ತಮ್ಮ

ಅವಗಾಹನೆಗೆ ತರುತ್ತಾ ಮಾನ್ಯ ಆಯುಕ್ತರವರು ದಿನಾಂಕ: 20.01.2016 ರಿಂದ 17.07.2016 (6 ತಿಂಗಳ ಅವದಿಗೆ) ಅನುಮೋದನೆ ನೀಡಿರುವ ಮೇರೆಗೆ ಸದರಿ ಸ್ಥಳಗಳಿಗೆ ಟ್ಯಾಂಕರ್ ಮುಖೇನ ಕುಡಿಯುವ ನೀರು ಸರಬರಾಜು ಮಾಡಲಾಗಿರುತ್ತದೆ.

ಮುಂದುವರೆದಂತೆ ಸದರಿ ಸ್ಥಳಗಳಿಗೆ ಟ್ಯಾಂಕರ್ ಮುಖೇನ ಕುಡಿಯುವ ನೀರು ಸರಬರಾಜು ಮಾಡುವುದು ಅತ್ಯವಶ್ಯಕವಾಗಿರುವುದರಿಂದ ಲೋಕೋಪಯೋಗಿ ಇಲಾಖೆಯ ದರಪಟ್ಟಿ ಹಾಗೂ ಅನುಮೋದಿತ ದರಗಳ ಅನ್ವಯ ಅಂದಾಜು ಪಟ್ಟಿಯನ್ನು ರೂ. 13.55 ಲಕ್ಷಗಳಿಗೆ ತಯಾರಿಸಲಾಗಿರುತ್ತದೆ. ಇದಕ್ಕೆ ತಗಲುವ ವೆಚ್ಚವನ್ನು 2016-17ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ ಪಿ-3111, ಸ್ವಚ್ಛ ಭಾರತ್ ಮಿಷನ್ ಅನುದಾನದ ಅಡಿಯಲ್ಲಿ ಜಾಬ್ ಕೋಡ್ ನೀಡಲು ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ದಿನಾಂಕ: 20.01.2016 ರಿಂದ 17.07.2016 ರವರೆಗೆ (6ತಿಂಗಳ) ಅವದಿಗೆ ಹಾಗೂ ಮೇ॥ ಕೆ.ಐ.ಆರ್.ಡಿ.ಎಲ್ ಸಂಸ್ಥೆ ವತಿಯಿಂದ ನಿರ್ವಹಿಸಿರುವುದರಿಂದ ಅನುಮೋದನೆ ಕೋರಲಾಗಿದೆ.

ಮೇಲ್ಕಂಡ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಈ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿ ಕಡತವನ್ನು ಮಂಡಿಸಿದೆ.

1) ಸದರಿ ಕಾಮಗಾರಿಯನ್ನು ದಿನಾಂಕ: 20.01.2016 ರಿಂದ 17.07.2016 ರವರೆಗೆ ನಿರ್ವಹಿಸಿರುವ ಅವಧಿಗೆ ಅನುಮೋದನೆ,
2) ಸದರಿ ಕಾಮಗಾರಿಯ ಮೊತ್ತ ರೂ.13.55 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿಯನ್ನು ನೀಡಲು,
3) ಸದರಿ ಕಾಮಗಾರಿಗೆ 2016-17ನೇ ಸಾಲಿನ ಲೆಕ್ಕಶೀರ್ಷಿಕೆ ಪಿ-3111ರ ಅಡಿಯಲ್ಲಿ ಅನುದಾನ ಬಿಡುಗಡೆ ಮಾಡಿ ಜಾಬ್ ಕೋಡ್ ನೀಡಲು,
4) ಸದರಿ ಕಾಮಗಾರಿಯನ್ನು ದಿನಾಂಕ: 20.01.2016 ರಿಂದ 17.07.2016 ರವರೆಗೆ (6 ತಿಂಗಳ ಅವಧಿಗೆ) ಮೇ॥ ಕೆ.ಐ.ಆರ್.ಡಿ.ಎಲ್ ಸಂಸ್ಥೆ ವತಿಯಿಂದ ನಿರ್ವಹಿಸಿರುವುದರಿಂದ ಹಾಗೂ ಮಾನ್ಯ ಆಯುಕ್ತರು ಟಿಪ್ಪಣಿಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಅನುಮೋದನೆಗಾಗಿ ಕೋರಿ ಮಂಡಿಸಿದೆ.

ಮೇಲಿನ ವಿವರಗಳನ್ನು ತಮ್ಮ ಅವಗಾಹನೆಗೆ ಸಲ್ಲಿಸುತ್ತಾ, ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ, ತಾಂತ್ರಿಕ ಮಂಜೂರಾತಿ ಮತ್ತು ಜಾಬ್ ಕೋಡ್ ನೀಡಲು, ಹಾಗೂ ಸದರಿ ಕಾಮಗಾರಿಯು ಅತೀ ತುರ್ತಾಗಿರುವುದರಿಂದ ಮೆ॥ ಕೆ.ಆರ್.ಐ.ಎ.ಡಿ.ಎಲ್ ಸಂಸ್ಥೆ ಮುಖಾಂತರ ನಿರ್ವಹಿಸಿರುವುದನ್ನು ಅನುಮೋದಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ದಿನಾಂಕ: 20-03-2017ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು**

***14]. ವಿಷಯದ ಸಂಖ್ಯೆ: ತೆಆಸ್ಥಾಸ/03/2017-18***

ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ದಿನಾಂಕ: 20.03.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಕ್ಷಿಣ ವಲಯ ಮತ್ತು ಬೊಮ್ಮನಹಳ್ಳಿ ವಲಯದ ಘನತ್ಯಾಜ್ಯ ಹಾಗೂ ಅನುಪಯುಕ್ತ ವಸ್ತುಗಳನ್ನು ಪ್ರತಿನಿತ್ಯ ವಿಲೇವಾರಿ ಮಾಡಲು ಮತ್ತು ಘನತ್ಯಾಜ್ಯದ ಮೇಲೆ ಮಣ್ಣನ್ನು ಹಾಕಲು Hitachi, 10 wheel tippers ಹಾಗೂ ಜೆ.ಸಿ.ಬಿಗಳ ಅವಶ್ಯಕವಾಗಿರುತ್ತದೆ.

ದಿನಾಂಕ: 31.01.2015ರ ವರೆಗೆ ಸದರಿ ಕಾಮಗಾರಿಯನ್ನು ಮೆ॥ ಕೆ.ಆರ್.ಐ.ಡಿ.ಎಲ್ ಸಂಸ್ಥೆ ವತಿಯಿಂದ ನಿರ್ವಹಿಸಲು ಮಾನ್ಯ ಆಯುಕ್ತರು ರವರ ಕಂಡಿಕೆ (39)ರಲ್ಲಿ ಅನುಮೋದನೆ ಪಡೆಯಲಾಗಿರುತ್ತದೆ.

ತದನಂತರ ಅವಧಿ ದಿನಾಂಕ: 01.11.2015 ರಿಂದ 06.11.2015 ರವರೆಗೆ ಕಾಮಗಾರಿಯನ್ನು ನಿರ್ವಹಿಸಲು, ಸದರಿ ಅಂದಾಜು ಪಟ್ಟಿಯನ್ನು ದಿನಾಂಕ: 01.11.2015 ರಿಂದ 06.11.2015 6 ದಿನಗಳ ಅವಧಿಗೆ ರೂ. 11.25 ಲಕ್ಷಗಳಿಗೆ ತಯಾರಿಸಲಾಗಿದೆ.

ಅದರಂತೆ ಅಂದಾಜು ಪಟ್ಟಿಯನ್ನು 2015-16ನೇ ಸಾಲಿನ ಕರ್ನಾಟಕ ಲೋಕೋಪಯೋಗಿ ಇಲಾಖೆಯ ದರಗಳನ್ನು ಹಾಗೂ ಅನುಮೋದಿತ ದರಗಳನ್ನು ಅಳವಡಿಸಿ ರೂ.11.25 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿರುತ್ತದೆ. ಈ ಅಂದಾಜು ಪಟ್ಟಿಯಲ್ಲಿ ಈ ಕಾಮಗಾರಿಗೆ ಅವಶ್ಯವಿರುವ ಅಂಶಗಳನ್ನು ಅಳವಡಿಸಲಾಗಿರುತ್ತದೆ.

ಸದರಿ ಕಾಮಗಾರಿಗೆ ಅವಶ್ಯವಿರುವ ಅನುದಾನವನ್ನು ಕಂಡಿಕೆ (35) ರಲ್ಲಿ 2016-17ನೇ ಸಾಲಿನ ಪಿ3112, ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ ರೂ.150.00 ಲಕ್ಷಗಳ ಅನುದಾನ ಮೀಸಲಿರಿಸಿದ್ದು, ರೂ.11.25 ಲಕ್ಷಗಳ ಅನುದಾನವನ್ನು ಅಳವಡಿಸಿಕೊಂಡು ಜಾಬ್ ಸಂಖ್ಯೆ, ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಅನುಮೋದನೆ ಪಡೆಯಬಹುದಾಗಿರುತ್ತದೆ. ಸದರಿ ಕಾಮಗಾರಿಯನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವು ದರಿಂದ ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆ ವತಿಯಿಂದ ನಿರ್ವಹಿಸಿರುವುದರಿಂದ ಅನುಮೋದನೆ ಕೋರಲಾಗಿದೆ.

ಮೇಲ್ಕಂಡ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಈ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಸಲ್ಲಿಸಿದೆ.

1) ಸದರಿ ಕಾಮಗಾರಿಯನ್ನು ದಿನಾಂಕ:01.11.2015 ರಿಂದ 6/11/2015 ರವರೆಗೆ ನಿರ್ವಹಿಸಿರುವುದರಿಂದ ಅಂದಾಜು ಪಟ್ಟಿಗೆ ಅನುಮೋದನೆ.
2) ಸದರಿ ಕಾಮಗಾರಿಯ ಮೊತ್ತ ರೂ. 11.25 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿಯನ್ನು ನೀಡಲು.
3) ಸದರಿ ಕಾಮಗಾರಿಗೆ ಅನುದಾನವನ್ನು ಪಿ-3112 ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ ಜಾಬ್‌ಕೋಡ್ ನೀಡಲು.
4) ಸದರಿ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸಬೇಕಾಗಿರುವುದರಿಂದ 01.11.2015 ರಿಂದ 6/11/2015 ರವರೆಗೆ ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆ ವತಿಯಿಂದ ನಿರ್ವಹಿಸಿರುವುದರಿಂದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಸಲ್ಲಿಸಿರುವ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ದಿನಾಂಕ: 20-03-2017ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು**

***15]. ವಿಷಯದ ಸಂಖ್ಯೆ: ತೆಆಸ್ಥಾಸ/04/2017-18***

ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ದಿನಾಂಕ: 20.03.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಕ್ಷಿಣ ವಲಯದ ಸರ್ವೆ ನಂ.179ರ ಎಸ್.ಬಿಂಗೀಪುರ ಲ್ಯಾಂಡ್‌ಫಿಲ್‌ನಲ್ಲಿ ದಿನವಿಡಿ ಸುಮಾರು 800-900 ಟನ್ ಘನತ್ಯಾಜ್ಯವನ್ನು ಭರ್ತಿ ಮಾಡಲಾಗಿದ್ದು, ಇದರಿಂದಾಗಿ ಘನತ್ಯಾಜ್ಯ ಸಂಗ್ರಹಣ ಸ್ಥಳದಲ್ಲಿ ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿ ನೊಣ ಮತ್ತು ಸೊಳ್ಳೆಗಳ ಹಾವಳಿ ಹೆಚ್ಚಾಗಿರುತ್ತದೆ. ಸದರಿ ಸ್ಥಳಗಳಲ್ಲಿ ನೊಣ ಮತ್ತು ಸೊಳ್ಳೆಗಳ ಹಾವಳಿಯನ್ನು ನಿಯಂತ್ರಿಸಲು Premises ಮತ್ತು Baytex ದ್ರಾವಣವನ್ನು ಸಿಂಪಡಿಸುವುದು ಅವಶ್ಯಕವಾಗಿರುತ್ತದೆ. ದಿನಾಂಕ: 31.05.2014 ರಿಂದ ಮಂಡೂರಿನಲ್ಲಿ ಘನತ್ಯಾಜ್ಯ ವಿಲೇವಾರಿ ತಡೆಹಿಡಿಯಲು ಅಲ್ಲಿನ ಸ್ಥಳೀಯ

ನಾಗರೀಕರು ನಡೆಸಿದ ಪ್ರತಿಭಟನೆಯಿಂದ ಮಂಡೂರಿನಲ್ಲಿ ಭರ್ತಿ ಮಾಡಬೇಕಾಗಿದ್ದ ಘನತ್ಯಾಜ್ಯದಲ್ಲಿ ಸುಮಾರು 65–70 ವಾಹನಗಳು ಹೆಚ್ಚುವರಿಯಾಗಿ ಎಸ್.ಬಿಂಗೀಪುರ ಲ್ಯಾಂಡ್‌ಫಿಲ್‌ಗೆ ಬಂದು ಕಸ ಸುರಿಯಲಾಗಿರುತ್ತದೆ. ಬಿಂಗೀಪುರದಲ್ಲಿ ದಿನಾಂಕ: 01.06.2014 ರಿಂದ ಪ್ರತಿದಿನ ಸುಮಾರು 120 ರಿಂದ 130 ವಾಹನಗಳು ಘನತ್ಯಾಜ್ಯವನ್ನು ಭರ್ತಿ ಮಾಡಿದ್ದು ಒಟ್ಟಾರೆಯಾಗಿ ಅದು ದ್ವಿಗುಣಗೊಂಡಿರುತ್ತದೆ.

ಸದರಿ ಕಸ ಭೂಭರ್ತಿ ಘಟಕದಲ್ಲಿ ದುಪ್ಪಟ್ಟು ಪ್ರಮಾಣದಲ್ಲಿ ಘನತ್ಯಾಜ್ಯವನ್ನು ಭರ್ತಿ ಮಾಡಲಾಗಿರುವುದರಿಂದ ಘನತ್ಯಾಜ್ಯ ಸಂಗ್ರಹಣ ಸ್ಥಳದಲ್ಲಿ ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿ ನೊಣ ಮತ್ತು ಸೊಳ್ಳೆಗಳ ಹಾವಳಿ ಹೆಚ್ಚಾಗಿರುತ್ತದೆ. ಸದರಿ ಸ್ಥಳಗಳಲ್ಲಿ ನೊಣ ಮತ್ತು ಸೊಳ್ಳೆಗಳ ಹಾವಳಿಯನ್ನು ನಿಯಂತ್ರಿಸಲು Temephos, BTI ಮತ್ತು Pyrethrum, Technical melathion ದ್ರಾವಣವನ್ನು ಸಿಂಪಡಿಸಲು ದಿನಾಂಕ: 26/10/2015 ರಿಂದ 22/02/2016 ರವರೆಗೆ 4 ತಿಂಗಳ ಅವಧಿಗೆ ಮಾನ್ಯ ಆಯುಕ್ತರು ರವರು ಕಂಡಿಕೆ 55ರಲ್ಲಿ ಅನುಮೋದನೆಯಾಗಿರುತ್ತದೆ.

ಸದರಿ ಕಾಮಗಾರಿಗೆ ಅವಶ್ಯವಿರುವ ಅನುದಾನವನ್ನು ಪಿ–3112, ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ ರೂ.150.00 ಲಕ್ಷಗಳ ಅನುದಾನ ಮೀಸಲಿರಿಸಿದ್ದು ಅನುದಾನವನ್ನು ಭರಿಸಬಹುದಾಗಿರುತ್ತದೆ.

ಮೇಲಿನ ವಿವರಗಳನ್ನು ತಮ್ಮ ಅವಗಾಹನೆಗೆ ಸಲ್ಲಿಸುತ್ತಾ, ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ, ತಾಂತ್ರಿಕ ಮಂಜೂರಾತಿ ಮತ್ತು ಜಾಬ್‌ಕೋಡ್ ನೀಡಲು, ಹಾಗೂ ಸದರಿ ಕಾಮರಿಯು ಅತೀ ತುರ್ತಾಗಿರುವುದರಿಂದ ಮೆ॥. ಕೆ.ಆರ್.ಐ.ಡಿ.ಎಲ್ ಸಂಸ್ಥೆ ಮುಖಾಂತರ ನಿರ್ವಹಿಸಲು ಅನುಮತಿ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ದಿನಾಂಕ: 20–03–2017ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು**

## *16]. ವಿಷಯದ ಸಂಖ್ಯೆಃ ತೆಆಸ್ಥಾಸ/07/2017–18*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 01.04.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ 28ರ ಕಮ್ಮನಹಳ್ಳಿ ವ್ಯಾಪ್ತಿಯ ಬೆಂಗಳೂರು ಉತ್ತರ ತಾಲ್ಲೂಕು ಕಸಬಾ ಹೋಬಳಿ ಲಿಂಗರಾಜಪುರ ಗ್ರಾಮದ ಸರ್ವೆ ಸಂಖ್ಯೆ 53/1ರ 2 ಎಕರೆ 08 ಗುಂಟೆ ಪೈಕಿ 10 ಜುಂಟೆ ಜಮೀನನ್ನು 53/3 ಕ್ಕೆ ಸೇರಿದ ಸ್ವತ್ತಿಗೆ ಸಂಬಂಧಿಸಿದಂತೆ ಮಾನ್ಯ ಸಿಟಿ ಸಿವಿಲ್ ನ್ಯಾಯಾಲಯದ ಮೂಲ ದಾವೆಸಂಖ್ಯೆ 15418/2006ರ ಪ್ರಕಾರ ದಾವೆಯನ್ನು ಹೂಡಿ ಪಾಲಿಕೆಯನ್ನು ಪ್ರತಿವಾದಿಯನ್ನಾಗಿ ಮಾಡಿ ತನ್ನ ಆಸ್ತಿಯೆಂದು ನಿರೂಪಿಸುವಲ್ಲಿ ವಿಫಲರಾಗಿರುವುದರಿಂದ ಮಾನ್ಯ ನ್ಯಾಯಾಲಯವು ದಿನಾಂಕ 07–10–2016 ರಂದು ಪಾಲಿಕೆಯ ಪರವಾಗಿ ತೀರ್ಪು ನೀಡಿರುತ್ತದೆ. ಸದರಿ ಸ್ವತ್ತಿನಲ್ಲಿ ಯಾರೂ ಅತಿಕ್ರಮ ಪ್ರವೇಶ ಮಾಡದಂತೆ ತಂತಿ ಬೇಲಿ ಹಾಕಿ ಸಂರಕ್ಷಣೆ ಮಾಡಿ ಪಾಲಿಕೆಯ ನಾಮಫಲಕ ಅಳವಡಿಸಲು ಸದರಿ ಕಾಮಗಾರಿ ಅಂದಾಜು ಮೊತ್ತ ರೂ. 11.95 ಲಕ್ಷಗಳಿಗೆ ಸಿದ್ದಪಡಿಸಿದ್ದು, 2016–17 ನೇ ಸಾಲಿನ ಆಯವ್ಯಯದಲ್ಲಿನ ತುರ್ತು ಮೀಸಲು ನಿಧಿ ಪಿ–0541 ಅಡಿ ಅನುದಾನ ಲಭ್ಯವಿಲ್ಲದೇ ಇರುವುದರಿಂದ ಮರು ಹೊಂದಾಣಿಕೆ ಮಾಡಿಕೊಂಡು ಅನುದಾನ ಅಳವಡಿಸಿಕೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲು ಮಾನ್ಯ ಆಯುಕ್ತರು ಅನುಮೋದಿಸಿರುತ್ತಾರೆ. 2016–17 ನೇ ಸಾಲಿನ ಪಿ–0541ನ ಅನುದಾನದ ವಿವರಗಳು ಈ ಕೆಳಕಂಡಂತಿದೆ.

ರೂ. ಲಕ್ಷಗಳಲ್ಲಿ)

| **ಲೆಕ್ಕಶೀರ್ಷಿಕೆ: P- 0541 Emergency Reserve Fund (Discretionary Fund of Commissioner) / Page No. 64** | | | | |
|---|---|---|---|---|
| 2016–17 ರ ಆಯವ್ಯಯದಲ್ಲಿ | ಮಾನ್ಯ ಆಯುಕ್ತರ ಆದೇಶದಂತೆ | ಜಾಬ್‌ಸಂಖ್ಯೆಗಾಗಿ ಅನುಮೋದನೆಗಾಗಿ | ಆಯವ್ಯಯದಲ್ಲಿ ಲಭ್ಯವಿರುವ | ಸದರಿ ಪ್ರಸ್ತಾವನೆಯ |

| ಮೀಸಲಿಟ್ಟಿರುವ ಅನುದಾನ | ಜಾಬ್‌ಸಂಖ್ಯೆ ನೀಡಿರುವ ಮೊತ್ತ | ಕಡತ ಸಲ್ಲಿಸಿರುವ ಮೊತ್ತ | ಅನುದಾನ | ಮೊತ್ತ |
|---|---|---|---|---|
| **2500.00** | **34.15** | **2534.15** | **1.10** | **11.95** |

2016–17ನೇ ಸಾಲಿನ ಆಯವ್ಯಯದಲ್ಲಿನ ತುರ್ತು ಮೀಸಲು ನಿಧಿ ಪಿ–0541ಗೆ ರೂ.11.95 ಲಕ್ಷಗಳ ಅನುದಾನ ಹೊಂದಾಣಿಕೆ ಮಾಡಲು ಮತ್ತು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**–ಮುಂದೂಡಿದೆ–**

## *17]. ವಿಷಯದ ಸಂಖ್ಯೆಃ ತೆಆಸ್ಥಾಸ/08/2017–18*

ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ದಿನಾಂಕ: 20.03.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೆಂಗಳೂರು (ದಕ್ಷಿಣ) ವಿಧಾನ ಸಭಾ ವ್ಯಾಪ್ತಿಯಲ್ಲಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ದಕ್ಷಿಣ ವಲಯ ವ್ಯಾಪ್ತಿಯಲ್ಲಿ ಬರುವ ಎಸ್.ಬಿಂಗೀಪುರ ಸರ್ವೆ ಸಂಖ್ಯೆ 179 ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಕಸ ವಿಲೇವಾರಿ ಮಾಡಲಾಗುತ್ತಿದ್ದು, ಇದರಿಂದ ಸದರಿ ಗ್ರಾಮದ ಕೆಲವು ಭಾಗದಲ್ಲಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಅಂತರ್ಜಲವು ಕಲುಷಿತಗೊಂಡಿದ್ದು, ಇದರಿಂದ ಕುಡಿಯುವ ನೀರಿಗೆ ತೊಂದರೆಯಾಗುತ್ತಿದೆ ಎಂದು ಎಸ್.ಬಿಂಗೀಪುರ ಗ್ರಾಮಸ್ಥರು ಹಾಗೂ ಅದರ ಸುತ್ತಮುತ್ತಲಿನ ಗ್ರಾಮದ ಸ್ಥಳೀಯರು ದೂರು ನೀಡಿರುತ್ತಾರೆ.

ಅದರಂತೆ ದಿನಾಂಕ: 22.07.2015 ರಂದು ಮಾನ್ಯ ಆಯುಕ್ತರು, ಮಾನ್ಯ ಆಡಳಿತಗಾರರು, ಬೆಂಗಳೂರು ದಕ್ಷಿಣ ಲೋಕಸಭಾ ಸದಸ್ಯರವರು ಇನ್ನಿತರ ಅಧಿಕಾರಿಗಳು ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಎಸ್.ಬಿಂಗೀಪುರದ ಸ್ಥಳೀಯರು ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಈಗಾಗಲೇ ಬೋರ್‌ವೆಲ್ ನೀರನ್ನು ಟ್ಯಾಂಕರ್ ಮೂಲಕ ಸರಬರಾಜು ಮಾಡಲಾಗುತ್ತಿದ್ದು, ಕುಡಿಯುವ ನೀರಿನ ಮೂಲಗಳು ಕಲುಷಿತಗೊಂಡಿರುವುದರಿಂದ ಬೋರ್‌ವೆಲ್ ನೀರಿನ ಬದಲಾಗಿ ಕಾವೇರಿ ನೀರನ್ನು ಒದಗಿಸುವಂತೆ ಕೋರಿರುವ ಮೇರೆಗೆ ಸುತ್ತಮುತ್ತಲಿನ 3 ಗ್ರಾಮಗಳ ಗ್ರಾಮಸ್ಥರಿಗೆ ಟ್ಯಾಂಕರ್‌ಗಳ ಮೂಲಕ ಕಾವೇರಿ ನೀರನ್ನು ಸರಬರಾಜು ಮಾಡಲು ಬೆಂಗಳೂರು ಜಲ ಮಂಡಳಿಯ ಅಧಿಕಾರಿಗಳೊಂದಿಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಮಾನ್ಯ ಆಡಳಿತಗಾರರವರು ಸೂಚಿಸಿರುತ್ತಾರೆ. (ಪ್ರತಿಯನ್ನು ಲಗತ್ತಿಸಿದೆ)

ಆದರೆ ಬೆಂಗಳೂರು ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ (BWSSB) ವತಿಯಿಂದ ಸರಬರಾಜು ಮಾಡಲು ಉದ್ದೇಶಿಸಿದ್ದ ನೀರಿನ ಮೂಲ ಸ್ಥಾನವು ಬಹಳ ದೂರವಿದ್ದು ಅಲ್ಲಿಂದ ಕೇವಲ ಎರಡು ಲೋಡ್‌ಗಳು ಪ್ರತಿ ದಿನ ಸರಬರಾಜು ಮಾಡಲು ಸಾಧ್ಯವಿದ್ದುದರಿಂದ ಹಾಗೂ ಗ್ರಾಮಗಳಿಗೆ ದಿನ ಪ್ರತಿ ಕನಿಷ್ಟ ಎಂಟು ಲೋಡ್‌ಗಳ ನೀರು ಸರಬರಾಜು ಅವಶ್ಯಕತೆ ಇದ್ದುದರಿಂದ ಬೆಂಗಳೂರು ಜಲ ಮಂಡಳಿಯ ವತಿಯಿಂದ ಸರಬರಾಜು ಮಾಡುತ್ತಿದ್ದ ಎರಡು ಲೋಡ್‌ಗಳೊಂದಿಗೆ ಖಾಸಗಿ ನೀರು ಸರಬರಾಜು ಟ್ಯಾಂಕರ್‌ಗಳಿಂದ ಉಳಿದ ಆರು ಲೋಡ್‌ಗಳ ನೀರನ್ನು ಸರಬರಾಜು ಮಾಡಲು ಮಾನ್ಯ ಆಡಳಿತಗಾರರು ನೀಡಿರುವ ನಡವಳಿಕೆಯಂತೆ ಕಂಡಿಕೆ (31) ರಲ್ಲಿ ಮಾನ್ಯ ಆಯುಕ್ತರು ರವರು ದಿನಾಂಕ:24.07.2015 ರಿಂದ 19.01.2016 ರವರೆಗೆ (6 ತಿಂಗಳ ಅವಧಿಗೆ ) ಸದರಿ ಸ್ಥಳಗಳಿಗೆ ಟ್ಯಾಂಕರ್ ಮುಖೇನ ಕುಡಿಯುವ ನೀರು ಸರಬರಾಜು ಮಾಡಲು ಲೋಕೋಪಯೋಗಿ ಇಲಾಖೆಯ ದರಪಟ್ಟಿ ಹಾಗೂ ಅನುಮೋದಿತ ದರಗಳ ಅನ್ವಯ ಅಂದಾಜು ಪಟ್ಟಿಯನ್ನು ರೂ. 13.55 ಲಕ್ಷಗಳಿಗೆ ತಯಾರಿಸಲಾಗಿದ್ದು, ಇದಕ್ಕೆ ತಗಲುವ ವೆಚ್ಚವನ್ನು 2016–17ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ ಪಿ–3112, ಸ್ವಚ್ಛ ಭಾರತ್ ಮಿಷನ್ ಅಡಿ ರೂ.150.00 ಲಕ್ಷಗಳ ಅನುದಾನ ಮೀಸಲಿರಿಸಿದ್ದು ಜಾಬ್ ಕೋಡ್

ನೀಡಲು ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಕಾಮಗಾರಿಯನ್ನು ಘಟನೋತ್ತರ ಅನುಮೋದನೆ ನಿರೀಕ್ಷಿಸಿ ದಿನಾಂಕ: 24.07.2015 ರಿಂದ 19.01.2016 ರವರೆಗೆ (6 ತಿಂಗಳ ಅವಧಿಗೆ) ಮೇ: ಕೆ.ಐ.ಆರ್.ಡಿ.ಎಲ್ ಸಂಸ್ಥೆ ವತಿಯಿಂದ ನಿರ್ವಹಿಸಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

ಮೇಲ್ಕಂಡ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಈ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿ ಕಡತವನ್ನು ಮಂಡಿಸಿದೆ.

1) ಸದರಿ ಕಾಮಗಾರಿಯನ್ನು ದಿನಾಂಕ: 24.07.2015 ರಿಂದ 19.01.2016 ರವರೆಗೆ ನಿರ್ವಹಿಸುವ ಬಗ್ಗೆ ಘಟನೊತ್ತರ ಅನುಮೋದನೆ,
2) ಸದರಿ ಕಾಮಗಾರಿಯ ಮೊತ್ತ ರೂ.13.55 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿಯನ್ನು ನೀಡುವುದು.
3) ಸದರಿ ಕಾಮಗಾರಿಗೆ 2016–17ನೇ ಸಾಲಿನ ಲೆಕ್ಕಶೀರ್ಷಿಕೆ ಪಿ–3112ರ ಅಡಿಯಲ್ಲಿ ಅನುದಾನ ಬಿಡುಗಡೆ ಮಾಡಿ ಜಾಬ್ ಕೋಡ್ ನೀಡುವುದು.

ಸದರಿ ಕಾಮಗಾರಿಯನ್ನು ದಿನಾಂಕ: 24.07.2015 ರಿಂದ 19.01.2016 ರವರೆಗೆ (6 ತಿಂಗಳ ಅವಧಿಗೆ) ಮೇ: ಕೆ.ಐ.ಆರ್.ಡಿ.ಎಲ್ ಸಂಸ್ಥೆ ವತಿಯಿಂದ ನಿರ್ವಹಿಸುತ್ತಿರುವ ಕ್ರಮಕ್ಕೆ ಸ್ಥಿರೀಕರಣ ನೀಡಲು ಹಾಗೂ ಮಾನ್ಯ ಆಯುಕ್ತರು ಟಿಪ್ಪಣಿಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಅನುಮೋದನೆಗಾಗಿ ಮಂಡಿಸಲು ಕೋರಿ ಮಂಡಿಸಿದೆ.

ಮೇಲಿನ ವಿವರಗಳನ್ನು ತಮ್ಮ ಅವಗಾಹನೆಗೆ ಸಲ್ಲಿಸುತ್ತಾ, ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ, ತಾಂತ್ರಿಕ ಮಂಜೂರಾತಿ ಮತ್ತು ಜಾಬ್‌ಕೋಡ್ ನೀಡಲು, ಹಾಗೂ ಸದರಿ ಕಾಮಗಾರಿಯು ಅತೀ ತುರ್ತಾಗಿರುವುದರಿಂದ ಮೆ॥ ಕೆ.ಆರ್.ಐ.ಡಿ.ಎಲ್ ಸಂಸ್ಥೆ ಮುಖಾಂತರ ನಿರ್ವಹಿಸಿರುವ ಬಗ್ಗೆ ಸ್ಥಿರೀಕರಣಕ್ಕೆ ಅನುಮತಿ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ದಿನಾಂಕ: 20–03–2017ರ ಟಿಪ್ಪಣೆಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು**

***18]. ವಿಷಯದ ಸಂಖ್ಯೆಃ ತೆಆಸ್ಥಾಸ/12/2017–18***

ವಿಶೇಷ ಆಯುಕ್ತರು (ಆರೋಗ್ಯ ಮತ್ತು ಘನತ್ಯಾಜ್ಯ) ಆಯುಕ್ತರ ದಿನಾಂಕ: 11.04.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಪಾಲಿಕೆಯ ವೈದ್ಯಕೀಯ ವಿಭಾಗದಲ್ಲಿ 6 ರೆಫರಲ್ ಆಸ್ಪತ್ರೆಗಳು, 25 ಹೆರಿಗೆ ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿವೆ. ಈ ಆಸ್ಪತ್ರೆಗಳಲ್ಲಿ ತಾಯಿ ಮತ್ತು ಮಕ್ಕಳ ಸೇವೆಗಳನ್ನು ನೀಡಲಾಗುತ್ತಿದೆ ಹಾಗೂ General ailments ಗಳಿಗೆ ಕೇವಲ ಹೊರ ರೋಗಿಗಳ ಚಿಕಿತ್ಸೆ, Dog bite ರೋಗಿಗಳಿಗೆ Vaccine ಸಹ ನೀಡಲಾಗುತ್ತಿದೆ.

ಜೆ.ಜೆ.ಆರ್.ನಗರ. ರೆಫರಲ್‌ಆಸ್ಪತ್ರೆಯು ಪಾಲಿಕೆಯ 6ರೆಫರಲ್ ಆಸ್ಪತ್ರೆಗಳಲ್ಲಿ ಒಂದಾಗಿದ್ದು, ವಾರ್ಡ್ ಸಂಖ್ಯೆ–137 (ರಾಯಪುರಂ)ನಲ್ಲಿ ಕಾರ್ಯನಿರ್ವಹಿಸುತ್ತಿದೆ.

ಕರ್ನಾಟಕ ರಾಜ್ಯದಲ್ಲಿ ಆರೋಗ್ಯ ಸೇವೆಗಳನ್ನು 3 level ಗಳಲ್ಲಿ (Primary, secondary, Tertiary) ನೀಡಲಾಗುತ್ತಿದೆ. ಜೆ.ಜೆ.ಆರ್.ನಗರ. ರೆಫರಲ್ ಆಸ್ಪತ್ರೆಯ FRU (First referral Unit) ಆಗಿದ್ದು, Secondary level ಆಸ್ಪತ್ರೆ ಆಗಿರುತ್ತದೆ. ಈ ಆಸ್ಪತ್ರೆಯಲ್ಲಿ ಹೆರಿಗೆಗಳು, ಕ್ಲಿಷ್ಟಕರ ಹೆರಿಗೆಗಳು, LSCS,ಸಂತಾನಹರಣ ಶಸ್ತ್ರಚಿಕಿತ್ಸೆಗಳು (Tubectomy, Laparoscopy) ಸ್ತ್ರೀರೋಗಕ್ಕೆ ಸಂಬಂಧಿಸಿದಂತೆ ದೊಡ್ಡ/ಸಣ್ಣ

ಶಸ್ತ್ರಚಿಕಿತ್ಸಗಳನ್ನು  ನವಜಾತ ಶಿಶುವಿನ ಆರೈಕೆ, ರೋಗ ನಿರೋದಕ ಚುಚ್ಚುಮದ್ದು, ಈ ರೀತಿತಾಯಿ ಮತ್ತು ಮಕ್ಕಳ ಚಿಕಿತ್ಸೆ ನೀಡಲಾಗುತ್ತಿದೆ. ಈ ಆಸ್ಪತ್ರೆಯ ಸೇವೆಗಳನ್ನು ಸುತ್ತಮುತ್ತಲಿನ 4–5 ವಾರ್ಡ್‌ಗಳ ರೋಗಿಗಳು ಪಡೆಯುತ್ತಿದ್ದಾರೆ.ಈ ವಾರ್ಡಗಳ ಸುತ್ತಮುತ್ತಲಿನ ಜನಸಂಖ್ಯೆ ಸುಮಾರು 2.5 ಲಕ್ಷದಷ್ಟುಇದ್ದು ಈ ವಾರ್ಡ್‌ಗಳ ವ್ಯಾಪ್ತಿಯಲ್ಲಿ ಹಚ್ಚಾಗಿ ಪೌರಕಾರ್ಮಿಕರು, ದಲಿತರು ವಾಸವಾಗಿರುತ್ತಾರೆ. ಈ ವಾರ್ಡ್‌ಗಳ ವ್ಯಾಪ್ತಿಯಲ್ಲಿ ಸಮರ್ಪಕವಾದ ಸಾರ್ವಜನಿಕ ಆಸ್ಪತ್ರೆ ಇರುವುದಿಲ್ಲ ಹಾಗೂ ಇಲ್ಲಿನ ಬಡ ಜನರು ಖಾಸಗಿ ಆಸ್ಪತ್ರೆಗಳ ಚಿಕಿತ್ಸೆ ಪಡೆಯುವ ಸಾಮರ್ಥ್ಯ ಇರುವುದಿಲ್ಲ. ಆದ್ದರಿಂದ ಬೆಂಗಳೂರು ನಗರದಲ್ಲಿರುವ ವಿಕ್ಟೋರಿಯಾ ಆಸ್ಪತ್ರೆಯು ಸುಮಾರು 6–8km ದೂರದಲ್ಲಿದ್ದು, ಈ ಆಸ್ಪತ್ರೆಯ ಮೇಲೆ ಅವಲಂಬಿತರಾಗಿರುತ್ತಾರೆ.

ಆದ್ದರಿಂದ ಪಾಲಿಕೆಯ ವತಿಯಿಂದ ವಾರ್ಡ್ ಸಂಖ್ಯೆ 137ನಲ್ಲಿ ಜೆ.ಜೆ.ಆರ್.ನಗರ.ರೆಫರಲ್ ಆಸ್ಪತ್ರೆ ಆವರಣದಲ್ಲಿ  ಸುಸಜ್ಜಿತ 50  bedded ಸಾರ್ವಜನಿಕ ಆಸ್ಪತ್ರೆಯನ್ನು ನಿರ್ಮಾಣ ಮಾಡುತ್ತಿದ್ದು ಎರಡು ಮಹಡಿಗಳ ಕಟ್ಟಡದ ಕಾಮಗಾರಿಯು ಮುಕ್ತಾಯದ ಹಂತದಲ್ಲಿರುತ್ತದೆ. ಆದುದರಿಂದ ಈ ಆಸ್ಪತ್ರೆಯನ್ನು ಪ್ರಾರಂಭಿಸಲು ಮಾನವ ಸಂಪನ್ಮೂಲ ಹುದ್ದೆಗಳ ಅವಶ್ಯಕತೆ ಇರುತ್ತದೆ. ಈಗಾಗಲೇ ಜೆ.ಜೆ.ಆರ್.ನಗರ.ರೆಫರಲ್ ಆಸ್ಪತ್ರೆಯಲ್ಲಿ ಸ್ತ್ರೀರೋಗ ಹಾಗೂ ಮಕ್ಕಳ ವಿಭಾಗದ ದಲ್ಲಿತಜ್ಞರು ಕಾರ್ಯ ನಿರ್ವಹಿಸುತ್ತಿದ್ದು, ಈ ಆಸ್ಪತ್ರೆಯು 30 bedded FRU ಆಗಿ ಕಾರ್ಯನಿರ್ವಹಿಸುತ್ತಿದೆ, ಆದ್ದರಿಂದ OBG, Pediatrics ಹೊರತು ಪಡಿಸಿ IPHS ಮಾರ್ಗಸೂಚಿಯಂತೆ ಈ ಆಸ್ಪತ್ರೆಯನ್ನು Subdistrict ಆಸ್ಪತ್ರೆಯಾಗಿ ಪರಿಗಣಿಸಿ. (<100 bedded hospital) ಜೆ.ಜೆ.ಆರ್ ಸಾರ್ವಜನಿಕ ಆಸ್ಪತ್ರೆ ಎಂದು ಪ್ರಾರಂಭಿಸಬಹುದಾಗಿರುತ್ತದೆ. ಆದ್ದರಿಂದ ಈ ಜೆ'ಜೆ.ಆರ್ ಸಾರ್ವಜನಿಕ ಆಸ್ಪತ್ರೆಯಲ್ಲಿ IPHS ಮಾರ್ಗ ಸೂಚಿಯಂತೆ ಹಲವಾರು Essential ಸೇವೆಗಳನ್ನು ನೀಡಬೇಕಾಗಿರುತ್ತದೆ. ಆದ್ದರಿಂದ ನೂತನವಾಗಿ ನಿರ್ಮಿಸುತ್ತಿರುವ ಈ ಆಸ್ಪತ್ರೆಯಲ್ಲಿ ಮೊದಲ ಹಂತದಲ್ಲಿ ಈ ಕೆಳಕಂಡ ಸೇವೆಗಳನ್ನು ನೀಡಬಹುದಾಗಿರುತ್ತದೆ.

| Sl no | **Essential service ( minimum Assured service** | **Support services** |
|---|---|---|
| 1 | General Medicine | Finance |
| 2 | General Surgery | Ambulance service |
| 3 | OBG including FP service | Dietary service |
| 4 | Pediatrics | Laundry service |
| 5 | Anesthesia | Central sterile supply department |
| 6 | Ophthalmology | Engineering and maintenance cell |
| 7 | ENT | Security service including fire safety service |
| 8 | Radiology including imaging service | Housekeeping  and sanitation |
| 9 | Dental care | Medical store and inventory management |
| 10 | DOT center | Waste management |
| 11 | Designated Microscopy center | Medical record department including MIS |
| 12 | | Stand by power back-up facility |
| 13 | | Office Management (provision should be made for computerized medical records with anti-virus facilities whereas alternate records should also be maintained) |

ಜೆ.ಜೆ.ಆರ್.ನಗರಆಸ್ಪತ್ರೆಯಲ್ಲಿ ಈಗಾಗಲೇ ರಕ್ತ ಶೇಖರಣಾ ಘಟಕ ಕಾರ್ಯ ನಿರ್ವಹಿಸುತ್ತಿದ್ದು. ಡಾಟ್ ಸೆಂಟರ್ ಹಾಗೂ ಡೆಸಿಗ್ನೇಟೆಡ್ ಮೈಕ್ರೋಸ್ಕೋಪಿ ಸೆಂಟರ್‌ಸಹ ಕಾರ್ಯನಿರ್ವಹಿಸುತ್ತಿದೆ.

ಮೇಲೆ ತಿಳಿಸಿರುವ ಸೇವೆಗಳಿಗೆ ಅಗತ್ಯವಿರುವ ಹುದ್ದೆಗಳನ್ನು ಸೃಜಿಸಲು ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಜೆ.ಜೆ.ಆರ್ ನಗರ ರೆಫರಲ್ ಆಸ್ಪತ್ರೆಗೆ ಮಂಜೂರಾತಿಆಗಿರುವ ಹುದ್ದೆಗಳನ್ನು ಪರಿಗಣಿಸಿ, ಉಳಿದ ಅಗತ್ಯವಿರುವ ವೈದ್ಯಕೀಯ, ಅರೆವೈದ್ಯಕೀಯ ಹಾಗೂ ಕಛೇರಿ ಸಿಬ್ಬಂದಿಗಳ ಹುದ್ದೆಗಳ ವಿವರ ಈ ಕೆಳಕಂಡಂತಿದೆ. (As Per IPHS Standards)

**ಜೆ.ಜೆ.ಆರ್ ಸಾರ್ವಜನಿಕ ಆಸ್ಪತ್ರೆ (<100 Bedded hospital )ಯಲ್ಲಿ ವಿವಿದ ಸೇವೆಗಳನ್ನು ನೀಡಲು ಅಗತ್ಯವಿರುವ ಹುದ್ದೆಗಳ (Man Power) ವಿವರಗಳು.**

| Sl no | Staff | Subdistrict Hospital (51-100 bedded ) | | Remarks |
|---|---|---|---|---|
| | | Essential | Disirable | |
| 1 | Hospital Superintendent | 1 | | Already Existing |
| 2 | Medicine Specialist | 1 | +1 | Required |
| 3 | Surgery specialist | 1 | +1 | Required |
| 4 | OBG Specialist | 1 | +1 | Already Existing |
| 5 | Pediatrician | 1 | +1 | Already Existing |
| 6 | Anesthetist | 1 | +1 | Already Existing |
| 7 | ENT surgeon | 1 | | Required |
| 8 | Ophthalmology | 1 | | Required |
| 9 | Radiologist | 1 | | Required |
| 10 | Casualty Doctors/General Duty Doctors | 9(at least 4 female Doctors from allopathy) | | Two post Existing |
| 11 | Dental Surgeon | 1 | | Required |
| 12 | Pathologist | 1 | | Required |
| 13 | Biochemistry | 1 | | Required |

**MAN POWER –PARA MEDICAL**

| Sl no | Staff | Subdistrict Hospital (51-100 bedded ) | | Remarks |
|---|---|---|---|---|
| | | Essential | Disirable | |
| 1 | Staff Nurse | 15 | _ | - |
| 2 | Ophthalmic Assistant/Refractionist | 1 | _ | Required |
| 3 | ECG Technician | 1 | _ | Required |
| 4 | Audiometricain | 1 | _ | Required |
| 5 | Laboratory Technicain (Lab + Blood storage) | 5 | _ | 3 posts Already Existing |
| 6 | Radiographer | 1 | _ | Required |
| 7 | Pharmacist | 1 | _ | 1 post Already Existing |

| | | | | |
|---|---|---|---|---|
| 8 | Dental Assistant/Dental Technician | 1 | _ | Required |
| 9 | Counselor | 1(female) | 1(male) | Required |
| 10 | Statistical Assistant | 1 | _ | Required |
| 11 | Medical Records Officer/Technician | 1 | _ | Required |
| 12 | OT Technician | 2 | | Required |

## MANPOWER-ADMINISTRATIVE STAFF

| Sl no | Item | Subdistrict Hospital (51-100 bedded ) Essential | Disirable | Remarks |
|---|---|---|---|---|
| 1 | Junior Administrative Officer/office Superintendent | 1 | _ | Required |
| 2 | Accountant | 1 | _ | Required |
| 3 | Computer Operator | 4 | _ | Outsourced |
| 4 | Driver | 2 | _ | 2 posts Already Existing |
| 5 | Peon | 2 | _ | 1 posts Already Existing |

**ಮುಂದುವರೆದಂತೆ ಈ ಅಗತ್ಯವಿರುವ ಹೆಚ್ಚುವರಿ ಹುದ್ದೆಗಳಗೆ ತಗಲುವ ವೆಚ್ಚದ ವಿವರವನ್ನು ಕೆಳಕಂಡಂತೆ ತೋರಿಸಲಾಗಿದೆ.**

| ವೈದ್ಯಕೀಯ ಹುದ್ದೆಗಳಿಗೆ ವೆಚ್ಚವಾಗುವ ಮೊತ್ತದ ವಿವರ | | | |
|---|---|---|---|
| 1 | 2 | 3 | 14 |
| ಕ್ರ ಸಂ | ಹುದ್ದೆಯ ಹೆಸರು | ಒಟ್ಟು ಹುದ್ದೆ | ಒಟ್ಟು ವೆಚ್ಚ(ಕ್ರ.ಸ.3*12) |
| 1 | Medicine Specialist | 1 | 1068552 |
| 2 | Surgery specialist | 1 | 1068552 |
| 3 | ENT surgeon | 1 | 1068552 |
| 4 | Ophthalmology | 1 | 1068552 |
| 5 | Radiologist | 1 | 1068552 |
| 6 | Casualty Doctors/General Duty Doctors | 9 | 7348968 |
| 7 | Dental Surgeon | 1 | 816552 |
| 8 | Pathologist | 1 | 1068552 |
| 9 | Biochemistry | 1 | 1068552 |
| | ಒಟ್ಟು ಹುದ್ದೆ/ಮೊತ್ತ | **17** | **15645384** |

| ಅರೆವೈದ್ಯಕೀಯ ಹುದ್ದೆಗಳಿಗೆ ವೆಚ್ಚವಾಗುವ ಮೊತ್ತ | | | |
|---|---|---|---|
| 1 | 2 | 3 | 13 |
| ಕ್ರ ಸಂ | ಹುದ್ದೆಯ ಹೆಸರು | ಒಟ್ಟು ಹುದ್ದೆ | ಒಟ್ಟು ವೆಚ್ಚ(ಕ್ರ.ಸ.3*12) |
| 9 | Staff Nurse | 15 | 5399820 |
| 10 | Ophthalmic Assistant/Refractionist | 1 | 298236 |

| | | | |
|---|---|---|---|
| 11 | ECG Technician | 1 | 298236 |
| 12 | Audiometricain | 1 | 298236 |
| 13 | Laboratory Technicain (Lab + Blood storage) | 2 | 596472 |
| 14 | Radiographer | 1 | 298236 |
| 15 | Pharmacist | 1 | 298236 |
| 16 | Dental Assistant/Dental Technician | 1 | 298236 |
| 17 | Counselor | 1 | 298236 |
| 18 | Statistical Assistant | 1 | 298236 |
| 19 | Medical Records Officer/Technician | 1 | 298236 |
| 20 | OT Technician | 2 | 596472 |
| | ಒಟ್ಟು ಹುದ್ದೆ/ಮೊತ್ತ | **28** | **9276888** |

| ಕಛೇರಿ ಸಿಬ್ಬಂದಿ | | | |
|---|---|---|---|
| **1** | **2** | **3** | **4** |
| ಕ್ರ ಸಂ | ಹುದ್ದೆಯ ಹೆಸರು | ಒಟ್ಟು ಹುದ್ದೆ | ಒಟ್ಟು ವೆಚ್ಚ(ಕ್ರ.ಸ.3*12) |
| 21 | Junior Administrative Officer/office Superintendent | 1 | 434472 |
| 22 | Accountant | 1 | 402600 |
| | ಒಟ್ಟು ಹುದ್ದೆ/ಮೊತ್ತ | **2** | **837072** |

ಈ ಜೆ.ಜೆ.ಆರ್. ಸಾರ್ವಜನಿಕ ಆಸ್ಪತ್ರೆಗೆ ಒಟ್ಟು 47 ಹುದ್ದೆಗಳ ಅವಶ್ಯಕತೆ ಇದ್ದು, ಇದಕ್ಕೆ ತಗಲುವ ವೆಚ್ಚ ಅಂದಾಜು ರೂ.2,57,59,344/– (ಎರಡುಕೋಟಿ ಐವತ್ತೇಳು ಲಕ್ಷದ ಐವತ್ತೊಂಭತ್ತು ಸಾವಿರದ ಮೂನ್ನೂರ ನಲವತ್ತನಾಲ್ಕು) ರೂ. ಗಳಾಗಿರುತ್ತದೆ.

ಆದ್ದರಿಂದ ಮೇಲ್ಕಂಡ ಅಂಶಗಳನ್ನು ಅವಗಾಹನೆಗೆ ತರುತ್ತಾ, ಅಗತ್ಯವಿರುವ ಸಿಬ್ಬಂದಿಯನ್ನು ನಿಯೋಜಿಸಿಕೊಳ್ಳಲು ಅನುಮತಿಸಿ, ಈ ಸುಸಜ್ಜಿತ ಜೆ.ಜೆ.ಆರ್. ಸಾರ್ವಜನಿಕ ಆಸ್ಪತ್ರೆಯನ್ನು ಪ್ರಾರಂಭಿಸಲು ಹಾಗೂ ಹೆಚ್ಚುವರಿ ಹುದ್ದೆಗಳಿಗೆ ತಗಲುವ ಅಂದಾಜು ವೆಚ್ಚ ರೂ.2,57,59,344/–ಗಳನ್ನು ಪಾಲಿಕೆಯ ಆಯವ್ಯಯದಲ್ಲಿ ಪ್ರತಿವರ್ಷ ಕಾಯ್ದಿರಿಸಿ ಬಳಸಿಕೊಳ್ಳಲು ಅನುಮೋದನೆ ಕೋರಿ ಟಿಪ್ಪಣಿ ಮಂಡಿಸಿದೆ.

**ನಿರ್ಣಯ: ವಿಶೇಷ ಆಯುಕ್ತರು (ಆರೋಗ್ಯ ಮತ್ತು ಘನತ್ಯಾಜ್ಯ) ರವರ ದಿನಾಂಕ: 11.04.2017ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## *191. ವಿಷಯದ ಸಂಖ್ಯೆಃ ತೆಆಸ್ಥಾಸ/14/2017–18*

ಆಯುಕ್ತರ ದಿನಾಂಕ: 17.04.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪಾಲಿಕೆಯ ಅನುದಾನದಲ್ಲಿ ನಿರ್ವಹಿಸಿದ ಗುತ್ತಿಗೆದಾರರ ಕಾಮಗಾರಿ ಬಿಲ್‌ಗಳ ಮೊಬಲಗನ್ನು ಆನ್‌ಲೈನ್ ಮೂಲಕ ದಿನಾಂಕ: 05.05.2016ರ ಆಯುಕ್ತರ ಆದೇಶದ ರೀತ್ಯಾ ಅನುದಾನ ಲಭ್ಯತೆಗನುಗುಣವಾಗಿ ಬಿಲ್‌ಗಳನ್ನು ಪಾವತಿ ಮಾಡಲಾಗುತ್ತಿರುತ್ತದೆ.

ಘನ ನ್ಯಾಯಾಲಯದ ರಿಟ್‌ಪಿಟಿಷನ್ ಸಂ: 6883 of 2015 (GM-TEN), Dtd:17-04-2015ರ ಆದೇಶದಲ್ಲಿ ಸೂಚಿಸಿರುವಂತೆ ಗುತ್ತಿಗೆದಾರರು ನಿರ್ವಹಿಸಿದ ಕಾಮಗಾರಿ ಬಿಲ್ಲುಗಳನ್ನು ಪಾವತಿ ಮಾಡಲು ಸರ್ಕಾರಿ ಆದೇಶ ಸಂ: PWD/260/SO/FC/2000(P), Dtd:25-09-2001 ರಲ್ಲಿನ ಮಾರ್ಗಸೂಚಿಗಳನ್ನು ಪಾಲಿಕೆಯಲ್ಲಿಯೂ ಸಹಾ ಅಳವಡಿಸಿಕೊಂಡು ಕಛೇರಿ ಆದೇಶ ಸಂ:ಮುಲೆಅ/ಪಿಆರ್/4415/15–16, ದಿನಾಂಕ:05–05–2016ರಲ್ಲಿ ಜೇಷ್ಠತೆ ಆಧಾರದ ಮೇಲೆ ಬಿಲ್ಲುಗಳನ್ನು ಪಾವತಿ ಮಾಡಲು ಆದೇಶಿಸಲಾಗಿರುತ್ತದೆ.

ಸದರಿ ಕಛೇರಿ ಆದೇಶ ಮತ್ತು ದಿನಾಂಕ:22–03–2017ರ ವಿಸ್ತರಣೆ ಕಛೇರಿ ಆದೇಶದಂತೆ "ಬಿಬಿಎಂಪಿ ಅನುದಾನದಲ್ಲಿ ನಿರ್ವಹಿಸಿದ ಕಾಮಗಾರಿಗಳ ಬಾಕಿ ಬಿಲ್‌ಗಳ ಪಾವತಿ ಮಾಡಲು ಕಾಲಾವಧಿಯನ್ನು ದಿನಾಂಕ: 30–09–2015 ರ ಅವಧಿಯ ವರೆಗೆ ವಿಸ್ತರಿಸಿ, ಮಾಹೆವಾರು ಜೇಷ್ಠತೆ ಆಧಾರದ ಮೇಲೆ ಹಂತ ಹಂತವಾಗಿ ಅನುದಾನ ಲಭ್ಯತೆಯ ಅನುಗುಣವಾಗಿ ಪಾವತಿಸುವುದು. (ಸದರಿ ಬಿಲ್ಲುಗಳನ್ನು General Seniority ಯಡಿಯಲ್ಲಿ ಪಾವತಿಸಲಾಗುತ್ತಿದೆ).

ಹಾಗೂ ಬಿಬಿಎಂಪಿ ಅನುದಾನದಲ್ಲಿ ನಿರ್ವಹಿಸಿರುವ, ಈ ಕಾಮಗಾರಿಗಳಿಗೆ ಜೇಷ್ಠತೆಯಲ್ಲಿನ ಕಾಲಮಿತಿಯ ಗಡುವು ಅನ್ವಯಿಸದೆ ಆಧ್ಯತೆಯ ಮೇರೆಗೆ ಬಿಲ್‌ಗಳನ್ನು ಮಾನ್ಯ ಮಾಡಿ ಪಾವತಿಸುವುದು. ಅವುಗಳೆಂದರೆ, ಬೃಹತ್ ಯೋಜನೆ ಕಾಮಗಾರಿಗಳು (ಟೆಂಡರ್ ಮೊತ್ತ ರೂ.200.00 ಲಕ್ಷ ಮೇಲ್ಪಟ್ಟ ಮುಂದುವರೆದ/ಚಾಲ್ತಿ ಕಾಮಗಾರಿಗಳು), ಠೇವಣಿ ಮೂಲಕ ವಂತಿಗೆಯನ್ನು ಸ್ವೀಕರಿಸಿ ನಿರ್ವಹಿಸಿದ (Deposit Contribution) ಕಾಮಗಾರಿಗಳು, ಕಾಮಗಾರಿಗಳಿಗೆ Mobilisation Advance ನೀಡುವುದು, ನ್ಯಾಯಾಲಯದ ಪ್ರಕರಣಗಳಿಗೆ ಸಂಬಂಧಿಸಿದ ಪಾವತಿಗಳು, ಭೂಸ್ವಾಧೀನ ಪರಿಹಾರದ ಬಿಲ್‌ಗಳು, ಕಲ್ಯಾಣ ಕಾರ್ಯಕ್ರಮ (24.10%) ಅಡಿಯಲ್ಲಿ ನಿರ್ವಹಿಸಿದ ಕಾಮಗಾರಿಗಳು, ಘನತ್ಯಾಜ್ಯ ಘಟಕಗಳ ಮತ್ತು ಸುತ್ತಮುತ್ತಲಿನ ಹಳ್ಳಿಗಳ ಅಭಿವೃದ್ಧಿ ಮತ್ತು ನಿರ್ವಹಣಾ ಕಾಮಗಾರಿಗಳು, SWDಗೆ ಸಂಬಂಧಿಸಿದಂತೆ ತುರ್ತು ಕಾಮಗಾರಿಗಳು, ರಾಜಕಾಲುವೆಗಳಲ್ಲಿ Desilting ಮತ್ತು ನಿರ್ವಹಣೆ, ಉದ್ಯಾನವನಗಳ ಅಭಿವೃದ್ಧಿ ಮತ್ತು ನಿರ್ವಹಣೆ ಕಾಮಗಾರಿಗಳು, ಪಾಲಿಕೆಯ ಕಟ್ಟಡಗಳ ನಿರ್ಮಾಣ ಕಾಮಗಾರಿ ಮತ್ತು ನಿರ್ವಹಣೆ ಕಾಮಗಾರಿಗಳು, ಬೀದಿ ದೀಪಗಳ ಅಳವಡಿಕೆ ಮತ್ತು ನಿರ್ವಹಣೆ, ಕುಡಿಯುವ ನೀರಿಗೆ ಸಂಬಂಧಿಸಿದ ಕಾಮಗಾರಿಗಳು, ದುರಸ್ತಿ ಮತ್ತು ನಿರ್ವಹಣೆ ಕಾಮಗಾರಿಗಳು, ರಸ್ತೆ ಗುಂಡಿ ಮುಚ್ಚುವುದು, ಸಿಲ್ಟ್ & ಟ್ರ್ಯಾಕ್ಟರ್ ಕಾಮಗಾರಿ ನಿರ್ವಹಣೆ, ಅರಣ್ಯೀಕರಣ ಮತ್ತು ನಿರ್ವಹಣೆ, ಕೆರೆಗಳ ನಿರ್ವಹಣೆ, ಚಿತಾಗಾರ ನಿರ್ವಹಣೆ ಕಾಮಗಾರಿಗಳು" ಎಂದು ಆದೇಶಿಸಲಾಗಿರುತ್ತದೆ. ಸದರಿ ಬಿಲ್ಲುಗಳನ್ನು BBMP Priority Category ಯಡಿಯಲ್ಲಿ ಪಾವತಿಸಲಾಗುತ್ತಿರುತ್ತದೆ.

ಘನ ನ್ಯಾಯಾಲಯದ ರಿಟ್‌ಪಿಟಿಷನ್ ಸಂ:6883 of 2015 (GM-TEN), Dtd:17-04-2015 ರ ಆದೇಶದಲ್ಲಿ ವಿಶೇಷ ಸಂದರ್ಭಗಳಲ್ಲಿ "However, in appropriate cases, deviation in clearing the bills may be made by assigning cogent reasons" ಎಂದು ಆದೇಶಿಸಿರುವ ಮೇರೆಗೆ ಅತೀ ವಿಶೇಷ ಸಂದರ್ಭಗಳಲ್ಲಿ ಬಿಲ್ಲುಗಳನ್ನು ಆಯುಕ್ತರ ವಿವೇಚನೆಗೊಳಪಟ್ಟು Commissioner Order Categoryಯಲ್ಲಿ ಪಾವತಿ ಮಾಡಲಾಗುತ್ತಿರುತ್ತದೆ.

ಈ ಹಿಂದೆ ವಿಶೇಷ ಪ್ರಕರಣಗಳಿಗೆ ಸಂಬಂಧಿಸಿದಂತೆ, ಗುತ್ತಿಗೆದಾರರ ಮತ್ತು ಅವರ ಅವಲಂಬಿತರ ವಿವಾಹ ಮತ್ತು ಅನಾರೋಗ್ಯ ವಿಷಯಗಳಲ್ಲಿ ತೆರಿಗೆ ಮತ್ತು ಅರ್ಥಿಕ ಸ್ಥಾಯಿ ಸಮಿತಿಯ ಸಭೆಯ ನಡವಳಿ ವಿಷಯ ಸಂ:ತೆಆಸ್ಥಾಸ/37/2016–17, ದಿನಾಂಕ:25–07–2016 ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯದ ಸಂ:06(190)/2016–17, ದಿನಾಂಕ:09–08–2016ರಲ್ಲಿ ಆಯುಕ್ತರವರ ಹಂತದಲ್ಲಿಯೇ ನಿರ್ಧರಿಸಿ, ಬಿಲ್ಲುಗಳನ್ನು ಪಾವತಿಸಲು ನಿರ್ಣಯಿಸಲಾಗಿರುತ್ತದೆ. ಅದರಂತೆ ಗುತ್ತಿಗೆದಾರರ ಮತ್ತು ಅವರ ಅವಲಂಬಿತರ ವಿವಾಹ ವಿಷಯಗಳಲ್ಲಿ ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು ಮತ್ತು ಹಣಕಾಸು ವಿಭಾಗರವರ ಪರಿಶೀಲನೆ ಮತ್ತು ದೃಢೀಕರಣದ ಮೇರೆಗೆ ಗುತ್ತಿಗೆದಾರರ ಬಾಕಿ ಬಿಲ್ಲುಗಳಲ್ಲಿ ರೂ.25.00 ಲಕ್ಷದವರೆಗೆ ಪರಿಗಣಿಸಲು ಹಾಗೂ ಅನಾರೋಗ್ಯದ ವಿಷಯದಲ್ಲಿ ಆಸ್ಪತ್ರೆ ಖರ್ಚಿನ ಮೊತ್ತಕ್ಕೆ ಮಿತಿಗೊಳಿಸಿ, ಆಯುಕ್ತರ ಅನುಮೋದನೆಯೊಂದಿಗೆ ಪರಿಗಣಿಸಲು ತೀರ್ಮಾನಿಸಲಾಗಿರುತ್ತದೆ.

ಆದಾಗ್ಯೂ ಸಹಾ ವಿಶೇಷ ಪ್ರಕರಣಗಳೆಂದು ಪರಿಗಣಿಸಿ, ಅನೇಕ ಕಡತಗಳು ಸಲ್ಲಿಕೆಯಾಗುತ್ತಿದ್ದು, ಇವುಗಳನ್ನು ಆಯುಕ್ತರ ಹಂತದಲ್ಲಿ ಪರಿಗಣಿಸಿ, ಪಾವತಿಸಲು ಮಿತಿಯನ್ನು ನಿಗಧಿಪಡಿಸುವುದು ಅವಶ್ಯವಾಗಿರುತ್ತದೆ.

ಆಯುಕ್ತರು ಪಾಲಿಕೆಯಲ್ಲಿ ಹಣಕಾಸಿನ ಲಭ್ಯತೆಗನುಗುಣವಾಗಿ ಶೇ.80ರಷ್ಟು ಹಣವನ್ನು ಜೇಷ್ಠತೆ ಮೂಲಕ ಬಾಕಿ ಬಿಲ್ಲುಗಳನ್ನು (General Seniority) ಪಾವತಿಸಲು ಹಾಗೂ ಶೇ.20ರಷ್ಟು ಹಣವನ್ನು (BBMP Priority Category) ಕಾಲಮಿತಿಯಲ್ಲಿ ನಿರ್ವಹಿಸಿದ ಇತರೆ ನಿರ್ವಹಣೆ ಮತ್ತು ಅವಶ್ಯಕ ಕಾಮಗಾರಿಗಳ ಬಿಲ್ಲುಗಳನ್ನು ಪಾವತಿಸಲು ಉಪಯೋಗಿಸಲಾಗುತ್ತಿರುತ್ತದೆ.

ಅದರಂತೆ, ಪಾಲಿಕೆಯ ಅನುದಾನದಲ್ಲಿ ನಿರ್ವಹಿಸಿರುವ ಬಾಕಿ ಬಿಲ್ಲಿನ ಕಾಮಗಾರಿಗಳಿಗೆ (General Seniority ಯಡಿಯಲ್ಲಿ) ಶೇ.75 (75%), ಪಾಲಿಕೆಯ ಅನುದಾನದಲ್ಲಿ ನಿರ್ವಹಿಸಿದ ನಿರ್ವಹಣೆ ಮತ್ತು ಅವಶ್ಯ ಕಾಮಗಾರಿಗಳಿಗೆ (BBMP Priority Category) ಶೇ.20 (20%), ಹಾಗೂ ವಿಶೇಷ ಪ್ರಕರಣಗಳಿಗೆ Commissioner Order Category ಯಲ್ಲಿ ಬರುವ ಬಿಲ್ಲುಗಳನ್ನು ಶೇ.05 (5%) ರ ಅನುಪಾತದಲ್ಲಿ ಪಾವತಿಸಲು ನಿರ್ಧರಿಸುವುದು ಸೂಕ್ತವಾಗಿರುತ್ತದೆ. ಈ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಟಿಪ್ಪಣಿ ಮಂಡಿಸಲಾಗಿದೆ.

**–ಮುಂದೂಡಿದೆ–**

## ***20]. ವಿಷಯದ ಸಂಖ್ಯೆ: ತೆಆಸ್ಥಾಸ/15/2017–18***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 18.04.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, 2015–16 ರ 14ನೇ ಹಣಕಾಸು ಆಯೋಗದ ಅನುದಾನದಡಿ ಸರ್ಕಾರದ ಆದೇಶ ಸಂಖ್ಯೆ ನಅಇ 524 ಎಸ್.ಎಫ್.ಸಿ 2015/ ದಿನಾಂಕ 05–01–2016 ರಲ್ಲಿ ರೂ.17033.00 ಲಕ್ಷಗಳ ಕ್ರಿಯಾ ಯೋಜನೆಯ ಕಾಮಗಾರಿಗಳಿಗೆ ಅನುಮೋದನೆ ನೀಡಿದೆ. ಸಾಮೂಹಿಕ / ಸಾರ್ವಜನಿಕ ಶೌಚಾಲಯ ಮತ್ತು ಸಪ್ವೇಜ್‌ಗಳ ನಿರ್ವಹಣೆ ಕಾಮಗಾರಿಗಳಿಗೆ ರೂ.1098.05 ಲಕ್ಷಗಳ ಅನುದಾನ ನಿಗಧಿಪಡಿಸಿದ್ದು, ವಲಯವಾರು ಅನುದಾನ ನಿಗದಿ ಮಾಡಿರುತ್ತದೆ. ರೂ.1098.05 ಲಕ್ಷಗಳ ಪೈಕಿ 2015–16 ನೇ ಸಾಲಿನಲ್ಲಿ ಕ್ರಿಯಾಯೋಜನೆಯೊಂದಿಗೆ ಪ್ರಸ್ತಾವನೆ ಸಲ್ಲಿಸಿರುವ ರೂ.288.38 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲಾಗಿದೆ. ಕ್ರಿಯಾ ಯೋಜನೆ ಸಲ್ಲಿಸದೇ ಇದ್ದುದರಿಂದ ಉಳಿದ ವಲಯಗಳ ಮೊತ್ತ ರೂ.809.67 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಿರುವುದಿಲ್ಲ. ಯಲಹಂಕ ವಲಯದ ಸಾರ್ವಜನಿಕ ಶೌಚಾಲಯ ಮತ್ತು ಸಪ್ವೇಜ್‌ಗಳ ನಿರ್ವಹಣೆ ಕಾಮಗಾರಿಗಳಿಗೆ ರೂ.61.00 ಲಕ್ಷಗಳ ಅನುದಾನ ನಿಗಧಿಪಡಿಸಿದ್ದು, ಮುಖ್ಯ ಅಭಿಯಂತರರು (ಯಲಹಂಕ) ರವರು ವಾರ್ಡ್ 8ರ 3 ಕಾಮಗಾರಿಗಳ ರೂ.39.60 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಕೋರಿರುತ್ತಾರೆ. ಮುಖ್ಯ ಲೆಕ್ಕಾಧಿಕಾರಿಗಳು 2015–16 ನೇ ಸಾಲಿನ 14ನೇ ಹಣಕಾಸು ಆಯೋಗದ ಅನುದಾನದಡಿ ಮಂಜೂರಾಗಿದ್ದ ರೂ.170.33 ಕೋಟಿಗಳು ಪಾಲಿಕೆಗೆ ಬಿಡುಗಡೆಯಾಗಿರುವುದಾಗಿ ವರದಿಸಿರುತ್ತಾರೆ. ಹಾಗೂ ಸರ್ಕಾರದಿಂದ ಅನುದಾನ ಬಿಡುಗಡೆಯಾಗಿರುವುದರಿಂದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಯೊಂದಿಗೆ 2016–17ರ 14ನೇ ಹಣಕಾಸು ಆಯೋಗದ ಅನುದಾನದ ಲೆಕ್ಕಶೀರ್ಷಿಕೆ ಪಿ–3110 ಅಡಿ ಅಳವಡಿಸಿಕೊಂಡು ರೂ.461.37 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲಾಗಿದೆ. ವಿವರ ಈ ಕೆಳಕಂಡಂತಿದೆ.

**( Rs in Lakhs)**

| Zone | Allocation | Job NO issued | | File under process | Balance |
|---|---|---|---|---|---|
| | | 2015-16 | 2016-17 | | |
| **Dasarahalli** | 44.37 | 44.37 | | | 0.00 |
| **West** | 244.01 | 244.01 | | | 0.00 |
| **South** | 244.01 | | 243.91 | | 0.10 |
| **East** | 244.01 | | 217.46 | | 26.55 |
| **Raja Rajeswari nagar** | 77.64 | | | | 77.64 |
| **Yelahanka** | 61 | | | | 61.00 |

| | | | | | |
|---|---|---|---|---|---|
| **Mahadevapura** | 94.28 | | | | 94.28 |
| **Bommanahalli** | 88.73 | | | 88.73 | 0.00 |
| **TOTAL** | **1098.05** | **288.38** | **461.37** | **88.73** | **259.57** |

2015–16 ನೇ ಸಾಲಿನ 14ನೇ ಹಣಕಾಸು ಆಯೋಗದ ಅನುದಾನ ಬಿಡುಗಡೆಯಾಗಿರುವುದರಿಂದ 2016–17ರ 14ನೇ ಹಣಕಾಸು ಆಯೋಗದ ಅನುದಾನದ ಲೆಕ್ಕಶೀರ್ಷಿಕೆ ಪಿ–3110 ಅಡಿ ಅನುದಾನ ಅಳವಡಿಸಿಕೊಂಡು ಯಲಹಂಕ ವಲಯದ ರೂ.61.00 ಲಕ್ಷಗಳಲ್ಲಿ ರೂ.39.60 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**–ಮುಂದೂಡಿದೆ–**

## ***21]. ವಿಷಯದ ಸಂಖ್ಯೆ: ತೆಆಸ್ಥಾಸ/18/2017–18***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 24.04.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, Fire Safety and allied works to Ambedkar Bhavan at Yalahanka new town (interior Works) in Yelahanka Assembly Constituency at ward No.04 ಕಾಮಗಾರಿಗೆ ರೂ. 430.00 ಲಕ್ಷಗಳ ಅನುದಾನಕ್ಕೆ 2012–13ನೇ ಸಾಲಿನಲ್ಲಿ ರೂ.200.00 ಲಕ್ಷಗಳಿಗೆ ಜಾಬ್‌ಸಂಖ್ಯೆ: 303–13–000031 ನೀಡಲಾಗಿರುತ್ತದೆ.

ಸದರಿ ಕಾಮಗಾರಿಗೆ ರೂ.430.00 ಲಕ್ಷಗಳ ಅಂದಾಜು ವೆಚ್ಚವನ್ನು ಕೈಗೊಳ್ಳಲು ಟೆಂಡರ್ ಕರೆಯಲಾಗಿದ್ದು, ಟೆಂಡರ್‌ಗಿಟ್ಟ ಮೊತ್ತಕ್ಕಿಂತ ಶೇಕಡ.14.99% ಹೆಚ್ಚುವರಿಯಾಗಿದ್ದ ರೂ.4,10,15,578/– ಗಳಿಗೆ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಿಗಳನ್ನು ಚಲಾಯಿಸಿ ಆಡಳಿತಗಾರರ ದಿ: 20.06.2015 ನಡವಳಿಗಳು, ವಿಷಯ ಸಂಖ್ಯೆ: 94/2015–16 ರಂದು ಅನುಮೋದನೆ ನೀಡಿರುತ್ತಾರೆ.

ಮಾನ್ಯ ಆಡಳಿಗಾರರು, ಅನುಮೋದನೆ ನೀಡಿರುವಂತೆ ಗುತ್ತಿಗೆದಾರರಾದ ಮೆ॥ ಸಂಜಯ್ ಮಾರ್ಕೆಟಿಂಗ್ ಮತ್ತು ಪಬ್ಲಿಕ್ ಸಿಟಿ ಸರ್ವಿಸ್ ರವರಿಗೆ ದಿ: 23.06.2015 ರಂದು ಕಾರ್ಯದೇಶವನ್ನು ನೀಡಲಾಗಿರುತ್ತದೆ. ಅದರರಂತೆ ಗುತ್ತಿಗೆದಾರರು ಈ ಮೇರೆಗೆ ಶೇ.70% ರಷ್ಟು ಕಾಮಗಾರಿಯನ್ನು ಪೂರ್ಣಗೊಳಿಸಿರುತ್ತಾರೆ.

ಸದರಿ ಕಾಮಗಾರಿಗೆ ಅನುದಾನ ಲಭ್ಯವಿಲ್ಲದೆ ಇರುವುದರಿಂದ ಗುತ್ತಿಗೆದಾರರು ಕಾಮಗಾರಿಯನ್ನು ಹಾಲಿ ಸ್ಥಗಿತಗೊಳಿಸಿದ್ದು, ನಿಗಧಿತ ಅವಧಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲು ಸಾಧ್ಯವಾಗಿರುವುದಿಲ್ಲ. ಉಳಿದ ಕಾಮಗಾರಿಯನ್ನು ಪೂರ್ಣಗೊಳಿಸಲು ಅನುಕೂಲವಾಗುವಂತೆ ಬಾಕಿ ಇರುವ ರೂ.230.00 ಲಕ್ಷಗಳಿಗೆ ಲೆಕ್ಕಶೀರ್ಷಿಕೆ ಪಿ–2670 ಅಡಿಯಲ್ಲಿ ಜಾಬ್‌ಕೋಡ್ ನೀಡಲು ಮುಖ್ಯ ಅಭಿಯಂತರರು (ಯಲಹಂಕ) ರವರು ಕೋರಿರುತ್ತಾರೆ.

ಸದರಿ ಪ್ರಸ್ತಾವನೆಗೆ ಮುಖ್ಯ ಆರ್ಥಿಕ ಅಧಿಕಾರಿಗಳು ಅನುದಾನ ಲಭ್ಯತೆಯ ಬಗ್ಗೆ ಈ ಕೆಳಕಂಡಂತೆ ವರದಿ ಮಾಡಿರುತ್ತಾರೆ.

2012–13ರ ಆಯವ್ಯಯದ ಲೆಕ್ಕಶಿರ್ಷಿಕೆ ಪಿ–2670 ಅಡಿ ರೂ.200.00 ಲಕ್ಷಗಳ ಅನುದಾನ ಮೀಸಲಿರಿಸಿದ್ದು, ರೂ.200.00 ಲಕ್ಷಗಳಿಗೆ 303–13–000031 ಜಾಬ್‌ಕೋಡ್ ನೀಡಲಾಗಿದೆ. ಮುಖ್ಯಲೆಕ್ಕಾಧಿಕಾರಿಗಳು 33–13–000031 ಜಾಬ್‌ಸಂಖ್ಯೆ ಅಡಿ ಯಾವುದೇ ಪಾವತಿಯಾಗಿರುವುದಿಲ್ಲವೆಂದು ದೃಢೀಕರಿಸಿರುತ್ತಾರೆ.

"2016–17ರ ಆಯವ್ಯಯದಲ್ಲಿ ಪಿ–2670 ಅಡಿ ಯಾವುದೇ ಅನುದಾನ ಮಿಸಲಿರಿಸಿರುವುದಿಲ್ಲ. ಕಾಮಗಾರಿಯು ಒಟ್ಟು ಅಂದಾಜು ಮೊತ್ತ ರೂ.430.00 ಲಕ್ಷಗಳಿದ್ದು, ಪರಿಷ್ಕೃತ ಆಯವ್ಯಯದಲ್ಲಿ

ಈಗಾಗಲೇ ನೀಡಿರುವ ಜಾಬ್‌ಸಂಖ್ಯೆ: 303–13–000031ಗೆ ಮೊತ್ತ ರೂ.200.00 ಲಕ್ಷಗಳ ಜೊತೆ ರೂ.230.00 ಲಕ್ಷಗಳ ಅನುದಾನ ಅಳವಡಿಸಿಕೊಳ್ಳಲು ಹಾಗೂ 303–13–000031 ಜಾಬ್‌ಸಂಖ್ಯೆಯನ್ನು ರೂ.430.00 ಲಕ್ಷಗಳಿಗೆ ಪರಿಷ್ಕೃತಗೊಳಿಸಿ ಪ್ರಮಾಣಪತ್ರ ನೀಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆ ಕೋರಬಹುದಾಗಿದೆ."

ಈ ಹಿನ್ನಲೆಯಲ್ಲಿ ಈಗಾಗಲೇ ರೂ.200.00 ಲಕ್ಷಗಳಿಗೆ ನೀಡಿರುವ ಜಾಬ್‌ಸಂಖ್ಯೆ: 303–13–000031 ಯನ್ನು ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.430.00 ಲಕ್ಷಗಳಿಗೆ ಪರಿಷ್ಕೃತಗೊಳಿಸಿ ಪ್ರಮಾಣಪತ್ರ ನೀಡುವ ಬಗ್ಗೆ ಅನುಮೋದನೆ ಕೋರಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 24–04–2017ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು**

## *221. ವಿಷಯದ ಸಂಖ್ಯೆ: ತೆಆಸ್ಥಾಸ/19/2017–18*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 04.05.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಯವ್ಯಯ 2012–13ನೇ ಸಾಲಿನ ಲೆಕ್ಕಶೀರ್ಷಿಕೆ ಪಿ–2023 ಅಡಿಯಲ್ಲಿ ಶೇ.24.10% ಅನುದಾನದಲ್ಲಿ ಈ ಕೆಳಕಂಡ ಕಾಮಗಾರಿಗೆ ಮುಖ್ಯ ಅಭಿಯಂತರರು (ದಕ್ಷಿಣ) ರವರು ಪ್ರಸ್ತಾಪಿತ ಕಾಮಗಾರಿಗೆ ಜಾಬ್‌ಕೋಡ್ ಪಡೆದಿದ್ದು ಅದರ ವಿವರಗಳು ಈ ಕೆಳಕಂಡಂತಿರುತ್ತದೆ.

| Sl. No | Ward No. | Name of work | Est cost (in Lakhs) | Job code |
|---|---|---|---|---|
| 1 | 188 | Improvements and Construction of C.C drain & Pre –cast covering slab kerb to Indra Colony main road left side Indra Colony | 19.25 | 132-13-000028 |

ಮೇಲ್ಕಾಣಿಸಿದ ಕಾಮಗಾರಿಯು 2012–13ನೇ ಸಾಲಿನ ಪಾಲಿಕೆ ಆಯವ್ಯಯದ ಲೆಕ್ಕಶೀರ್ಷಿಕೆ ಪಿ–2023ರ ಅಡಿಯಲ್ಲಿ ಜಾಬ್‌ಕೋಡ್ ಪಡೆದಿದ್ದು, ಕಾಮಗಾರಿಯು ಫ್ರೀಜ್ ಪಟ್ಟಿಯಲ್ಲಿ ಸೇರಿದ್ದು, ಸದರಿ ಕಾಮಗಾರಿಯು ಪೂರ್ಣಗೊಂಡು ದಿನಾಂಕ: 31.07.2014ರಂದು ಬಿ.ಆರ್. ನಂ.268/14–15ರಲ್ಲಿ ನಮೂದಾಗಿರುವ ಬಗ್ಗೆ ಮುಖ್ಯ ಅಭಿಯಂತರು (ದಕ್ಷಿಣ) ರವರು ತಿಳಿಸಿರುತ್ತಾರೆ.

ಮುಖ್ಯ ಆರ್ಥಿಕ ಅಧಿಕಾರಿಗಳು ವರದಿ ಮಾಡಿರುವಂತೆ ಸದರಿ ಕಾಮಗಾರಿಗೆ ಪಾಲಿಕೆ ಆಯವ್ಯಯ 2016–17ನೇ ಸಾಲಿನ ಲೆಕ್ಕಶೀರ್ಷಿಕೆ ಪಿ–2023 ಮುಂದುವರೆದ ಕಾಮಗಾರಿಗಳಿಗಾಗಿ ಅನುದಾನ ಮೀಸಲಿರಿಸಿಲ್ಲವೆಂದು ವರದಿ ಮಾಡಿರುತ್ತಾರೆ ಹಾಗೂ 2017–18 ಸಾಲಿನ ಆಯವ್ಯಯದಲ್ಲಿ ಮುಂದುವರೆದ ಕಾಮಗಾರಿಯಾಗಿ ಅನುವು ಮಾಡಿಕೊಳ್ಳಲಾಗಿದೆ ಎಂದು ದೃಢೀಕರಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ಪ್ರಸ್ತಾಪಿತ ಕಾಮಗಾರಿಯ ಅಂದಾಜು ಮೊತ್ತವಾದ ರೂ.19.25 ಲಕ್ಷಗಳ ಕಾಮಗಾರಿಯನ್ನು 2017–18ನೇ ಸಾಲಿನ ಆಯವ್ಯಯದಲ್ಲಿ ಮುಂದುವರೆದ ಕಾಮಗಾರಿಗೆ ನಿಗಧಿಪಡಿಸಿದ ಅನುದಾನದಲ್ಲಿ ಭರಿಸಲು ಕ್ರಿಯಾ ಯೋಜನೆಗೆ ಅನುಮೋದನೆ ಹಾಗೂ ಕಾಮಗಾರಿಯನ್ನು ಡಿ–ಫ್ರೀಜ್ ಮಾಡಲು ಕೋರಿ ಮಂಡಿಸಲಾದ ಟಿಪ್ಪಣಿ

**–ಮುಂದೂಡಿದೆ–**

**_23]. ವಿಷಯದ ಸಂಖ್ಯೆ: ತೆಆಸ್ಥಾಸ/20/2017-18_**

ಆಯುಕ್ತರ ದಿನಾಂಕ: 28-04-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ವಿವಿಧ ಸ್ಥಳಗಳಲ್ಲಿ ಗ್ಯಾಂಟ್ರಿಗಳನ್ನು ಅಳವಡಿಸಿ ಜಾಹೀರಾತು ಪ್ರದರ್ಶನ ಮಾಡಲು ಮೆ॥ ಔಟ್‌ಡೋರ್ ಎಡ್ವ್ ಪ್ರೈ.ಲಿ (ಕ್ಲಿಯರ್ ಚಾನಲ್ ಕಮ್ಯೂನಿಕೇಷನ್ ಇಂಡಿಯಾ ಪ್ರೈ.ಲಿ) ರವರಿಗೆ 5 ವರ್ಷಗಳ ಅವಧಿಗೆ ಅನುಮತಿ ನೀಡಿರುವ ನಿರ್ಣಯದ ಪ್ರಸ್ತಾವನೆಯ ಕಡತದಲ್ಲಿ ಆಗಿರುವ ಬೆಳವಣಿಗೆಗಳ ಬಗ್ಗೆ ಸಂಪೂರ್ಣವಾಗಿ ಪರಿಶೀಲಿಸಲಾಗಿ, ಈ ಕೆಳಕಂಡ ಅಂಶಗಳನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅವಗಾಹನೆಗೆ ತರಲಾಗಿದೆ.

1. ಈ ಹಿಂದೆ ಮೆ॥ ಕ್ಲಿಯರ್ ಚಾನಲ್ ಸಂಸ್ಥೆಯವರಿಗೆ ಬಿ.ಓ.ಟಿ ಆಧಾರದ ಮೇಲೆ 10 ಗ್ಯಾಂಟ್ರಿಗಳು ಮತ್ತು 03 ಲೀವರ್‌ಗಳನ್ನು ಡೈರಿ ವೃತ್ತ, ರಿಂಗ್ ರಸ್ತೆ, ಬಿ.ಟಿ.ಎಂ ಜಂಕ್ಷನ್ ಬಳಿ ಅಳವಡಿಸಲು 11 ತಿಂಗಳ ಅವಧಿಗೆ ಮಾತ್ರ ದಿನಾಂಕ:08/11/2001 ರಂದು ಕರಾರು ಒಪ್ಪಂದ ಮಾಡಿಕೊಳ್ಳಲಾಗಿರುತ್ತದೆ.
2. ತದನಂತರ ಪಾಲಿಕೆಯಿಂದ 11 ತಿಂಗಳ ಅವಧಿಗೆ ವಿಧಿಸಿರುವ ಷರತ್ತುಗಳ ಅನ್ವಯವಾಗುವಂತೆ 07 ವರ್ಷಗಳ ಅವಧಿಗೆ ಅನುಮತಿಯನ್ನು ವಿಸ್ತರಿಸಲು ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಲಾಗಿ, 11 ತಿಂಗಳ ಅವಧಿಯನ್ನು ವಿಸ್ತಿರಿಸಲು ತಾಂತ್ರಿಕ ಕಾರಣಗಳಿಂದ ಇಲ್ಲಿಯವರೆಗೂ ಯಾವುದೇ ಕ್ರಮಗಳನ್ನು ತೆಗೆದುಕೊಂಡಿರುವುದಿಲ್ಲ.
3. ಡೈರಿ ಸರ್ಕಲ್‌ನಿಂದ ಬಿ.ಟಿ.ಎಂ ಜಂಕ್ಷನ್ ಮೇಲು ಸೇತುವೆ ನಿರ್ಮಾಣ ಸಂಬಂಧ ಬೆಂಗಳೂರು ಅಭಿವೃದ್ದಿ ಪ್ರಾಧಿಕಾರ ರವರು 08 ಗ್ಯಾಂಟ್ರಿಗಳನ್ನು ಹಾಗೂ 01 ಗ್ಯಾಂಟ್ರಿ ಲೀವರ್‌ಗಳನ್ನು ತೆರವುಗೊಳಿಸಿದ್ದು, ಬದಲಿ ವ್ಯವಸ್ಥೆಗೆ 1) ಹೋಟೆಲ್ ಚಾಲುಕ್ಯ-ಬಸವೇಶ್ವರ ವೃತ್ತ 2) ವಿಂಡ್ಸರ್ ಮ್ಯಾನರ್ ಹತ್ತಿರ 3) ಮೇಖ್ರಿ ವೃತ್ತ, ಬಿ.ಐ.ಎಲ್ ರೋಡ್ ರಿಂದ ಕಾವೇರಿ ಜಂಕ್ಷನ್ ರವರೆಗೆ 4) ಆರ್.ಎಂ.ವಿ ಎಕ್ಸ್‌ಟೆನ್‌ಷನ್ ಸದಾಶಿವನಗರ ಪೋಲಿಸ್ ಸ್ಟೇಷನ್ ಹತ್ತಿರ 5) ಪಶು ಸಂಗೋಪನಾ ಕಾಲೇಜು ಹೆಬ್ಬಾಳ 6) ಹೆಬ್ಬಾಳ ಪೋಲಿಸ್ ಸ್ಟೇಷನ್ ಹತ್ತಿರ 7) ಮಾರತ್ತಹಳ್ಳಿ ಹೊರವರ್ತುಲ ರಸ್ತೆ 8) ಮಾರತ್ತಹಳ್ಳಿ ವರ್ತೂರು ರಸ್ತೆ 9) ಕೋರಮಂಗಲ ಚೆಕ್ ಪೋಸ್ಟ್ ಈ ಸ್ಥಳಗಳನ್ನು ಬದಲಿ ಸ್ಥಳಗಳನ್ನಾಗಿ ನೀಡುವಂತೆ ಕೋರಿರುತ್ತಾರೆ.
4. ಈ ಸಂಬಂಧ ಪ್ರಸ್ತಾವನೆಯನ್ನು ನಗರ ಯೋಜನೆ ಮತ್ತು ಅಭಿವೃದ್ದಿ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಈ ಎರಡು ಸಮಿತಿಗಳ ನಿರ್ಣಯದಂತೆ ಪ್ರಸ್ತಾವನೆಯಲ್ಲಿನ ಷರತ್ತು ಮತ್ತು ಕರಾರುಗಳಿಗೆ ಒಳಪಟ್ಟು ಅಗತ್ಯ ಸ್ಥಳ ಬದಲಾವಣೆಯ ಮಾರ್ಪಡುಗಳನ್ನು ಮಾಡಿಕೊಳ್ಳಲು ಹಾಗೂ 09 ಗ್ಯಾಂಟ್ರಿಗಳನ್ನು ಅಳವಡಿಸಲು ಅನುಮತಿ ಆದೇಶ ನೀಡುವ ದಿನಾಂಕದಿಂದ ಮುಂದಿನ 05 ವರ್ಷಗಳ ಅವಧಿಗೆ ಅನುಮತಿ ನೀಡುವುದೆಂದು ತೀರ್ಮಾನಿಸಲಾಗಿರುತ್ತದೆ.
5. ಸದರಿ ತೀರ್ಮಾನದಂತೆ ಕ್ರಮವಹಿಸುವ ಹಂತದಲ್ಲಿ ಪ್ರಸ್ತಾವನೆ ಇದ್ದಾಗ ಬೇರೊಂದು ಸಂಸ್ಥೆಯಾದ ಗ್ರೀನ್ ಲೈನ್ ಸಂಸ್ಥೆಯವರು ಮೇಲ್ಕಂಡಂತೆ ವಿವರಿಸಿರುವ ಸ್ಥಳಗಳಲ್ಲಿ ಗ್ಯಾಂಟ್ರಿಗಳನ್ನು ಅಳವಡಿಸಲು 2000-2009ರ ಅವಧಿಗೆ ಅನುಮತಿಯನ್ನು ಪಡೆದುಕೊಂಡಿದ್ದು, ಸದರಿ ಅವಧಿಯನ್ನು ವಿಸ್ತರಿಸಲು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರೀಟ್ ಅರ್ಜಿ ಸಂಖ್ಯೆ:6473/2009 ರಲ್ಲಿ ದಾವೆ ಹೂಡಿದ್ದು, ಸದರಿ ದಾವೆಯಲ್ಲಿ ಮಾನ್ಯ ನ್ಯಾಯಾಲಯವು ಕೆ.ಎಂ.ಸಿ ಕಾಯ್ದೆಯಲ್ಲಿ ಗ್ಯಾಂಟ್ರಿ ಬಗ್ಗೆ ಉಲ್ಲೇಖ ಇಲ್ಲದ ಕಾರಣ ಈಗಾಗಲೇ ಅಳವಡಿಸಿರುವ ಗ್ಯಾಂಟ್ರಿಗಳನ್ನು ತೆರವುಗೊಳಿಸಿ ವರದಿ ಸಲ್ಲಿಸಲು ಮಾನ್ಯ ಆಯುಕ್ತರಿಗೆ ನಿರ್ದೇಶನ ನೀಡಿ ದಾವೆಯನ್ನು ಇತ್ಯರ್ಥಪಡಿಸಲಾಗಿರುತ್ತದೆ.

6. ಸದರಿ ನ್ಯಾಯಾಲಯದ ಆದೇಶವನ್ನು ಉಲ್ಲೇಖಿಸಿ ದಿನಾಂಕ:17/09/2009 ರಂದು ಪಾಲಿಕೆಯ ವ್ಯಾಪ್ತಿಯಲ್ಲಿ ಗ್ಯಾಂಟ್ರಿಗಳನ್ನು ನಿರ್ಮಾಣ ಮಾಡುವುದನ್ನು ನಿಷೇಧ ಮಾಡಲಾಗಿರುವುದರಿಂದ ಗ್ಯಾಂಟ್ರಿಗಳಿಗೆ ಅನುಮತಿ ನೀಡಲು ಸಾಧ್ಯವಿಲ್ಲವೆಂದು ಮೆ॥ ಕ್ಲಿಯರ್ ಚಾನಲ್ ಸಂಸ್ಥೆಯವರಿಗೆ ಹಿಂಬರಹವನ್ನು ಜಾರಿ ಮಾಡಲಾಗಿರುತ್ತದೆ.
7. ಜಾರಿಗೊಳಿಸಿದ ಹಿಂಬರಹವನ್ನು ಪ್ರಶ್ನಿಸಿ ಮೆ॥ ಕ್ಲಿಯರ್ ಚಾನಲ್ ಸಂಸ್ಥೆಯವರು ಉಚ್ಚ ನ್ಯಾಯಾಲಯದಲ್ಲಿ ಡಬ್ಲ್ಯೂ.ಪಿ ಸಂಖ್ಯೆ:103/2010 ರಂತೆ ಪಾಲಿಕೆಯ ವಿರುದ್ಧ ದಾವೆ ಹೂಡಿದ್ದು, ಸದರಿ ದಾವೆಯ ಬಗ್ಗೆ ಪಾಲಿಕೆಯ ಜಾಹೀರಾತು ಬೈಲಾ 2006 ಗಳನ್ನು ಪರಿಶೀಲಿಸಿ 06 ವಾರದೊಳಗಾಗಿ ಅರ್ಜಿದಾರರ ಮನವಿಯನ್ನು ಪುನರ್ ಪರಿಶೀಲಿಸುವಂತೆ ನ್ಯಾಯಾಲಯವು ಆದೇಶ ನೀಡಿದ್ದು, ಅದರಂತೆ ಸಂಸ್ಥೆಯವರಿಗೆ ನೋಟಿಸ್ ನೀಡಿ ಅವರ ಅಭಿಪ್ರಾಯವನ್ನು ಪಡೆದು ದಿನಾಂಕ:28/08/2010 ರಂದು ವಿವರವಾದ ಆದೇಶ ಹೊರಡಿಸಿ ಸಂಸ್ಥೆಯವರ ಮನವಿಯನ್ನು ತಿರಸ್ಕರಿಸಲಾಗಿದೆ.
8. ಸದರಿ ಆದೇಶದ ಮೇಲೆ ಸಂಸ್ಥೆಯವರು ಕೆಎಂಸಿ ಕಾಯ್ದೆ 444ರ ಅಡಿಯಲ್ಲಿ ಪಾಲಿಕೆಯ ಅಪೀಲು ಸ್ಥಾಯಿ ಸಮಿತಿಗೆ ದಿನಾಂಕ:04/01/2011 ರಂದು ಮೇಲ್ಮನವಿ ಸಲ್ಲಿಸಿರುವುದನ್ನು ಸಮಿತಿಯು ಪರಿಶೀಲಿಸಿ, ಮೆ॥ ಕ್ಲಿಯರ್ ಚಾನಲ್ ಸಂಸ್ಥೆಯವರಿಗೆ 09 ಗ್ಯಾಂಟ್ರಿಗಳನ್ನು ಸೂಕ್ತ ಸ್ಥಳಗಳಲ್ಲಿ 05 ವರ್ಷಗಳ ಕಾಲ ನಗರ ಪಾಲಿಕೆಯಲ್ಲಿ ಅಳವಡಿಸಿಕೊಳ್ಳಲು ಅನುಮತಿಸುವಂತೆ ದಿನಾಂಕ:11/03/2011 ರಂದು ತೀರ್ಮಾನ ತೆಗೆದುಕೊಂಡಿದ್ದು, ಸದರಿ ತೀರ್ಮಾನದ ನಿರ್ಣಯವನ್ನು ಪಾಲಿಕೆಯ ಸಭೆಯ ವಿಷಯದ ಸಂಖ್ಯೆ:5(289)/2010–11 ದಿನಾಂಕ:29/03/2011 ರಲ್ಲಿ ಅಂಗೀಕರಿಸಲಾಗಿರುತ್ತದೆ.
9. ಆದರೆ ಸದರಿ ಸಂಸ್ಥೆಯವರಿಗೆ ಅನುಮತಿ ನೀಡುವ ಮುನ್ನ ಮೇಲ್ಕಂಡ ನಿರ್ಣಯಗಳನ್ನು ಮಾನ್ಯ ಆಯುಕ್ತರು ರವರ ಅನುಮೋದನೆಗೆ ಸಲ್ಲಿಸದೆ ಪಾಲಿಕೆ ಸಭೆಯ ದಿನಾಂಕ:29/03/2011ರ ನಿರ್ಣಯದಂತೆ ಪ್ರಧಾನ ಅಭಿಯಂತರರು ಬಿಬಿಎಂಪಿ ರವರ ಆದೇಶದನ್ವಯ ಕಾರ್ಯಪಾಲಕ ಅಭಿಯಂತರರು ದಿನಾಂಕ:10/06/2011 ರಂದು ಸಂಸ್ಥೆಯವರೊಂದಿಗೆ ಕರಾರು ಒಪ್ಪಂದ ಮಾಡಿಕೊಂಡು ಕಾರ್ಯಾದೇಶವನ್ನು ನೀಡಿರುತ್ತಾರೆ.
10. ಈ ಬಗ್ಗೆ ಮಾನ್ಯ ವಿಶೇಷ ಆಯುಕ್ತರು(ಯೋಜನೆ) ರವರು ಪ್ರಸ್ತಾಪಿಸಿ ದಿನಾಂಕ:11/03/2011ರ ಅಪೀಲು ಸ್ಥಾಯಿ ಸಮಿತಿಯ ನಿರ್ಣಯ ಮತ್ತು ಪಾಲಿಕೆಯ ಸಭೆಯ ವಿಷಯದ ಸಂಖ್ಯೆ:5(289)/2010–11 ದಿನಾಂಕ:29/03/2011 ರಲ್ಲಿ ತೆಗೆದುಕೊಂಡ ನಿರ್ಣಯವನ್ನು ರದ್ದುಗೊಳಿಸಲು ದಿನಾಂಕ:29/06/2012 ರಂದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ಯಾವುದೇ ರೀತಿಯ ತೀರ್ಮಾನ ಕೈಗೊಂಡಿರುವುದಿಲ್ಲ.
11. ಅಷ್ಟರಲ್ಲಿ ಸದರಿ ಸಂಸ್ಥೆಯವರು ಪಾಲಿಕೆಯ ವಿರುದ್ಧ ನಿರಾಕ್ಷೇಪಣಾ ಪತ್ರವನ್ನು ನೀಡಿಲ್ಲವೆಂದು ಉಚ್ಚ ನ್ಯಾಯಾಲಯದಲ್ಲಿ ಡಬ್ಲ್ಯೂ.ಪಿ ಸಂಖ್ಯೆ:10850/2012 ದಾವೆಯನ್ನು ಹೂಡಿರುತ್ತಾರೆ. ಈ ದಾವೆಗೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯವು ಪರಿಶೀಲಿಸಿ 07 ಗ್ಯಾಂಟ್ರಿಗಳಿಗೆ ಸಂಬಂಧಿಸಿದಂತೆ ನಿರಾಕ್ಷೇಪಣಾ ಪತ್ರವನ್ನು ನೀಡಲು, ಸದರಿ ಗ್ಯಾಂಟ್ರಿಗಳಲ್ಲಿ ಅಳವಡಿಸುವ ಜಾಹೀರಾತುಗಳಿಗೆ 5 ವರ್ಷಗಳಿಗೆ ಅನುಮತಿಸಿರುವುದನ್ನು 3 ವರ್ಷಗಳಿಗೆ ಪರಿಗಣಿಸಿ ಅನುಮತಿಸಲು ಹಾಗೂ ಜಾಹೀರಾತು ತೆರಿಗೆಯನ್ನು ವಿಧಿಸಿ ನೆಲ ಬಾಡಿಗೆಯನ್ನು ಪರಿಷ್ಕರಿಸಲು ಆದೇಶ ಮಾಡಿರುತ್ತದೆ.
12. ಸದರಿ ನ್ಯಾಯಾಲಯದ ಆದೇಶದಂತೆ ಮೆ॥ ಕ್ಲಿಯರ್ ಚಾನಲ್ ಕಮ್ಯೂನಿಕೇಷನ್ ಪ್ರೈ.ಲಿಮಿಟೆಡ್ ರವರಿಗೆ ಪಾಲಿಕೆಯು ಅನುಮತಿಸಿರುವ 07 ಗ್ಯಾಂಟ್ರಿಗಳಲ್ಲಿ ಅಳವಡಿಸುವ ಜಾಹೀರಾತುಗಳಿಗೆ 5 ವರ್ಷಗಳಿಗೆ ಅನುಮತಿಸಿರುವುದನ್ನು 3 ವರ್ಷಗಳಿಗೆ ಅನುಮತಿಸಲು

ಉಲ್ಲೇಖಿಸದೇ ಜಾಹೀರಾತು ನೆಲ ಬಾಡಿಗೆಯನ್ನು ಪರಿಷ್ಕರಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಮಂಡಿಸಲಾದ ಟಿಪ್ಪಣಿಯನ್ನು ಸಮಿತಿಯು ಪರಿಶೀಲಿಸಿ, ದಿನಾಂಕ:23/09/2013 ರಂದು ವಿಷಯ ಸಂಖ್ಯೆ: ತೆಆಸ್ಥಾಸ/09/2012-13 ರಲ್ಲಿ ನೆಲಬಾಡಿಗೆ ಒಂದು ಗ್ಯಾಂಟ್ರಿಗೆ ವಾರ್ಷಿಕ ರೂ.1,20,000/- ಗಳಿಗೆ ಪರಿಷ್ಕರಿಸಲಾಗಿರುತ್ತದೆ.

13. ಸದರಿ ನಿರ್ಣಯವನ್ನು ಕಡತದಲ್ಲಿ ದಿನಾಂಕ: 11/11/2013 ರಂದು ಮಾನ್ಯ ಆಯುಕ್ತರು ಅಂಗೀಕರಿಸಿದ್ದು, ಅಂಗೀಕರಿಸಿದ ದಿನಾಂಕದಿಂದ ಅನ್ವಯಿಸುವಂತೆ ಸಂಸ್ಥೆಯವರಿಗೆ ದಿನಾಂಕ: 11/11/2013 ರಿಂದ 10/11/2018 ರವರೆಗೆ ಅನುಮತಿ ನೀಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ನಿರ್ಣಯಿಸಿರುವ ಮೇರೆಗೆ ಎಂದು ಉಲ್ಲೇಖಿಸಿ ವಾರ್ಷಿಕ ನೆಲ ಬಾಡಿಗೆ ಮತ್ತು ವಾರ್ಷಿಕ ಜಾಹೀರಾತು ತೆರಿಗೆ ಸೇರಿ ರೂ.21,97,500/- ಗಳಿಗೆ ಡಿಮ್ಯಾಂಡ್ ನೋಟಿಸ್ ಸಿದ್ದಪಡಿಸಿ ದಿನಾಂಕ: 13/11/2013 ರಂದು ಡಿಮ್ಯಾಂಡ್ ನೋಟಿಸ್‌ನ್ನು ಜಾರಿಗೊಳಿಸಲಾಗಿರುತ್ತದೆ. (ಆದರೆ ನ್ಯಾಯಾಲಯವು ನೀಡಿರುವ ತೀರ್ಪಿನಂತೆ ಸದರಿಯವರಿಗೆ ನೀಡಿರುವ ಅನುಮತಿಯು ದಿನಾಂಕ: 10/11/2016ಕ್ಕೆ ಮುಕ್ತಾಯವಾಗುತ್ತದೆ)

14. ಅದರಂತೆ ಸದರಿ ಸಂಸ್ಥೆಯವರು ದಿನಾಂಕ: 21/11/2013 ರಂದು ಡಿ.ಡಿ.ಸಂಖ್ಯೆ:000463 ದಿನಾಂಕ:16/11/2013 ರೂ.11,50,000/- ಹಾಗೂ ಡಿ.ಡಿ ಸಂಖ್ಯೆ:000472 ದಿನಾಂಕ:20/11/2013 ರೂ.8,31,500/- ಹೆಚ್‌ಡಿಎಫ್‌ಸಿ ಬ್ಯಾಂಕ್‌ನಲ್ಲಿ ಪಡೆದ ಒಟ್ಟು ರೂ.19,81,500/- ಗಳನ್ನು ಮಾತ್ರ ಪಾವತಿಸಿದ್ದು, ಈ ಮೊತ್ತದ ಡಿಡಿಗಳನ್ನು ಪಾಲಿಕೆಯ ಖಾತೆಗೆ ಜಮಾ ಮಾಡಲಾಗಿರುತ್ತದೆ. ಜಮಾ ಮಾಡಿರುವ ಡಿಡಿಗಳ ಮೊತ್ತ ರೂ.19,81,500/- ಗಳು ಪಾಲಿಕೆಯ ಖಾತೆಗೆ ಜಮೆ ಆಗಿರುವುದು ಬ್ಯಾಂಕ್ ಪಾಸ್‌ಶೀಟ್‌ನಲ್ಲಿ ಕಂಡುಬಂದಿರುತ್ತದೆ.

15. ನಂತರ ದಿನಾಂಕ: 04/03/2016 ರಂದು 2014-15 ಮತ್ತು 2015-16ನೇ ಸಾಲಿನ ಅವಧಿಗೆ ರೂ.43,82,280/- ಜಾಹೀರಾತು ತೆರಿಗೆಯನ್ನು ಪಾವತಿಸಲು ಷರತ್ತುಬದ್ದ ಡಿಮ್ಯಾಂಡ್ ನೋಟಿಸ್‌ನ್ನು ಜಾರಿಗೊಳಿಸಿದ್ದು, ತಹಲ್‌ವರೆಗೂ ಸಂಸ್ಥೆಯವರು ಬಾಕಿ ತೆರಿಗೆಯನ್ನು ಪಾವತಿಸಿರುವುದಿಲ್ಲ.

16. ಮೇಲ್ಕಂಡಂತೆ ಜಾರಿಗೊಳಿಸಿರುವ ಡಿಮ್ಯಾಂಡ್ ನೋಟಿಸ್‌ಗೆ ಉತ್ತರವಾಗಿ ದಿನಾಂಕ:01/04/2016 ರಂದು ಸಂಸ್ಥೆಯವರು ಮನವಿ ಸಲ್ಲಿಸಿ, ದಿನಾಂಕ:11/11/2013 ರಿಂದ 10/11/2014 ರವರೆಗೆ ಪ್ರತಿ ಚ.ಮೀ.ಗೆ ರೂ.260/- ರಂತೆ ಪಾಲಿಕೆಗೆ ಜಾಹೀರಾತು ತೆರಿಗೆ ಪಾವತಿಸಿದ್ದು, ಜಾಹೀರಾತು ಬೈಲಾ ತಿದ್ದುಪಡಿ 2012ಕ್ಕೆ ಸರ್ಕಾರವು ದಿನಾಂಕ:25/07/2015 ರಂದು ಅನುಮೋದನೆ ನೀಡಿದ್ದು, ಅದರಂತೆ ಈ ಹಿಂದಿನ ಸಾಲಿನಲ್ಲಿ ಹೆಚ್ಚುವರಿಯಾಗಿ ಪಾವತಿಸಿರುವ ತೆರಿಗೆಯ ಬಗ್ಗೆ ಪರಿಶೀಲಿಸಿ ಪರಿಷ್ಕೃತ ಡಿಮ್ಯಾಂಡ್ ನೋಟಿಸ್ ನೀಡಲು ಕೋರಿರುತ್ತಾರೆ.

**ಮೇಲಿನಂತೆ ವಿವರಿಸಿರುವ ಅಂಶಗಳನ್ವಯ ಕೆಳಕಂಡ ಅಂಶಗಳನ್ವಯ ಮುಂದಿನ ಕ್ರಮ ಜರುಗಿಸಬಹುದಾಗಿದೆ.**

a) ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರೀಟ್ ಅರ್ಜಿ ಸಂಖ್ಯೆ:6473/2009 ರಲ್ಲಿ ದಾವೆ ಹೂಡಿದ್ದು, ಸದರಿ ದಾವೆಯಲ್ಲಿ ಮಾನ್ಯ ನ್ಯಾಯಾಲಯವು ಕೆ.ಎಂ.ಸಿ ಕಾಯ್ದೆಯಲ್ಲಿ ಗ್ಯಾಂಟ್ರಿ ಬಗ್ಗೆ ಉಲ್ಲೇಖ ಇಲ್ಲದ ಕಾರಣ ಈಗಾಗಲೇ ಅಳವಡಿಸಿರುವ ಗ್ಯಾಂಟ್ರಿಗಳನ್ನು ತೆರವುಗೊಳಿಸಲು ಆದೇಶಿಸಿ ದಾವೆಯನ್ನು ಇತ್ಯರ್ಥಪಡಿಸಲಾಗಿರುತ್ತದೆ.

b) ದಿನಾಂಕ:25/07/2015ರ ಸರ್ಕಾರಿ ಆದೇಶದಂತೆ ದಿನಾಂಕ: 16/01/2016 ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಹೊರಡಿಸಿರುವ ಜಾಹೀರಾತು ಬೈಲಾ ತಿದ್ದುಪಡಿ-2012ರ ಅನ್ವಯ ಜಾಹೀರಾತು ಬೈಲಾ ಭಾಗ-1 ಸಾಮಾನ್ಯ ಶೀರ್ಷಿಕೆಯಡಿ ಉಪವಿಧಿ 2ಎ(21) ಗ್ಯಾಂಟ್ರಿ

ಜಾಹೀರಾತು ಸಂಚಾರ ವಿರುದ್ದ ದಿಕ್ಕಿನಲ್ಲಿರುವ ರಸ್ತೆಯ ಮೇಲೆ ಪ್ರದರ್ಶಿಸುವ ಜಾಹೀರಾತುಗಳು ವಾಹನ ಚಾಲಕರನ್ನು ದಿಕ್ಕು ತಪ್ಪಿಸುವ ಹಾಗೂ ಅಪಘಾತಗಳು ಸಂಭವಿಸುವ ಕಾರಣ ಗ್ಯಾಂಟ್ರಿಗಳಿಗೆ ಅನುಮತಿಸುವುದು ನಿಷೇಧಿಸಲಾಗಿದೆ.

c) ಮಾನ್ಯ ಉಚ್ಚ ನ್ಯಾಯಾಲಯದ ರೀಟ್ ಅರ್ಜಿ ಸಂಖ್ಯೆ:6473/2009 ರಲ್ಲಿ ನ್ಯಾಯಾಲಯವು ನೀಡಿರುವ ತೀರ್ಪಿನ ವಿರುದ್ದ ಸಂಸ್ಥೆಯವರು ಡಬ್ಲ್ಯೂ.ಪಿ ಸಂಖ್ಯೆ:103/2010ರಲ್ಲಿ ಆದೇಶಿಸಿರುವಂತೆ ಪರಿಶೀಲಿಸಿ, ಮೆ॥ ಔಟ್‌ಡೋರ್ ಎಡ್ಸ್ ಪ್ರೈ.ಲಿ (ಕ್ಲಿಯರ್ ಚಾನಲ್ ಕಮ್ಯೂನಿಕೇಷನ್ಸ್ ಇಂಡಿಯಾ ಪ್ರೈ.ಲಿ) ಸಂಸ್ಥೆಯವರಿಗೆ ಪಾಲಿಕೆ ವ್ಯಾಪ್ತಿಯಲ್ಲಿ 07 ಸ್ಥಳಗಳಲ್ಲಿ ಗ್ಯಾಂಟ್ರಿಗಳನ್ನು ಅಳವಡಿಸಿ ವಾಣಿಜ್ಯ ಜಾಹೀರಾತುಗಳನ್ನು ಪ್ರದರ್ಶಿಸಲು ಪಾಲಿಕೆ ಸಭೆಯ ವಿಷಯದ ಸಂಖ್ಯೆ:05/(289)/2010-11 ದಿನಾಂಕ:29/03/2011 ರಂತೆ

**ಹಾಗೂ**

ಮಾನ್ಯ ಉಚ್ಚ ನ್ಯಾಯಾಲಯವು ಡಬ್ಲ್ಯೂ.ಪಿ ಸಂಖ್ಯೆ:10850/2012 ರಲ್ಲಿ ಆದೇಶ ನೀಡಿರುವಂತೆ ಮೆ॥ ಕ್ಲಿಯರ್ ಚಾನಲ್ ಕಮ್ಯೂನಿಕೇಷನ್ ಪ್ರೈ.ಲಿಮಿಟೆಡ್ ರವರಿಗೆ ಪಾಲಿಕೆಯು ಅನುಮತಿಸಿರುವ 07 ಗ್ಯಾಂಟ್ರಿಗಳಲ್ಲಿ ಅಳವಡಿಸುವ ಜಾಹೀರಾತುಗಳಿಗೆ 5 ವರ್ಷಗಳಿಗೆ ಅನುಮತಿಸಿರುವುದನ್ನು 3 ವರ್ಷಗಳಿಗೆ ಅನುಮತಿಸಲು ನೀಡಿರುವ ತೀರ್ಪಿನ್ನು ಉಲ್ಲೇಖಿಸದೇ ನೆಲ ಬಾಡಿಗೆಯನ್ನು ಪರಿಷ್ಕರಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ಪರಿಶೀಲಿಸಿ, ದಿನಾಂಕ:23/09/2013 ರಂದು ವಿಷಯ ಸಂಖ್ಯೆ: ತೆಆಸ್ಥಾಸ/09/2012-13 ರಲ್ಲಿ ನೆಲಬಾಡಿಗೆ ಒಂದು ಗ್ಯಾಂಟ್ರಿಗೆ ವಾರ್ಷಿಕ ರೂ.1,20,000/- ಗಳಿಗೆ ಪರಿಷ್ಕರಿಸಲಾಗಿರುವ ಮೇರೆಗೆ ದಿನಾಂಕ:11/11/2013 ರಿಂದ 10/11/2018 ರವರೆಗೆ ಅನುಮತಿ ನೀಡಿ ವಾರ್ಷಿಕ ನೆಲ ಬಾಡಿಗೆ ಮತ್ತು ವಾರ್ಷಿಕ ಜಾಹೀರಾತು ತೆರಿಗೆ ಸೇರಿ ರೂ.21,97,500/- ಗಳಿಗೆ ಡಿಮ್ಯಾಂಡ್ ನೋಟಿಸ್ ಸಿದ್ದಪಡಿಸಿ ದಿನಾಂಕ: 13/11/2013 ರಂದು ಡಿಮ್ಯಾಂಡ್ ನೋಟಿಸ್‌ನ್ನು ಜಾರಿಗೊಳಿಸಿರುತ್ತಾರೆ. ಆದರೆ ನ್ಯಾಯಾಲಯವು ನೀಡಿರುವ ತೀರ್ಪಿನಂತೆ ಸದರಿಯವರಿಗೆ ನೀಡಿರುವ ಅನುಮತಿಯು 3 ವರ್ಷಗಳಿಗೆ ಪರಿಗಣಿಸಬೇಕಾಗಿದ್ದು, ಇದರನ್ವಯ ಸಂಸ್ಥೆಯವರಿಗೆ ನೀಡಿರುವ ಅನುಮತಿಯನ್ನು ದಿನಾಂಕ:10/11/2016ಕ್ಕೆ ಮುಕ್ತಾಯಗೊಳಿಸಬೇಕಾಗುತ್ತದೆ.

d) ಕಾನೂನು ಕೋಶ ಮುಖ್ಯಸ್ಥರು ಉಲ್ಲೇಖ-3ರಲ್ಲಿ ನೀಡಿರುವ ಅಭಿಪ್ರಾಯ ವರದಿಯಂತೆ ರಿಟ್ ಅರ್ಜಿ ಸಂಖ್ಯೆ:10842-10850/2012ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:30.01.2013 ರಂದು ನೀಡಿರುವ ಆದೇಶದ ಉದ್ರುತ ಭಾಗವು ಈ ಕೆಳಕಂಡಂತೆ ಇರುವುದು.

> "However, what requires to be noticed is that the contract has been indicated for a period of 5years which appears to be based on the resolution passed by the BBMP council accepting the decision of the standing committee indicating that the period would be for 5year. But, the advertisement bye-law no.4A(xiv) as pointed out by the learned counsel for the first respondent would disclose that the contract could be entered into only for a maximum period of three years as indicated therein. Therefore, the present contract though entered into for a period of five years can only be for a period of three years and any permission granted to the petitioner to carry out advertisements on the other side of the gantries can only be for a

period of three years and thereafter any fresh grant of permission can only be made in accordance with law".

ಮೇಲ್ಕಂಡ ಅಂಶಗಳಿಂದಾಗಿ, ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ಆದೇಶದ ಬಗ್ಗೆ ಕ್ರಮ ವಹಿಸಬೇಕಾಗಿರುವುದರಿಂದ ಮತ್ತು ಘನ ಸರ್ಕಾರವು ದಿನಾಂಕ:25/07/2015ರಂದು ನೀಡಿರುವ ಆದೇಶವನ್ನು ಪಾಲಿಸುವ ನಿಟ್ಟಿನಲ್ಲಿ ಈಗಾಗಲೇ ಸದರಿ ಸಂಸ್ಥೆಯವರಿಗೆ ನೀಡಿರುವ ಅನುಮತಿಯು ಮಾನ್ಯ ಉಚ್ಚ ನ್ಯಾಯಾಲಯದ ಆದೇಶದನ್ವಯ ಮೂರು ವರ್ಷಗಳು ಆಗಿರುವುದರಿಂದ, ಕರಾರು ಒಪ್ಪಂದ ಮಾಡಿಕೊಂಡಿರುವುದನ್ನು ರದ್ದುಪಡಿಸುವ ಬಗ್ಗೆ ಪ್ರಶ್ನೆ ಉದ್ಭವಿಸುವುದಿಲ್ಲ. ಪಾಲಿಕೆಗೆ ಸದರಿ ಸಂಸ್ಥೆಯವರಿಂದ ಯಾವುದಾದರೂ ಮೊತ್ತವು ಬಾಕಿ ಇರುವುದಾದ್ದಲ್ಲಿ, ಪಾವತಿಸಿಕೊಳ್ಳಲು ಕ್ರಮವಹಿಸಬಹುದು ಎಂಬುದಾಗಿ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.
ಮೇಲಿನ ಅಂಶಗಳನ್ನು ಮಾನ್ಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಆಧ್ಯ ಗಮನಕ್ಕೆ ತರುತ್ತಾ, ಈ ಕೆಳಕಂಡಂತೆ ಪ್ರಸಾವನೆಯ ವಿಷಯದ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ಟಿಪ್ಪಣಿ ಮಂಡಿಸಿದೆ.

- ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲಿನಂತೆ ಉಲ್ಲೇಖಿಸಿರುವ ವಿವಿಧ ರಿಟ್ ಅರ್ಜಿ ಪ್ರಕರಣಗಳಲ್ಲಿ ಹಾಗೂ ಡಬ್ಲ್ಯೂ.ಪಿ.ಸಂಖ್ಯೆ: 10850/2012ರಲ್ಲಿನ ಆದೇಶದಂತೆ ಹಾಗೂ ದಿನಾಂಕ:25/07/2015 ರಂದು ಸರ್ಕಾರವು ಜಾಹೀರಾತು ಬೈಲಾ 2012ರ ತಿದ್ದುಪಡಿಯಲ್ಲಿ ಗ್ಯಾಂಟ್ರಿಗಳಿಗೆ ಅನುಮತಿಸುವುದು ನಿಷೇಧಿಸಿದೆ ಎಂದು ಅನುಮೋದಿಸಿರುವ ಆದೇಶಗಳನ್ನು ಒಳಗೊಂಡಂತೆ ಹಾಗೂ ಕಾನೂನು ಕೋಶ ಮುಖ್ಯಸ್ಥರ ಅಭಿಪ್ರಾಯ ವರದಿಯನ್ನು ಆಧರಿಸಿ, ಮೆ॥ ಔಟ್‌ಡೋರ್ ಎಡ್ಸ್ ಪ್ರೈ.ಲಿ. (ಕ್ಲಿಯರ್ ಚಾನಲ್ ಕಮ್ಯೂನಿಕೇಷನ್ಸ್ ಇಂಡಿಯಾ ಪ್ರೈ.ಲಿ) ಸಂಸ್ಥೆಯವರಿಗೆ ಪಾಲಿಕೆ ವ್ಯಾಪ್ತಿಯಲ್ಲಿ 07 ಸ್ಥಳಗಳಲ್ಲಿ ಗ್ಯಾಂಟ್ರಿಗಳನ್ನು ಅಳವಡಿಸಿ ವಾಣಿಜ್ಯ ಜಾಹೀರಾತುಗಳನ್ನು ಪ್ರದರ್ಶಿಸಲು 05 ವರ್ಷಗಳ ಅವಧಿಗೆ ಅನುಮತಿ ನೀಡಿರುವುದನ್ನು ನ್ಯಾಯಾಲಯದ ಆದೇಶದಂತೆ 03 ವರ್ಷಗಳಿಗೆ ಸೀಮಿತಗೊಳಿಸಿ ಇದರನ್ವಯ ದಿನಾಂಕ: 10/11/2016ಕ್ಕೆ ಅನುಮತಿಯ ಸಿಂಧುತ್ವ ಅವಧಿಯನ್ನು ಮುಕ್ತಾಯಗೊಳಿಸಿ ಸಂಸ್ಥೆಯಿಂದ 2014-15, 2015-16 ಹಾಗೂ ಅವಧಿ ಮೀರಿ ಜಾಹೀರಾತು ಮುಂದುವರೆಸಿರುವ ಅವಧಿಗೆ ದಂಡವನ್ನು ವಿಧಿಸಿ ಜಾಹೀರಾತು ಪ್ರದರ್ಶನವನ್ನು ತೆರವುಗೊಳಿಸುವುದರೊಂದಿಗೆ ಬಾಕಿ ತೆರಿಗೆ ವಸೂಲಾತಿಗೆ ಕ್ರಮವಹಿಸಲು.

**-ಮುಂದೂಡಿದೆ-**

## ***24]. ವಿಷಯದ ಸಂಖ್ಯೆ: ತೆಆಸ್ಥಾಸ/21/2017-18***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 03.05.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಯವ್ಯಯ 2013-14ನೇ ಸಾಲಿನ ಲೆಕ್ಕಶೀರ್ಷಿಕೆ ಪಿ-1771 ಅಡಿಯಲ್ಲಿ POW works ಅನುದಾನದಲ್ಲಿ ಈ ಕೆಳಕಂಡ ಕಾಮಗಾರಿಗೆ ಮುಖ್ಯ ಅಭಿಯಂತರರು (ಬೊಮ್ಮನಹಳ್ಳಿ) ರವರು ಪ್ರಸ್ತಾಪಿತ ಕಾಮಗಾರಿಗೆ ಜಾಬ್‌ಕೋಡ್ ಪಡೆದಿದ್ದು ಅದರ ವಿವರಗಳು ಈ ಕೆಳಕಂಡಂತಿರುತ್ತದೆ.

| Sl. No | Zone | Ward No. | Name of work | Est cost (in Lakhs) | Job code |
|---|---|---|---|---|---|
| 1 | bommanahalli | 188 | Mainenance of ward No 188 Bilekahalli | 15.00 | 188-14-000010 |

ಮೇಲ್ಕಾಣಿಸಿದ ಕಾಮಗಾರಿಯು 2013–14ನೇ ಸಾಲಿನ ಪಾಲಿಕೆ ಆಯವ್ಯಯದ ಲೆಕ್ಕಶೀರ್ಷಿಕೆ ಪಿ–1771ರ ಅಡಿಯಲ್ಲಿ ಜಾಬ್‌ಕೋಡ್ ಪಡೆದಿದ್ದು, ಕಾಮಗಾರಿಯು ಫ್ರೀಜ್ ಪಟ್ಟಿಯಲ್ಲಿ ಸೇರಿದ್ದು, ಸದರಿ ಕಾಮಗಾರಿಯು ಪೂರ್ಣಗೊಂಡು ದಿನಾಂಕ: 30.10.2014ರಂದು ಬಿ.ಆರ್. ನಂ.222/14–15ರಲ್ಲಿ ನಮೂದಾಗಿರುವ ಬಗ್ಗೆ ಮುಖ್ಯ ಅಭಿಯಂತರು (ಬೊಮ್ಮನಹಳ್ಳಿ) ರವರು ತಿಳಿಸಿರುತ್ತಾರೆ.

ಮುಖ್ಯ ಆರ್ಥಿಕ ಅಧಿಕಾರಿಗಳು ವರದಿ ಮಾಡಿರುವಂತೆ ಸದರಿ ಕಾಮಗಾರಿಗೆ ಪಾಲಿಕೆ ಆಯವ್ಯಯ 2017–18ನೇ ಸಾಲಿನ ಲೆಕ್ಕಶೀರ್ಷಿಕೆ ಪಿ–1771 ಮುಂದುವರೆದ ಕಾಮಗಾರಿಗಳಿಗೆ ರೂ.1214.65 ಲಕ್ಷಗಳು ಹಾಗೂ ಬಾಕಿ ಬಿಲ್ಲುಗಳಿಗೆ ರೂ.20000.00 ಲಕ್ಷಗಳ ಅನುದಾನ ಮೀಸಲಿರಿಸಿದೆ ಹಾಗೂ 2017–18 ಆಯವ್ಯಯದ ಸರ್ಕಾರದಿಂದ ಅನುಮೋದನೆಯಾದ ನಂತರ ಕ್ರಮ ವಹಿಸಬೇಕೆಂದು ತಿಳಿಸಿರುತ್ತಾರೆ ಹಾಗೂ ಕಾರ್ಯಪಾಲಕ ಅಭಿಯಂತರರು (ಬೊಮ್ಮನಹಳ್ಳಿ) ರವರು ಸದರಿ ಕಾಮಗಾರಿಯನ್ನು 2017–18ನೇ ಸಾಲಿನ ಆಯವ್ಯಯದಲ್ಲಿ ಮುಂದುವರೆದ ಕಾಮಗಾರಿಯಾಗಿ ಅನುವು ಮಾಡಿಕೊಳ್ಳಲಾಗಿದೆ ಎಂದು ದೃಢೀಕರಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ಪ್ರಸ್ತಾಪಿತ ಕಾಮಗಾರಿಯ ಅಂದಾಜು ಮೊತ್ತವಾದ ರೂ.15.00 ಲಕ್ಷಗಳ ಕಾಮಗಾರಿಯನ್ನು 2017–18ನೇ ಸಾಲಿನ ಆಯವ್ಯಯದಲ್ಲಿ ಮುಂದುವರೆದ ಕಾಮಗಾರಿಗೆ ನಿಗಧಿಪಡಿಸಿದ ಅನುದಾನದಲ್ಲಿ ಭರಿಸಲು ಕ್ರಿಯಾ ಯೋಜನೆಗೆ ಅನುಮೋದನೆ ಹಾಗೂ ಕಾಮಗಾರಿಯನ್ನು ಡಿ–ಫ್ರೀಜ್ ಮಾಡಲು ಕೋರಿ ಮಂಡಿಸಲಾದ ಟಿಪ್ಪಣಿ.

**–ಮುಂದೂಡಿದೆ–**

## ***<u>251. ವಿಷಯದ ಸಂಖ್ಯೆ: ತೆಆಸ್ಥಾಸ/22/2017–18</u>***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 03.05.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಯವ್ಯಯ 2013–14ನೇ ಸಾಲಿನ ಲೆಕ್ಕಶೀರ್ಷಿಕೆ ಪಿ–1771 ಅಡಿಯಲ್ಲಿ POW works ಅನುದಾನದಲ್ಲಿ ಈ ಕೆಳಕಂಡ ಕಾಮಗಾರಿಗೆ ಮುಖ್ಯ ಅಭಿಯಂತರರು (ಬೊಮ್ಮನಹಳ್ಳಿ) ರವರು ಪ್ರಸ್ತಾಪಿತ ಕಾಮಗಾರಿಗೆ ಜಾಬ್‌ಕೋಡ್ ಪಡೆದಿದ್ದು ಅದರ ವಿವರಗಳು ಈ ಕೆಳಕಂಡಂತಿರುತ್ತದೆ.

| Sl. No | Zone | Ward No. | Name of work | Est cost (in Lakhs) | Job code |
|---|---|---|---|---|---|
| 1 | bommanahalli | 188 | Construction of RDD drain and concrete roads in Gangaparmeshwari layout 3rd cross of ward No.188 | 5.00 | 188-13-000023 |

ಮೇಲ್ಕಾಣಿಸಿದ ಕಾಮಗಾರಿಯು 2013–14ನೇ ಸಾಲಿನ ಪಾಲಿಕೆ ಆಯವ್ಯಯದ ಲೆಕ್ಕಶೀರ್ಷಿಕೆ ಪಿ–1771ರ ಅಡಿಯಲ್ಲಿ ಜಾಬ್‌ಕೋಡ್ ಪಡೆದಿದ್ದು, ಕಾಮಗಾರಿಯು ಫ್ರೀಜ್ ಪಟ್ಟಿಯಲ್ಲಿ ಸೇರಿದ್ದು, ಸದರಿ ಕಾಮಗಾರಿಯು ಪೂರ್ಣಗೊಂಡು ದಿನಾಂಕ: 26.10.2014ರಂದು ಬಿ.ಆರ್. ನಂ.206/14–15ರಲ್ಲಿ ನಮೂದಾಗಿರುವ ಬಗ್ಗೆ ಮುಖ್ಯ ಅಭಿಯಂತರು (ಬೊಮ್ಮನಹಳ್ಳಿ) ರವರು ತಿಳಿಸಿರುತ್ತಾರೆ.

ಮುಖ್ಯ ಆರ್ಥಿಕ ಅಧಿಕಾರಿಗಳು ವರದಿ ಮಾಡಿರುವಂತೆ ಸದರಿ ಕಾಮಗಾರಿಗೆ ಪಾಲಿಕೆ ಆಯವ್ಯಯ 2017–18ನೇ ಸಾಲಿನ ಲೆಕ್ಕಶೀರ್ಷಿಕೆ ಪಿ–1771 ಮುಂದುವರೆದ ಕಾಮಗಾರಿಗಳಿಗೆ ರೂ.1214.65 ಲಕ್ಷಗಳು ಹಾಗೂ ಬಾಕಿ ಬಿಲ್ಲುಗಳಿಗೆ ರೂ.20000.00 ಲಕ್ಷಗಳ ಅನುದಾನ ಮೀಸಲಿರಿಸಿದೆ ಹಾಗೂ 2017–18 ಆಯವ್ಯಯದ ಸರ್ಕಾರದಿಂದ ಅನುಮೋದನೆಯಾದ ನಂತರ ಕ್ರಮ ವಹಿಸಬೇಕೆಂದು ತಿಳಿಸಿರುತ್ತಾರೆ

ಹಾಗೂ ಕಾರ್ಯಪಾಲಕ ಅಭಿಯಂತರರು (ಬೊಮ್ಮನಹಳ್ಳಿ) ರವರು ಸದರಿ ಕಾಮಗಾರಿಯನ್ನು 2017–18ನೇ ಸಾಲಿನ ಆಯವ್ಯಯದಲ್ಲಿ ಮುಂದುವರೆದ ಕಾಮಗಾರಿಯಾಗಿ ಅನುವು ಮಾಡಿಕೊಳ್ಳಲಾಗಿದೆ ಎಂದು ದೃಢೀಕರಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ಪ್ರಸ್ತಾಪಿತ ಕಾಮಗಾರಿಯ ಅಂದಾಜು ಮೊತ್ತವಾದ ರೂ.5.00 ಲಕ್ಷಗಳ ಕಾಮಗಾರಿಯನ್ನು 2017–18ನೇ ಸಾಲಿನ ಆಯವ್ಯಯದಲ್ಲಿ ಮುಂದುವರೆದ ಕಾಮಗಾರಿಗೆ ನಿಗಧಿಪಡಿಸಿದ ಅನುದಾನದಲ್ಲಿ ಭರಿಸಲು ಕ್ರಿಯಾ ಯೋಜನೆಗೆ ಅನುಮೋದನೆ ಹಾಗೂ ಕಾಮಗಾರಿಯನ್ನು ಡಿ–ಫ್ರೀಜ್ ಮಾಡಲು ಕೋರಿ ಮಂಡಿಸಲಾದ ಟಿಪ್ಪಣಿ

**–ಮುಂದೂಡಿದೆ–**

## *<u>261. ವಿಷಯದ ಸಂಖ್ಯೆ: ತೆಆಸ್ಥಾಸ/23/2017–18</u>*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 03.05.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಯವ್ಯಯ 2013–14ನೇ ಸಾಲಿನ ಲೆಕ್ಕಶೀರ್ಷಿಕೆ ಪಿ–1771 ಅಡಿಯಲ್ಲಿ POW works ಅನುದಾನದಲ್ಲಿ ಈ ಕೆಳಕಂಡ ಕಾಮಗಾರಿಗೆ ಮುಖ್ಯ ಅಭಿಯಂತರರು (ಬೊಮ್ಮನಹಳ್ಳಿ) ರವರು ಪ್ರಸ್ತಾಪಿತ ಕಾಮಗಾರಿಗೆ ಜಾಬ್‌ಕೋಡ್ ಪಡೆದಿದ್ದು ಅದರ ವಿವರಗಳು ಈ ಕೆಳಕಂಡಂತಿರುತ್ತದೆ.

| Sl. No | Zone | Ward No. | Name of work | Est cost (in Lakhs) | Job code |
|---|---|---|---|---|---|
| 1 | bommanahalli | 174 | Construction of Culverts at Ellukunte main road in ward No.174, H.S.R. Layout | 5.00 | 174-14-000010 |

ಮೇಲ್ಕಾಣಿಸಿದ ಕಾಮಗಾರಿಯು 2013–14ನೇ ಸಾಲಿನ ಪಾಲಿಕೆ ಆಯವ್ಯಯದ ಲೆಕ್ಕಶೀರ್ಷಿಕೆ ಪಿ–1771ರ ಅಡಿಯಲ್ಲಿ ಜಾಬ್‌ಕೋಡ್ ಪಡೆದಿದ್ದು, ಕಾಮಗಾರಿಯು ಫ್ರೀಜ್ ಪಟ್ಟಿಯಲ್ಲಿ ಸೇರಿದ್ದು, ಸದರಿ ಕಾಮಗಾರಿಯು ಪೂರ್ಣಗೊಂಡು ದಿನಾಂಕ: 28.09.2015ರಂದು ಬಿ.ಆರ್. ನಂ.264/14–15ರಲ್ಲಿ ನಮೂದಾಗಿರುವ ಬಗ್ಗೆ ಮುಖ್ಯ ಅಭಿಯಂತರು (ಬೊಮ್ಮನಹಳ್ಳಿ) ರವರು ತಿಳಿಸಿರುತ್ತಾರೆ.

ಮುಖ್ಯ ಆರ್ಥಿಕ ಅಧಿಕಾರಿಗಳು ವರದಿ ಮಾಡಿರುವಂತೆ ಸದರಿ ಕಾಮಗಾರಿಗೆ ಪಾಲಿಕೆ ಆಯವ್ಯಯ 2017–18ನೇ ಸಾಲಿನ ಲೆಕ್ಕಶೀರ್ಷಿಕೆ ಪಿ–1771 ಮುಂದುವರೆದ ಕಾಮಗಾರಿಗಳಿಗೆ ರೂ.1214.65 ಲಕ್ಷಗಳು ಹಾಗೂ ಬಾಕಿ ಬಿಲ್ಲುಗಳಿಗೆ ರೂ.20000.00 ಲಕ್ಷಗಳ ಅನುದಾನ ಮೀಸಲಿರಿಸಿದೆ ಹಾಗೂ 2017–18 ಆಯವ್ಯಯದ ಸರ್ಕಾರದಿಂದ ಅನುಮೋದನೆಯಾದ ನಂತರ ಕ್ರಮ ವಹಿಸಬೇಕೆಂದು ತಿಳಿಸಿರುತ್ತಾರೆ ಹಾಗೂ ಕಾರ್ಯಪಾಲಕ ಅಭಿಯಂತರರು (ಬೊಮ್ಮನಹಳ್ಳಿ) ರವರು ಸದರಿ ಕಾಮಗಾರಿಯನ್ನು 2017–18ನೇ ಸಾಲಿನ ಆಯವ್ಯಯದಲ್ಲಿ ಮುಂದುವರೆದ ಕಾಮಗಾರಿಯಾಗಿ ಅನುವು ಮಾಡಿಕೊಳ್ಳಲಾಗಿದೆ ಎಂದು ದೃಢೀಕರಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ಪ್ರಸ್ತಾಪಿತ ಕಾಮಗಾರಿಯ ಅಂದಾಜು ಮೊತ್ತವಾದ ರೂ.5.00 ಲಕ್ಷಗಳ ಕಾಮಗಾರಿಯನ್ನು 2017–18ನೇ ಸಾಲಿನ ಆಯವ್ಯಯದಲ್ಲಿ ಮುಂದುವರೆದ ಕಾಮಗಾರಿಗೆ ನಿಗಧಿಪಡಿಸಿದ ಅನುದಾನದಲ್ಲಿ ಭರಿಸಲು ಕ್ರಿಯಾ ಯೋಜನೆಗೆ ಅನುಮೋದನೆ ಹಾಗೂ ಕಾಮಗಾರಿಯನ್ನು ಡಿ–ಫ್ರೀಜ್ ಮಾಡಲು ಕೋರಿ ಮಂಡಿಸಲಾದ ಟಿಪ್ಪಣಿ

**–ಮುಂದೂಡಿದೆ–**

## *27]. ವಿಷಯದ ಸಂಖ್ಯೆ: ತೆಆಸ್ಥಾಸ/24/2017–18*

ಆಯುಕ್ತರ ದಿನಾಂಕ: 08.05.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಸರ್ಕಾರದ ಆರ್ಥಿಕ ಇಲಾಖೆಯ ಆದೇಶದಲ್ಲಿ 2017ನೇ ಸಾಲಿನ ಅವಧಿಗೆ ಗರಿಷ್ಠ 15 ದಿನಗಳಿಗೆ ಮೀರದ ಗಳಿಕೆ ರಜೆಯನ್ನು ಅಧ್ಯರ್ಪಿಸಿ ರಜಾ ವೇತನಕ್ಕೆ ಸಮನಾದ ನಗಧೀಕರಣ ಸೌಲಭ್ಯ ಪಡೆಯುವ ಯೋಜನೆಯನ್ನು ದಿ: 01.01.2017 ರಿಂದ ಜಾರಿಗೊಳಿಸಿ ಈ ಕೆಳಕಂಡಂತೆ ನಿಯಮಗೊಳಿಸಲಾಗಿರುತ್ತದೆ.

| ಕ್ರ.ಸಂ | ಅಧಿಕಾರಿ / ನೌಕರರ ಸಮೂಹ | ಮುಂಚಿತವಾಗಿ ಒಂದು ತಿಂಗಳ ನೋಟಿಸ್ ನೀಡಿ 2017ನೇ ಸಾಲಿನ ಅವಧಿಗೆ ನಗಧೀಕರಣ ಸೌಲಭ್ಯ ಪಡೆಯುವ ಅವಧಿ |
|---|---|---|
| 1. | ಗ್ರೂಪ್ 'ಡಿ' ಸಮೂಹ | ಅವರ ಇಚ್ಛೆಯಂತೆ 2017ರ ಕ್ಯಾಲೆಂಡರ್ ವರ್ಷದ ಯಾವುದೇ ತಿಂಗಳಿನಲ್ಲಿ |
| 2. | ಉಳಿದ ಸಮೂಹ (ಎ.ಬಿ.ಸಿ) | ಅವರ ಇಚ್ಛೆಯಂತೆ ಏಪ್ರಿಲ್ 2017 ರಿಂದ ಡಿಸೆಂಬರ್ 2017ರ ವರೆಗಿನ ಯಾವುದೇ ತಿಂಗಳಿನಲ್ಲಿ |

ಮತ್ತು ಸರ್ಕಾರದ ಆರ್ಥಿಕ ಇಲಾಖೆಯ ಆದೇಶದಲ್ಲಿ ರಾಜ್ಯ ಸರ್ಕಾರಿ ನೌಕರರುಗಳಿಗೆ 2012ರ ಪರಿಷ್ಕೃತ ವೇತನ ಶ್ರೇಣಿಯಲ್ಲಿ ದಿನಾಂಕ: 01ನೇ ಜನವರಿ 2017 ರಿಂದ ಜಾರಿಗೆ ಬರುವಂತೆ ತುಟ್ಟಿಭತ್ಯೆಯ ದರವನ್ನು ಮೂಲ ವೇತನದ ಶೇಕಡ 40.25 ರಿಂದ ಶೇಕಡ 43.25ಕ್ಕೆ ಹೆಚ್ಚಿಸಿ ಹಾಗೂ ರಾಜ್ಯ ಸರ್ಕಾರದ ನಿವೃತ್ತಿ ವೇತನದಾರರು / ಕುಟುಂಬ ನಿವೃತ್ತಿ ವೇತನದಾರರಿಗೆ ಮತ್ತು ರಾಜ್ಯದ ಸಂಚಿತ ನಿಧಿಯಿಂದ ನಿವೃತ್ತಿ ವೇತನ ಮತ್ತು ಕುಟುಂಬ ನಿವೃತ್ತಿ ವೇತನವನ್ನು ಪಡೆಯುತ್ತಿರುವಂತಹ ಅನುದಾನಿತ ಶಿಕ್ಷಣ ಸಂಸ್ಥೆಗಳ ನಿವೃತ್ತಿ ವೇತನದಾರರು / ಕುಟುಂಬ ನಿವೃತ್ತಿ ವೇತನದಾರರಿಗೆ ಹಾಲಿ ಲಭ್ಯವಿರುವ ತುಟ್ಟಿಭತ್ಯೆಯ ದರವನ್ನು ಮೂಲ ನಿವೃತ್ತಿ ವೇತನ / ಕುಟುಂಬ ನಿವೃತ್ತಿ ವೇತನದ ಶೇಕಡ 40.25 ರಿಂದ ಶೇಕಡ 43.25ಕ್ಕೆ ಹೆಚ್ಚಿಸಿ ದಿನಾಂಕ: 01–01–2017 ರಿಂದ ಜಾರಿಗೆ ಬರುವಂತೆ ಮಂಜೂರು ಮಾಡಲಾಗಿರುತ್ತದೆ.

ಈ ಹಿಂದೆ ಸರ್ಕಾರವು ತುಟ್ಟಿಭತ್ಯೆಯನ್ನು ಹೆಚ್ಚಿಸುವ ಆದೇಶವನ್ನು ನಗರ ಪಾಲಿಕೆಯಲ್ಲಿ ಅಳವಡಿಸಿಕೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ತೀರ್ಮಾನಕ್ಕಾಗಿ ಟಿಪ್ಪಣಿಯನ್ನು ಮಂಡಿಸಲಾಗಿದ್ದು, ಸದರಿ ಟಿಪ್ಪಣಿಗೆ ಸಂಬಂಧಿಸಿದಂತೆ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ವಿಷಯ ಸಂಖ್ಯೆ: ತೆಆಸ್ಥಾಸ/05/2014–15ರಲ್ಲಿ ದಿನಾಂಕ: 02.11.2015 ರಂದು ನಡೆದ ಸಭೆಯಲ್ಲಿ ಈ ಕೆಳಕಂಡಂತೆ ನಿರ್ಣಯವನ್ನು ತೆಗೆದುಕೊಳ್ಳಲಾಗಿರುತ್ತದೆ.

"ಸರ್ಕಾರಿ ಆದೇಶದ ಅನುಸಾರ ಕಾಲಕಾಲಕ್ಕೆ ತುಟ್ಟಿಭತ್ಯೆಯನ್ನು ಪಾವತಿಸುವುದು ಕಡ್ಡಾಯವಾಗಿರುವ ಹಿನ್ನೆಲೆಯಲ್ಲಿ ಪಾಲಿಕೆಯ ಖಾಯಂ ನೌಕರರಿಗೆ ಮತ್ತು ಪಿಂಚಣಿದಾರರಿಗೆ ಅನ್ವಯವಾಗುವಂತೆ ಅಳವಡಿಸಿಕೊಂಡು ಪಾವತಿಸುವುದು ಹಾಗು ಇನ್ನು ಮುಂದೆ ಕಾಲಕಾಲಕ್ಕೆ ಸರ್ಕಾರದ ಆದೇಶದನ್ವಯ ನೀಡಲಾಗುವ ತುಟ್ಟಿಭತ್ಯೆಯನ್ನು ಪಾಲಿಕೆಯಲ್ಲಿ ಅಳವಡಿಸಿಕೊಂಡು ಪಾವತಿಸಿದ ನಂತರ ದಾಖಲಾತಿಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲು" ತೀರ್ಮಾನಿಸಲಾಗಿರುತ್ತದೆ.

ಇದರಂತೆ, ಸರ್ಕಾರದ ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಆಇ 10 ಸೇನಿಸೇ 2016, ದಿನಾಂಕ: 12.12.2016ನ್ನು ಕಛೇರಿ ಆದೇಶದಲ್ಲಿ ಹಾಗೂ ಸರ್ಕಾರದ ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 16 ಎಸ್‌ಆರ್‌ಪಿ 2017, ದಿನಾಂಕ: 30.03.2017ನ್ನು ಕಛೇರಿ ಆದೇಶದಲ್ಲಿ ನಗರ ಪಾಲಿಕೆಯಲ್ಲಿ

ಅಳವಡಿಸಿಕೊಳ್ಳಲಾಗಿರುತ್ತದೆ. ಸದರಿ ಆದೇಶಗಳ ದಾಖಲಾತಿಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ತೀರ್ಮಾನಕ್ಕಾಗಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಆಯುಕ್ತರ ದಿನಾಂಕ: 08–05–2017ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು**

***28]. ವಿಷಯದ ಸಂಖ್ಯೆ: ತೆಆಸ್ಥಾಸ/25/2017–18***

ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ದಿನಾಂಕ: 09.05.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಕ್ಷಿಣ ವಲಯದ ಘನತ್ಯಾಜ್ಯ ಹಾಗೂ ಅನುಪಯುಕ್ತ ವಸ್ತುಗಳ ವಿಲೇವಾರಿ ನಿರ್ವಹಿಸುತ್ತಿರುವ ಕೇಂದ್ರಕ್ಕೆ ಸಾರ್ವಜನಿಕರ ಹಿತದೃಷ್ಟಿಯಿಂದ ಕಾವಲುಗಾರರು ಅವಶ್ಯಕವಾಗಿರುತ್ತದೆ.

ದಿನಾಂಕ: 15.07.2015 ರಿಂದ 12.10.2015 ರವರೆಗಿನ 6 ತಿಂಗಳ ಅವಧಿಗೆ ಸದರಿ ಕಾಮಗಾರಿಯನ್ನು ಮೆ॥ ಕೆ.ಆರ್.ಐ.ಡಿ.ಎಲ್ ಸಂಸ್ಥೆ ವತಿಯಿಂದ ನಿರ್ವಹಿಸಲು ಮಾನ್ಯ ಆಯುಕ್ತರು ರವರ ಕಂಡಿಕೆ (13)ರಲ್ಲಿ ದಿ: 26.10.2016 ರಂದು ಅನುಮೋದನೆ ನೀಡಿರುತ್ತಾರೆ. ತದನಂತರದ ಅವಧಿಗೆ ಕಾಮಗಾರಿಯನ್ನು ನಿರ್ವಹಿಸಲು, ಸದರಿ ಅಂದಾಜು ಪಟ್ಟಿಯನ್ನು ದಿನಾಂಕ: 13.10.2015 ರಿಂದ 09.04.2016 ರವರೆಗೆ 6 ತಿಂಗಳ ಅವಧಿಗೆ ರೂ. 4.13 ಲಕ್ಷಗಳಿಗೆ ತಯಾರಿಸಲಾಗಿದೆ.

ಅದರಂತೆ ಅಂದಾಜು ಪಟ್ಟಿಯನ್ನು 2015–16ನೇ ಸಾಲಿನ ಕರ್ನಾಟಕ ಲೋಕೋಪಯೋಗಿ ಇಲಾಖೆಯ ದರಗಳನ್ನು ಹಾಗೂ ಅನುಮೋದಿತ ದರಗಳನ್ನು ಅಳವಡಿಸಿ ರೂ.4.13 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿರುತ್ತದೆ. ಈ ಅಂದಾಜು ಪಟ್ಟಿಯಲ್ಲಿ ಈ ಕಾಮಗಾರಿಗೆ ಅವಶ್ಯವಿರುವ ಅಂಶಗಳನ್ನು ಅಳವಡಿಸಲಾಗಿರುತ್ತದೆ.

ಸದರಿ ಕಾಮಗಾರಿಗೆ ಅವಶ್ಯವಿರುವ ಅನುದಾನವನ್ನು ಪಿ–3112 ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ ರೂ.150.00 ಲಕ್ಷಗಳ ಅನುದಾನ ಮೀಸಲಿರಿಸಿದ್ದು, ಅದರಲ್ಲಿ ರೂ.4.13 ಲಕ್ಷಗಳಿಗೆ ಅನುದಾನವನ್ನು ಬಿಡುಗಡೆಗೊಳಿಸಬಹುದಾಗಿರುತ್ತದೆ.

ಸದರಿ ಅಂದಾಜು ಮೊತ್ತಕ್ಕೆ ಜಾಬ್ ಸಂಖ್ಯೆ, ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಅನುಮೋದನೆ ಪಡೆಯಬಹುದಾಗಿರುತ್ತದೆ. ಸದರಿ ಕಾಮಗಾರಿಯನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಮೆ॥ ಕೆ.ಆರ್.ಐ.ಡಿ.ಎಲ್ ಸಂಸ್ಥೆ ವತಿಯಿಂದ ನಿರ್ವಹಿಸಲು ಅನುಮೋದನೆ ಕೋರಲಾಗಿದೆ.

ಮೇಲ್ಕಂಡ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಈ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಸಲ್ಲಿಸಿದೆ.

5) ಸದರಿ ಕಾಮಗಾರಿಯನ್ನು ದಿನಾಂಕ: 13.10.2015 ರಿಂದ ನಿರ್ವಹಿಸುತ್ತಿರುವುಕ್ಕೆ ಘಟನೋತ್ತರ ಅನುಮೋದನೆ.
6) ಸದರಿ ಕಾಮಗಾರಿಯ ಮೊತ್ತ ರೂ. 4.13 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿಯನ್ನು ನೀಡುವುದು.
7) ಸದರಿ ಕಾಮಗಾರಿಗೆ ಅನುದಾನವನ್ನು ಪಿ–3112 ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ ಜಾಬ್‌ಕೋಡ್ ನೀಡುವುದು.

8) ಸದರಿ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸಿರುವುದರಿಂದ 13.10.2015 ರಿಂದ ಮೆ॥ ಕೆ.ಆರ್.ಐ.ಡಿ.ಎಲ್ ಸಂಸ್ಥೆ ವತಿಯಿಂದ ನಿರ್ವಹಿಸಿರುವ ಕ್ರಮಕ್ಕೆ ಸ್ಥಿರೀಕರಣ ಅನುಮೋದನೆ ನೀಡಲು ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ದಿನಾಂಕ: 09-05-2017ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು**

## ***29]. ವಿಷಯದ ಸಂಖ್ಯೆಃ ತೆಆಸ್ಥಾಸ/26/2017-18***

ಆಯುಕ್ತರ ದಿನಾಂಕ: 15-02-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅರಣ್ಯ ವ್ಯಾಪ್ತಿಯಲ್ಲಿ ವನ್ಯಜೀವಿ ಸಮಸ್ಯೆಗಳಿಂದ ಸಾರ್ವಜನಿಕರಿಗೆ ತೊಂದರೆಯುಂಟಾಗದಂತೆ ಮಾನ್ಯ ಆಯುಕ್ತರವರ ಆದೇಶ ಸಂಖ್ಯೆ:ಬಿ12(5ಹೆಚ್)ಪಿಆರ್/57/2010-11, ದಿನಾಂಕ:07-12-2016ರ ಆದೇಶದಲ್ಲಿ 09 ಮಂದಿ ಸದಸ್ಯರಲ್ಲಿ ಶ್ರೀ ಶರತ್‌ಬಾಬು.ಆರ್. ಇವರು ತಂಡದ ಪರಿಸರ ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಿದ್ದು, ಸದರಿ ತಂಡವು ಪಾಲಿಕೆಯಲ್ಲಿ ವನ್ಯಜೀವಿಗಳಿಂದ ಆಗಬಹುದಾದ ತೊಂದರೆಯನ್ನು ತಪ್ಪಿಸುವ ಸಲುವಾಗಿ "ವನ್ಯಜೀವಿ ಸಂರಕ್ಷಣಾ ತಂಡ" ವನ್ನು ರಚಿಸಿದ್ದು, ಸದರಿ ತಂಡದಲ್ಲಿ ಈ ಕೆಳಕಂಡಂತೆ ಕಾರ್ಯನಿರ್ವಹಿಸುತ್ತಿದ್ದು, ಸದರಿಯವರುಗಳ ಸೇವೆಯನ್ನು ದಿನಾಂಕ:07-12-2016ರ ಕಛೇರಿ ಆದೇಶದಲ್ಲಿ ಈ ಕೆಳಕಂಡಂತೆ ಮಾಸಿಕ ವೇತನ ನೀಡಿ ದಿನಾಂಕ:01-01-2015 ರಿಂದ 01-01-2016 ರವರೆಗೆ (2015-16)ನೇ ಸಾಲಿನವರೆಗೂ ಮುಂದುವರೆಸಲಾಗಿರುತ್ತದೆ. ಸದರಿ ತಂಡದ ಸೇವೆಯು ದಿನಾಂಕ:31-03-2016ಕ್ಕೆ ಮುಕ್ತಾಯವಾಗಿರುತ್ತದೆ.

| ಕ್ರ. ಸಂ. | ಹೆಸರುಗಳು | 2015-16ನೇ ಸಾಲಿನ ಅವಧಿಯಲ್ಲಿ ವೈದ್ಯಕೀಯ ವೆಚ್ಚ ಮತ್ತು ಪೆಟ್ರೋಲ್ ವೆಚ್ಚ ಸೇರಿ ಈ ಕೆಳಕಂಡಂತೆ ಮಾಸಿಕ ವೇತನ ಪಾವತಿಸಲಾಗುತ್ತಿದೆ | 2016-17ನೇ ಸಾಲಿನ ಅವಧಿಗೆ ವೈದ್ಯಕೀಯ ವೆಚ್ಚ ಮತ್ತು ಪೆಟ್ರೋಲ್ ವೆಚ್ಚ ಸೇರಿದಂತೆ ಈ ಕೆಳಕಂಡಂತೆ ಮಾಸಿಕ ವೇತನ ಪಾವತಿಸಬಹುದೇ / ಇಲ್ಲವೆ ಎಂಬುವುದರ ಬಗ್ಗೆ ತೀರ್ಮಾನಿಸಬೇಕಾಗಿರುತ್ತದೆ |
|---|---|---|---|
| 1 | ಶ್ರೀ ಶರತ್‌ಬಾಬು | 20,000-00 | 00-00 |
| 2 | ಶ್ರೀ ಪಿ.ಮಂಜುನಾಥ | 11,000-00 | 13,500-00 |
| 3 | ಶ್ರೀ ಕುಮಾರ್ ಅಲಿಯಾಸ್ ಪ್ರಸನ್ನಕುಮಾರ್.ಎ | 11,000-00 | 13,500-00 |
| 4 | ಶ್ರೀ ಟಿ.ಆರ್.ಮಹೇಶ್ ಕುಮಾರ್ | 11,000-00 | 13,500-00 |
| 5 | ಶ್ರೀ ಶಿವರಾಜ್.ಎನ್ | 11,000-00 | 13,500-00 |
| 6 | ಶ್ರೀ ದೀಪಕ್.ಎಸ್ | 11,000-00 | 13,500-00 |
| 7 | ಶ್ರೀ ಆರ್.ಎಸ್.ದ್ರುವಕುಮಾರ್ | 11,000-00 | 13,500-00 |
| 8 | ಶ್ರೀ ಎಸ್.ಜೈರಾಜ್ | 11,000-00 | 13,500-00 |

ವನ್ಯ ಜೀವಿ ಸಂರಕ್ಷಣಾ ತಂಡದ ದಿನಾಂಕ:12-02-2016ರ ವರದಿಯಂತೆ ದಿನಾಂಕ:01-04-2016 ಏಪ್ರಿಲ್ ರಿಂದ ದಿನಾಂಕ:31-03-2017 ಮಾರ್ಚ್ ಅಂತ್ಯದವರೆವಿಗೂ ಮುಂದುವರೆಸಲು ಹಾಗೂ ಹಾಲಿ ಕಾರ್ಯನಿರ್ವಹಿಸುತ್ತಿರುವ ಈ ತಂಡದ ಸದಸ್ಯರಿಗೆ ಮಾಸಿಕ ರೂ.11,000/- ಗಳಿಂದ ರೂ.13,500/-

ಗಳಿಗೆ ಗೌರವಧನವನ್ನು ಹೆಚ್ಚಿಸುವಂತೆ ಹಾಗೂ ಹಾಲಿ ಕಾರ್ಯನಿರ್ವಹಿಸುತ್ತಿರುವ ತಂಡದಲ್ಲಿ ಶ್ರೀ ಮೋಹನ್.ಕೆ ರವರ ಬದಲಾಗಿ ಸ್ಫೂರ್ತಿ.ಕೆ. ರವರನ್ನು ಸ್ವಯಂ ಸೇವಕರನ್ನಾಗಿ ಸೇರಿಸಿಕೊಳ್ಳಲು ಹಾಗೂ ಅವರಿಗೂ ಸಹ ಮಾಸಿಕ ವೇತನ ರೂ.13,500/- ಗಳನ್ನು 2016-17ನೇ ಸಾಲಿಗೆ ಪಾವತಿಸಲು ಕೋರಿರುತ್ತಾರೆ.

| ಕ್ರ. ಸಂ. | ಕಾರ್ಯನಿರ್ವಹಿಸುತ್ತಿದ್ದ ಸ್ವಯಂ ಸೇವಕರ ಹೆಸರು | ಬದಲಿ ಸ್ವಯಂ ಸೇವಕರನ್ನು ನೇಮಿಸಿಕೊಂಡಿರುವ ಹೆಸರು | ಮಾಸಿಕ ವೇತನವನ್ನು ನಿಗಧಿಪಡಿಸಲು ಕೋರಿರುವ ಮೊತ್ತ |
|---|---|---|---|
| 1 | ಶ್ರೀ ಮೋಹನ್.ಕೆ | ಸ್ಫೂರ್ತಿ.ಪಿ | ರೂ.13,500/- |

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪಾಲಿಕೆಯ ವನ್ಯಜೀವಿ ಸಂರಕ್ಷಣಾ ತಂಡವು 31-03-2015 ರಿಂದ 31-03-2016 ಮಾರ್ಚ್ ಅಂತ್ಯಕ್ಕೆ ಮುಕ್ತಾಯವಾಗಿರುತ್ತದೆ. ಸದರಿ ತಂಡವನ್ನು ದಿನಾಂಕ: 01-04-2016 ಏಪ್ರಿಲ್ ರಿಂದ ದಿನಾಂಕ: 31-03-2017 ಮಾರ್ಚ್ ಅಂತ್ಯದವರೆವಿಗೂ ಮುಂದುವರೆಸಲು ಹಾಗೂ ಮಾಸಿಕ ವೇತನವನ್ನು ಹೆಚ್ಚಿಸುವ ಬಗ್ಗೆ ಹಾಗೂ ಹೊಸದಾಗಿ ಹಾಲಿ ತಂಡದ ಜೊತೆಗೆ ಮೋಹನ್.ಕೆ. ರವರ ಬದಲಾಗಿ ಸ್ಫೂರ್ತಿ.ಪಿ. ರವರನ್ನು 2016-17ನೇ ಸಾಲಿನ ಅಂತ್ಯದವರೆಗೆ ನೇಮಿಸಿಕೊಳ್ಳಲು ಉಪ ಅರಣ್ಯ ಸಂರಕ್ಷಣಾಧಿಕಾರಿರವರು ಕೋರಿರುವ ಸಂಬಂಧ ಕಡತವನ್ನು ಮಾಹಿತಿ / ಅಭಿಪ್ರಾಯಕ್ಕಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಮೇರೆಗೆ **ಹಾಜರಿದ್ದ ಅಧಿಕಾರಿಗಳೊಂದಿಗೆ ಚರ್ಚಿಸಲಾಯಿತು. ಆಯುಕ್ತರ ಟಿಪ್ಪಣಿಯಲ್ಲಿ ಒಟ್ಟು 09 ವನ್ಯಜೀವಿ ಸಂರಕ್ಷಣಾ ತಂಡದ ಸದಸ್ಯರುಗಳಿಗೆ ಮಾಸಿಕ ಗೌರವಧನವನ್ನು ನೀಡುವ ಬಗ್ಗೆ ಪ್ರಸ್ತಾಪಿಸಲಾಗಿದ್ದು, ಆದರೆ ಪ್ರಸ್ತುತ ಶ್ರೀ.ಪ್ರಸನ್ನಕುಮಾರ್ ಮತ್ತು ಶ್ರೀ ಮೋಹನ್‌ರವರುಗಳನ್ನು ಕಾರ್ಯನಿರ್ವಹಿಸುತ್ತಿರುವುದಾಗಿ ಸಭೆಯ ಗಮನಕ್ಕೆ ತರಲಾದ ಮೇರೆಗೆ, ಸದರಿ ಸ್ವಯಂ ಸೇವಕರುಗಳನ್ನು ಮಾತ್ರ ಮುಂದುವರೆಸಲು ಹಾಗೂ ಸದರಿಯವರುಗಳಿಗೆ ಬಾಕಿ ಇರುವ ಗೌರವಧನವನ್ನು ಪಾವತಿಸುವ ಬಗ್ಗೆ ಕಡತವನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸುವುದೆಂದು ತೀರ್ಮಾನಿಸಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ: 16.05.2017ರ ಸಭೆಯ ನಿರ್ಣಯ.**

**ನಿರ್ಣಯ: ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸ್ವಯಂ ಸೇವಕರುಗಳಿಗೆ ಬಾಕಿಯಿರುವ ಗೌರವಧನವನ್ನು ಪಾವತಿಸುವುದೆಂದು ಸಮಿತಿಯು ತೀರ್ಮಾನಿಸಿತು**

### ***301. ವಿಷಯದ ಸಂಖ್ಯೆ: ತೆಆಸ್ಥಾಸ/27/2017-18***

ವಿಶೇಷ ಆಯುಕ್ತರು (ಆರೋಗ್ಯ ಮತ್ತು ಘನತ್ಯಾಜ್ಯ) ರವರ ದಿನಾಂಕ: 27-03-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಪಾಲಿಕೆಯ ವೈದ್ಯಕೀಯ ವಿಭಾಗದಲ್ಲಿ 6 ರೆಫರಲ್ ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿವೆ. ಈ ಆಸ್ಪತ್ರೆಗಳಲ್ಲಿ ತಾಯಿ ಮತ್ತು ಮಕ್ಕಳ ಆರೋಗ್ಯ ಸೇವೆಗೆ ಒತ್ತು ನೀಡಿ ಇತರೇ ಸೇವೆಗಳನ್ನು ಸಹ ನೀಡಲಾಗುತ್ತಿದೆ. ಪ್ರಸ್ತುತ 6 ರೆಫರಲ್ ಆಸ್ಪತ್ರೆಗಳ ಪೈಕಿ ಹೊಸಹಳ್ಳಿ ಹಾಗೂ ಹೆಚ್.ಸಿದ್ದಯ್ಯರಸ್ತೆ ರೆಫರಲ್ ಆಸ್ಪತ್ರೆಗಳು 24*7 ರೆಫರಲ್ ಆಸ್ಪತ್ರೆಯಾಗಿ 2016ನೇ ಸಾಲಿನಿಂದ ಕಾರ್ಯನಿರ್ವಹಿಸುತ್ತಿವೆ. ಈ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ಅದರಲ್ಲಿಯೂ ತಜ್ಞ ವೈದ್ಯರ ತೀವ್ರ ಕೊರತೆ ಇರುವುದರಿಂದ ಕೆಹೆಚ್‌ಎಸ್‌ಆರ್‌ಡಿಪಿ ಮಾರ್ಗಸೂಚಿಗಳನ್ನು ಅನುಸರಿಸಿ ಪಾಲಿಕೆಯಲ್ಲಿ 2011-12ನೇ ಸಾಲಿನಿಂದ ಸ್ತ್ರೀರೋಗ ತಜ್ಞರುಗಳನ್ನು ಎಂಪ್ಯಾನಲ್‌ಮೆಂಟ್ ಮೂಲಕ ನಿಯೋಜಿಸಿಕೊಳ್ಳಲಾಗಿದೆ. ಇವರ ಸೇವೆಯನ್ನು

ಮುಂದುವರೆಸಿ, 2016-17ನೇ ಸಾಲಿಗೆ ಪತ್ರಿಕಾ ಪ್ರಕಟಣೆ ನೀಡಿ ಗುತ್ತಿಗೆ ಪ್ರಸೂತಿ ತಜ್ಞರನ್ನು ನಿಯೋಜಿಸಿಕೊಳ್ಳಲಾಗಿದ್ದು, ಸದರಿಯವರ ಅವಧಿಯು 2017 ಮಾರ್ಚ್‌ಗೆ ಅಂತ್ಯಗೊಳ್ಳಲಿದೆ.

ಪ್ರಸ್ತುತ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ ಪ್ರಸೂತಿ ತಜ್ಞರ ವಿವರ ಈ ಕೆಳಕಂಡಂತಿದೆ.

| ಕ್ರಮ ಸಂಖ್ಯೆ | ವಲಯ ಆಸ್ಪತ್ರೆಯ ಹೆಸರು | ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ ಪ್ರಸೂತಿ ತಜ್ಞರ ಸಂಖ್ಯೆ | ಅವಶ್ಯವಿರುವ ಹೆಚ್ಚುವರಿ ಪ್ರಸೂತಿ ತಜ್ಞರ ಸಂಖ್ಯೆ |
|---|---|---|---|
| 1 | ಶ್ರೀರಾಮಪುರ ರೆಫರಲ್ ಆಸ್ಪತ್ರೆ | 02 | 05 |
| 2 | ಹೊಸಹಳ್ಳಿ ರೆಫರಲ್ ಆಸ್ಪತ್ರೆ | 05 | 03 |
| 3 | ಜೆಜೆಆರ್ ನಗರ ರೆಫರಲ್ ಆಸ್ಪತ್ರೆ | 04 | 02 |
| 4 | ಬನಶಂಕರಿ ರೆಫರಲ್ ಆಸ್ಪತ್ರೆ | 02 | 04 |
| 5 | ಹೆಚ್ ಸಿದ್ದಯ್ಯ ರಸ್ತೆ ರೆಫರಲ್ ಆಸ್ಪತ್ರೆ | 04 | 02 |
| 6 | ಅಲಸೂರು ರೆಫರಲ್ ಆಸ್ಪತ್ರೆ | 04 | 01 |
| | **ಒಟ್ಟು** | **21** | **17** |

ಪ್ರಸ್ತುತ ಪಾಲಿಕೆಯಲ್ಲಿ 21 ಗುತ್ತಿಗೆ ಪ್ರಸೂತಿ ತಜ್ಞರುಗಳು ಮಾತ್ರ ಕಾರ್ಯನಿರ್ವಹಿಸುತ್ತಿದ್ದಾರೆ. ಪಾಲಿಕೆಯ ಆಸ್ಪತ್ರೆಗಳಲ್ಲಿ ಅತೀ ಹೆಚ್ಚಿನ ಸೇವೆಯನ್ನು ಹಾಗೂ ಪ್ರಸೂತಿ ಸಂಬಂಧೀ ಕಾರ್ಯಗಳನ್ನು ನಿರ್ವಹಿಸಲು ಇನ್ನೂ ಹೆಚ್ಚುವರಿ ಪ್ರಸೂತಿ ತಜ್ಞರುಗಳ ಅವಶ್ಯಕತೆ ಹೆಚ್ಚಾಗಿದೆ. ಮೇಲೆ ತಿಳಿಸಿರುವ ಪಟ್ಟಿಯಲ್ಲಿರುವ ಹಾಲಿ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ ಪ್ರಸೂತಿ ತಜ್ಞರನ್ನು 2016-17ನೇ ಸಾಲಿಗೆ ಪತ್ರಿಕಾ ಪ್ರಕಟಣೆ ನೀಡಿ ಸಂದರ್ಶನ ನಡೆಸಿ ನೇಮಕಾತಿ ಪ್ರಕ್ರಿಯೆ ಮೂಲಕ ನೇಮಕಾತಿ ಮಾಡಿಕೊಳ್ಳಲಾಗಿತ್ತು. ಆ ಅವಧಿಯು ದಿನಾಂಕ 31-03-2017ಕ್ಕೆ ಮುಕ್ತಾಯಗೊಳ್ಳಲಿದೆ. ಮುಂದುವರೆದಂತೆ ಸದರಿಯವರ ಸೇವೆಯು ತೃಪ್ತಿಕರವಾಗಿದಲ್ಲಿ ಇನ್ನೂ ಒಂದು ವರ್ಷಕ್ಕೆ ಮುಂದುವರೆಸುವ ಅವಕಾಶವಿರುವುದರಿಂದ ಸದರಿಯವರ ಸೇವೆಗಳನ್ನು 2017-18ನೇ ಸಾಲಿಗೆ ಮುಂದುವರೆಸಬಹುದಾಗಿದೆ.

ಈ ಗುತ್ತಿಗೆ ಪ್ರಸೂತಿ ತಜ್ಞರನ್ನು ಎನ್.ಯು.ಹೆಚ್.ಎಂ. ಮಾರ್ಗಸೂಚಿ ಅನುಸರಿಸಿ ರೂ.65,000/-ಗಳಿಗೆ ನೇಮಕ ಮಾಡಿಕೊಳ್ಳಲಾಗಿದ್ದು, ಈಗ ಎನ್.ಯು.ಹೆಚ್.ಎಂ.ನಲ್ಲಿ ಮಾಸಿಕ ಗೌರವಧನ ಹೆಚ್ಚಿಸಿರುವುದರಿಂದ ಎನ್.ಯು.ಹೆಚ್.ಎಂ.ಮಾರ್ಗಸೂಚಿ ಅನುಸಾರ ಇವರಿಗೂ 1,10,000/-ಗಳ ಗೌರವಧನವನ್ನು ಹೆಚ್ಚಿಸಬಹುದಾಗಿದೆ. 2017-18ನೇ ಸಾಲಿನ ಆಯವ್ಯಯದಲ್ಲಿ ಗುತ್ತಿಗೆ ಪ್ರಸೂತಿ ತಜ್ಞರ ಗೌರವ ಧನದ ಹೆಚ್ಚಳದ ಬಗ್ಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಈ ಪ್ರಸ್ತಾವನೆಗೆ ಅನುಮೋದನೆ ದೊರೆತಲ್ಲಿ ಸದರಿಯವರ ಗೌರವಧನವನ್ನು ರೂ.65,000/- ರಿಂದ 1,10,000/- ಗಳಿಗೆ ಹೆಚ್ಚಿಸಬಹುದಾಗಿದೆ. ಈ ರೀತಿ ಗೌರವ ಧನ ಹೆಚ್ಚಿಸಿದಲ್ಲಿ ತಗಲುವ ವೆಚ್ಚ ಈ ಕೆಳಕಂಡಂತಿದೆ.

| ಕ್ರಮ ಸಂಖ್ಯೆ | | ಹಾಲಿ ಇರುವ ಗುತ್ತಿಗೆ ಪ್ರಸೂತಿ ತಜ್ಞರ ಸಂಖ್ಯೆ | ವೆಚ್ಚ (ರೂ.ಗಳಲ್ಲಿ) | |
|---|---|---|---|---|
| 01 | ಗುತ್ತಿಗೆ ಪ್ರಸೂತಿ ತಜ್ಞರು | 21 | 21*1,10,000=23,10,000 (ರೂ.ಇಪ್ಪತ್ತೂರು ಲಕ್ಷದ ಹತ್ತು ಸಾವಿರ ರೂಗಳು ಮಾತ್ರ) | ಪ್ರತಿ ಮಾಹೆಗೆ |
| | | | 2310000*12=2,77,20,000 (ಎರಡು ಕೋಟಿ ಎಪ್ಪತ್ತೇಳು ಲಕ್ಷದ ಇಪ್ಪತ್ತು ಸಾವಿರ ರೂಗಳು ಮಾತ್ರ) | ವಾರ್ಷಿಕ ವೆಚ್ಚ |

ಹಾಗೆಯೇ ಪಾಲಿಕೆಯ ಆಸ್ಪತ್ರೆಗಳಿಗೆ ಹೆಚ್ಚುವರಿಯಾಗಿ 17 ಪ್ರಸೂತಿ ತಜ್ಞರ ಅವಶ್ಯಕತೆ ಇದೆ, ಖಾಲಿ ಇರುವ /ಅವಶ್ಯವಿರುವ ಹೆಚ್ಚುವರಿ ಪ್ರಸೂತಿ ತಜ್ಞರನ್ನು ಗುತ್ತಿಗೆ ಮೂಲಕ ನೇಮಕಾತಿ ಮಾಡಿಕೊಂಡಲ್ಲಿ ತಗಲುವ ವೆಚ್ಚದ ವಿವರ ಈ ಕೆಳಕಂಡಂತಿದೆ.

| ಕ್ರಮ ಸಂಖ್ಯೆ | | ಹೆಚ್ಚುವರಿಯಾಗಿ ಅವಶ್ಯವಿರುವ ಗುತ್ತಿಗೆ ಪ್ರಸೂತಿ ತಜ್ಞರ ಸಂಖ್ಯೆ | ವೆಚ್ಚ (ರೂ.ಗಳಲ್ಲಿ) | |
|---|---|---|---|---|
| 01 | ಗುತ್ತಿಗೆ ಪ್ರಸೂತಿ ತಜ್ಞರು | 17 | 17*1,10,000=18,70,000 (ರೂ.ಹದಿನೆಂಟು ಲಕ್ಷದ ಎಪ್ಪತ್ತು ಸಾವಿರ ರೂಗಳು ಮಾತ್ರ) | ಪ್ರತಿ ಮಾಹೆಗೆ |
| | | | 1870000*12=2,24,40,000 (ಎರಡು ಕೋಟಿ ಇಪ್ಪತ್ತ ನಾಲ್ಕು ಲಕ್ಷದ ನಲವತ್ತು ಸಾವಿರ ರೂಗಳು ಮಾತ್ರ) | ವಾರ್ಷಿಕ ವೆಚ್ಚ |

ಒಟ್ಟಾರೆ ಪಾಲಿಕೆಯ ಆಸ್ಪತ್ರೆಗಳಿಗೆ ಅವಶ್ಯವಿರುವ 38 ಪ್ರಸೂತಿ ತಜ್ಞರಿಗೆ ತಗಲುವ ವೆಚ್ಚ ರೂ.(2,77,20,000+2,24,40,000)=ರೂ.5,01,60,000/-ಗಳಾಗಿವೆ. (ರೂ. ಐದು ಕೋಟಿ ಒಂದು ಲಕ್ಷದ ಅರವತ್ತು ಸಾವಿರ ರೂಗಳು ಮಾತ್ರ).

ಸದರಿ ವೆಚ್ಚವನ್ನು ಪಾಲಿಕೆಯ2017-18 ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 13 ಪಿ-0 3117 ರಲ್ಲಿ ಮೀಸಲಿಟ್ಟಿರುವ 11.00 ಕೋಟಿಗಳಲ್ಲಿ ಭರಿಸಬಹುದಾಗಿದೆ.

ಈ ಪ್ರಸೂತಿ ತಜ್ಞರುಗಳನ್ನು ಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ನೇಮಕಾತಿ ಮಾಡಿಕೊಂಡಿದ್ದು, ವರ್ಷದ ಯಾವುದೇ ಸಂಧರ್ಭದಲ್ಲಿ ಬಿಟ್ಟು ಹೋಗುವ ಸಾಧ್ಯತೆ/ಸಂಭವವಿರುತ್ತದೆ.ಇದರ ಪರಿಣಾಮವಾಗಿ ವೈದ್ಯರ ಕೊರತೆ ಉಂಟಾಗುತ್ತದೆ. ಇದರಿಂದ ಆಸ್ಪತ್ರೆಯ ಕೆಲಸ ಕಾರ್ಯಗಳಿಗೆ ಅನಾನುಕೂಲವಾಗಲಿದೆ. ಕಡಿಮೆ ಸಮಯದಲ್ಲಿ/ ತಕ್ಷಣ ವೈದ್ಯರ ಕೊರತೆ ನೀಗಿಸುವುದು ಕಷ್ಟಸಾಧ್ಯವಾಗಿರುತ್ತದೆ.ಆದುದರಿಂದ ಈ ಹಿಂದಿನ ಸಾಲಿನಲ್ಲಿ ಕೈಗೊಂಡಿದ್ದ ನೇಮಕಾತಿ ಪ್ರಕ್ರಿಯೆಯ ಬದಲಾಗಿ ಈ ಕೆಳಕಂಡಂತೆ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಬಹುದಾಗಿದೆ.

- ಪ್ರಸೂತಿ ತಜ್ಞರನ್ನು ಗುತ್ತಿಗೆಆಧಾರದ ಮೇಲೆ ಒಂದು ವರ್ಷದ ಅವಧಿಗೆ ನೇಮಕಾತಿ ಮಾಡಿಕೊಳ್ಳುವ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕೃತ ವೆಬ್‌ಸೈಟ್/ದಿನಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.
- ಈ ಪ್ರಕಟಣೆಯ ಅವಧಿ ಮೂರು ತಿಂಗಳವರೆಗೆ ಅಥವಾ ಖಾಲಿ ಇರುವ ಪ್ರಸೂತಿ ತಜ್ಞರನ್ನು ತುಂಬುವವರೆವಿಗೆ ಯಾವುದು ಮೊದಲೋ ಅಲ್ಲಿಯವರೆವಿಗೆ ಚಾಲ್ತಿಯಲ್ಲಿರುತ್ತದೆ.
- ಅಭ್ಯರ್ಥಿಗಳು ಡಿ.ಜಿ.ಓ., ಎಂ.ಎಸ್‌ಒ.ಬಿ.ಜಿ, ಡಿ.ಎನ್.ಬಿ ಇನ್‌ಒ.ಬಿ.ಜಿ. ವಿದ್ಯಾರ್ಹತೆ ಹೊಂದಿರಬೇಕು(ಎಂ.ಸಿ.ಐ ನಿಂದ ಮಾನ್ಯತೆ ಪಡೆದಿರುವ ವಿಶ್ವ ವಿದ್ಯಾಲಯಗಳಲ್ಲಿ ವ್ಯಾಸಂಗ ಪಡೆದು ಪ್ರಮಾಣ ಪತ್ರ ಹೊಂದಿರಬೇಕು)
- ಕರ್ನಾಟಕ ಮೆಡಿಕಲ್ ಕೌನ್ಸಿಲ್‌ನಲಿ ್ಲತಮ್ಮ ಶೈಕ್ಷಣಿಕ ವಿದ್ಯಾರ್ಹತೆಯನ್ನು ನೋಂದಣಿ ಮಾಡಿಸಿರಬೇಕು. ಈ ಹಿಂದೆಯೇ ನೋಂದಣಿ ಮಾಡಿಸಿದ್ದಲ್ಲಿ ನವೀಕರಿಸಿರಬೇಕು.
- ಈ ನೇಮಕಾತಿಯನ್ನು ವಾಕ್‌ಇನ್‌ಇಂಟರ್‌ವ್ಯೂವ್ ಮುಖಾಂತರ ಮಾಡಲಾಗುವುದು.ಮೊದಲು ಬಂದವರಿಗೆ ಮೊದಲ ಆದ್ಯತೆ ನೀಡಲಾಗುವುದು.
- ಖಾಲಿ ಇರುವ ಹುದ್ದೆಗಳನುಸಾರವಾಗಿ, ಅವಶ್ಯಕತೆ ಇರುವ ಸ್ಥಳಗಳಲ್ಲಿ ಪ್ರಸೂತಿತಜ್ಞರನ್ನು ನೇಮಕಾತಿ ಮಾಡಿಕೊಳ್ಳಲಾಗುವುದು.
- ಪಾಲಿಕೆಯ ನಿರ್ಧಾರವೇಅಂತಿಮವಾಗಿರುತ್ತದೆ.

ಈ ಎಲ್ಲಾ ವಿಷಯಗಳನ್ನು ತಮ್ಮ ಅವಗಾಹನೆಗೆ ತರುತ್ತಾ ಗೌರವಧನ ಹೆಚ್ಚಳದೊಂದಿಗೆ ಪಾಲಿಕೆಯಲ್ಲಿ ಆಸ್ಪತ್ರೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ 21 ಗುತ್ತಿಗೆ ಪ್ರಸೂತಿ ತಜ್ಞರನ್ನು 2017-18ನೇ ಸಾಲಿಗೆ ಮುಂದುವರೆಸಲು ಹಾಗೂ ಅವಶ್ಯವಿರುವ 17 ಪ್ರಸೂತಿ ತಜ್ಞರನ್ನು ನೇಮಕಾತಿ ಮಾಡಿಕೊಳ್ಳುವ ಬಗ್ಗೆ ಕಡತವನ್ನು ಮಾಹಿತಿ / ಅಭಿಪ್ರಾಯಕ್ಕಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ **ವಿಶೇಷ ಆಯುಕ್ತರು (ಆರೋಗ್ಯ & ಘನತ್ಯಾಜ್ಯ) ರವರ ದಿನಾಂಕ: 27.3.217ರ ಟಿಪ್ಪಣಿಯನ್ನು ಒಪ್ಪುತ್ತಾ, ಕಡತವನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸುವುದೆಂದು ತೀರ್ಮಾನಿಸಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ: 16.05.2017ರ ಸಭೆಯ ನಿರ್ಣಯ.**

**ನಿರ್ಣಯ: ವಿಶೇಷ ಆಯುಕ್ತರು (ಆರೋಗ್ಯ & ಘನತ್ಯಾಜ್ಯ) ರವರ ದಿನಾಂಕ: 27-03-2017ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## *311. ವಿಷಯದ ಸಂಖ್ಯೆ: ತೆಆಸ್ಥಾಸ/28/2017-18*

ಆಯುಕ್ತರ ದಿನಾಂಕ: 01-04-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಈ ಕೆಳಕಂಡ ಪಶುವೈದ್ಯಕೀಯ ಪರೀಕ್ಷಕರುಗಳನ್ನು ಸದರಿಯವರ ಹೆಸರಿನ ಮುಂದೆ ಸೂಚಿಸಿರುವ ಸರ್ಕಾರದ ಆದೇಶದಂತೆ ಪಾಲಿಕೆಯಲ್ಲಿ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಖಾಲಿ ಇರುವ ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗೆ ನಿಯೋಜನೆ ಮೇಲೆ ಮರುಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿರುತ್ತಾರೆ.

| ಕ್ರ. ಸಂ. | ಅಧಿಕಾರಿ/ನೌಕರರ ಹೆಸರು | ಹಾಜರಾತಿ ದಿನಾಂಕ | ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ |
|---|---|---|---|
| 1 | ಶ್ರೀ ಮಹಂತೇಶ್‌ಗೌಡ | 08-09-2016 | ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ನಅಇ 120 ಎಂಎನ್‌ಜಿ 2016, ದಿ:08-09-2016 |
| 2 | ಶ್ರೀ ಅರುಣ ಕೆ ಮುತಾಲಿಕ ದೇಸಾಯಿ | 08-09-2016 | ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ನಅಇ 3279 ಎಂಎನ್‌ಜಿ 2016, ದಿ:08-09-2016 |

ಪರಿಶೀಲಿಸಲಾಗಿ, ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯಂತೆ ಪಶುವೈದ್ಯಕೀಯ ವಿಭಾಗದಲ್ಲಿ ಯಾವುದೇ ಮಂಜೂರಾದ ಹುದ್ದೆಗಳು ಇರುವುದಿಲ್ಲ. ಆದರೆ, ಪಾಲಿಕೆಯ ಪಶುವೈದ್ಯಕೀಯ ವಿಭಾಗದ ಕೆಲಸಕಾರ್ಯಗಳ ಹಿತದೃಷ್ಟಿಯಿಂದ ಹುದ್ದೆಗಳನ್ನು ಗುರುತಿಸಿ ಈ ಸಂಬಂಧ ಪಾಲಿಕೆ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ತಿದ್ದುಪಡಿ ಮಾಡುವ ಸಂಬಂಧ ಕಡತವು ವ್ಯವಹರಣೆಯಲ್ಲಿರುತ್ತದೆ.

| ಕ್ರ. ಸಂ. | ಹುದ್ದೆಗಳ ವಿವರ | ಮಂಜೂರಾಗಬೇಕಾದ ಹುದ್ದೆಗಳ ಸಂಖ್ಯೆ | ಹಾಲಿ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ವಿವರ |
|---|---|---|---|
| 1 | ಹಿರಿಯ ಪಶುವೈದ್ಯಕೀಯ ಪರೀಕ್ಷಕರು | 27 | 13 |

ಹಾಗೂ ಅದರಂತೆ ಪಾಲಿಕೆಯಲ್ಲಿ ಸದರಿ ಹುದ್ದೆಗಳನ್ನು ಪಶುಪಾಲನೆ ಮತ್ತು ಪಶುಸೇವಾ ಇಲಾಖೆ ವತಿಯಿಂದ ಮೇಲ್ಕಂಡ ಅಧಿಕಾರಿಗಳನ್ನು ಎರವಲು ಸೇವೆಯ ಮೇಲೆ ನಿಯೋಜಿಸಿಕೊಂಡು ಕಾರ್ಯನಿರ್ವಹಿಸಲಾಗುತ್ತಿದೆ.

ಮೇಲ್ಕಂಡ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆಯಂತೆ ಸದರಿ ಹಿರಿಯ ಪಶುವೈದ್ಯಕೀಯ ಪರೀಕ್ಷಕರುಗಳನ್ನು ಪಾಲಿಕೆಗೆ ಎರವಲು ಸೇವೆಯ ಮೇಲೆ ಕರ್ತವ್ಯದ ಮೇಲೆ ತೆಗೆದುಕೊಂಡಿದ್ದು, ಈ ಸಂಬಂಧ ಘಟನೋತ್ತರ ಮಂಜೂರಾತಿಗಾಗಿ ಕಡತವನ್ನು ಮಾಹಿತಿ / ಅಭಿಪ್ರಾಯಕ್ಕಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಮೇರೆಗೆ **ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಗಳಡಿ ಪಶುವೈದ್ಯಕೀಯ ವಿಭಾಗ ಕಛೇರಿ ಹಾಗೂ ಸದರಿ ಕಛೇರಿಗೆ ಯಾವುದೇ ಹುದ್ದೆಗಳು ಮಂಜೂರಾಗದೆ ಇದ್ದಾಗ್ಯೂ ಹಲವಾರು ಅಧಿಕಾರಿಗಳು ಪಶುವೈದ್ಯಕೀಯ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಈ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ, ಪ್ರಸ್ತುತ ಪಾಲಿಕೆಯ ಅಧೀನದಲ್ಲಿರುವ 04 ವಧಾಗಾರಗಳ ಮೇಲುಸ್ತುವಾರಿ ಹಾಗೂ ಕೋಳಿ ಮತ್ತು ಮಾಂಸದ ಅಂಗಡಿಗಳಿಗೆ ಉದ್ದಿಮೆ ಪರವಾನಗಿ ನೀಡುವ ಕೆಲಸ ಕಾರ್ಯಗಳನ್ನು ಮಾತ್ರ ಈ ವಿಭಾಗದಿಂದ ನಿರ್ವಹಿಸುತ್ತಿದ್ದು, ಪಶು ವೈದ್ಯಕೀಯ ವಿಭಾಗ ಜಾರಿಯಲ್ಲಿ ಇಲ್ಲದ ಸಮಯದಲ್ಲಿ, ಸದರಿಯವರು ನಿರ್ವಹಿಸುತ್ತಿರುವ ಕೆಲಸ ಕಾರ್ಯಗಳನ್ನು ಪಾಲಿಕೆಯ ಆರೋಗ್ಯ ಇಲಾಖೆಯ ವತಿಯಿಂದ ನಿರ್ವಹಿಸಲಾಗುತ್ತಿದುದ್ದರಿಂದ, ಪಶುಪಾಲನೆ ವಿಭಾಗದಲ್ಲಿ ಸುಮಾರು 28 ಮಂದಿ ಅಧಿಕಾರಿ / ನೌಕರರುಗಳು ಮಂಜೂರಾತಿ ಇಲ್ಲದ ಹುದ್ದೆಗಳಲ್ಲಿ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿದ್ದು, ಇದರಿಂದಾಗಿ ಸದರಿಯವರುಗಳಿಗೆ ವೇತನ ಹಾಗೂ ಇತರೆ ಭತ್ಯೆಗಳ ಪಾವತಿಯಿಂದಾಗಿ ಪಾಲಿಕೆಗೆ ಆರ್ಥಿಕ ಹೊರೆ ಹೆಚ್ಚಾಗಿರುತ್ತದೆ.**

**ಆದ್ದರಿಂದ, ಅನಗತ್ಯ ಹಾಗೂ ಮಂಜೂರಾತಿ ಇಲ್ಲದ ಹುದ್ದೆಗಳಲ್ಲಿ ಪಶುವೈದ್ಯಕೀಯಕ್ಕೆ ಸಂಬಂಧಿಸಿದ ಅಧಿಕಾರಿ/ನೌಕರರುಗಳು ಕಾರ್ಯನಿರ್ವಹಿಸುತ್ತಿದ್ದು, ಸಾರ್ವಜನಿಕ ಹಿತದೃಷ್ಟಿಯಿಂದ ಇವರುಗಳ ಅವಶ್ಯಕತೆ ಕಂಡು ಬರುತ್ತಿಲ್ಲವಾದ್ದರಿಂದ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ವ್ಯತಿರಿಕ್ತವಾಗಿ ಪಶುಪಾಲನೆ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ / ಸಿಬ್ಬಂದಿಗಳನ್ನು ಪಾಲಿಕೆಯ ಸೇವೆಯಿಂದ ಬಿಡುಗಡೆಗೊಳಿಸುವ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಗೆ ಸಭೆಯ ಮುಂದೆ ಕಡತವನ್ನು ಮಂಡಿಸುವುದೆಂದು ತೀರ್ಮಾನಿಸಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ: 16.05.2017ರ ಸಭೆಯ ನಿರ್ಣಯ.**

**ನಿರ್ಣಯ:–** ಸರ್ಕಾರದ ಅಧಿಕೃತ ಜ್ಞಾಪನ ಪತ್ರದಂತೆ ಪ್ರಸ್ತಾವನೆಯಲ್ಲಿ ತಿಳಿಸಿರುವಂತೆ 02 ಮಂದಿ ಹಿರಿಯ ಪಶುವೈದ್ಯಕೀಯ ಪರಿವೀಕ್ಷಕರುಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಕರ್ತವ್ಯ ನಿರ್ವಹಿಸಲು ನಿಯೋಜಿಸಿರುವಂತೆ ದಿನಾಂಕ: 08.09.2016 ರಂದು ಕರ್ತವ್ಯದ ಮೇಲೆ ಹಾಜರಾತಿಯನ್ನು ಸಲ್ಲಿಸಿರುವ ಇವರುಗಳನ್ನು ಪಾಲಿಕೆಗೆ ಎರವಲು ಸೇವೆಯ ಮೇರೆಗೆ ಕರ್ತವ್ಯದ ಮೇಲೆ ತೆಗೆದುಕೊಂಡಿದ್ದು ಘಟನೋತ್ತರ ಮಂಜೂರಾತಿ ಕೋರಿ ಮಂಡಿಸಿರುವ ಹಿನ್ನಲೆಯಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ದಿನಾಂಕ: 16.05.2017ರ ನಿರ್ಣಯದಲ್ಲಿ ಈ ಹುದ್ದೆಗಳು ಮಂಜೂರಾತಿ ಹುದ್ದೆಗಳಾಗಿರುವುದಿಲ್ಲವೆಂದು, ಇವರುಗಳನ್ನು ಪಾಲಿಕೆಗೆ ನಿಯೋಜಿಸಿಕೊಳ್ಳುವುದರಿಂದ ಆರ್ಥಿಕವಾಗಿ ಹೊರೆಯಾಗಲಿದ್ದು, ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ವ್ಯತಿರಿಕ್ತವಾಗುವುದರಿಂದ ಈಗಾಗಲೇ

ಪಶುಪಾಲನೆ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳನ್ನು ಪಾಲಿಕೆಯ ಸೇವೆಯಿಂದ ಬಿಡುಗಡೆಗೊಳಿಸುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುತ್ತಾರೆ. ಈ ವಿಷಯದ ಬಗ್ಗೆ ಸಭೆಯಲ್ಲಿ ಹಾಜರಿದ್ದ ಉಪ ಆಯುಕ್ತರು (ಆಡಳಿತ) ರವರೊಂದಿಗೆ ಚರ್ಚಿಸಲಾಗಿ, **'ಪ್ರಸ್ತಾವನೆಯಲ್ಲಿ ತಿಳಿಸಿರುವ ಅಧಿಕಾರಿ/ಸಿಬ್ಬಂದಿಗಳ ಸೇವೆಯು ಪಾಲಿಕೆಗೆ ಅವಶ್ಯಕತೆಯಿರುವುದಾಗಿ ತಿಳಿಸಿರುತ್ತಾರೆ'**. ಆದುದರಿಂದ ಈ ಪ್ರಕರಣದಲ್ಲಿ ಸದರಿ ಅಧಿಕಾರಿ/ಸಿಬ್ಬಂದಿಗಳ ಸೇವೆ ನಗರ ಪಾಲಿಕೆಗೆ ಅಗತ್ಯವಿದೆಯೇ ಅಥವಾ ಇಲ್ಲವೇ? ಎಂಬ ಬಗ್ಗೆ ಹಾಗೂ ವೇತನ ಮತ್ತು ಇತರೆ ಭತ್ಯೆಗಳನ್ನು ಪಾವತಿಸುತ್ತಿರುವುದು ಕಂಡುಬಂದಿದ್ದು, ಅಂತಿಮ ತೀರ್ಮಾನಕ್ಕಾಗಿ ಪಾಲಿಕೆ ಸಭೆಯ ಮುಂದೆ ಮಂಡಿಸುವುದೆಂದು ಸಮಿತಿಯು ತೀರ್ಮಾನಿಸಿತು.

## *32]. ವಿಷಯದ ಸಂಖ್ಯೆ: ತೆಆಸ್ಥಾಸ/29/2017-18*

ಆಯುಕ್ತರ ದಿನಾಂಕ: 03-04-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ: ನಅಇ 375 ಎಂಎನ್‌ಜಿ 2016, ದಿನಾಂಕ:04-11-2016 ರಲ್ಲಿ ಡಾ॥ ಕೃತಿಕಾ.ಹೆಚ್.ಕೆ. ಪಶುವೈದ್ಯಾಧಿಕಾರಿ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ಇವರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಖಾಲಿ ಇರುವ ಪಶುವೈದ್ಯಧಿಕಾರಿ ಹುದ್ದೆಗೆ ನಿಯೋಜಿಸಲಾಗಿರುತ್ತದೆ.

ಡಾ॥ ಕೃತಿಕಾ.ಹೆಚ್.ಕೆ. ಪಶುವೈದ್ಯಾಧಿಕಾರಿ ರವರು ಮಾನ್ಯ ಉಪ ಆಯುಕ್ತರು (ಆಡಳಿತ) ರವರ ಕಛೇರಿಯಲ್ಲಿ ದಿನಾಂಕ: 04-11-2016 ರಂದು ಕರ್ತವ್ಯದ ಮೇಲೆ ಹಾಜರಾತಿಯನ್ನು ಸಲ್ಲಿಸಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆಯಲ್ಲಿ ಡಾ॥ ಕೃತಿಕಾ.ಹೆಚ್.ಕೆ. ಪಶುವೈದ್ಯಾಧಿಕಾರಿ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ಇವರನ್ನು ಪಾಲಿಕೆಗೆ ಎರವಲು ಸೇವೆಯ ಮೇಲೆ ಪಶುವೈದ್ಯಾಧಿಕಾರಿ ಹುದ್ದೆಯಲ್ಲಿ ಕರ್ತವ್ಯದ ಮೇಲೆ ತೆಗೆದುಕೊಂಡಿರುವ ಬಗ್ಗೆ ಘಟನೋತ್ತರ ಮಂಜೂರಾತಿಗಾಗಿ ಕಡತವನ್ನು ಮಾಹಿತಿ / ಅಭಿಪ್ರಾಯಕ್ಕಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಮೇರೆಗೆ, **<u>ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಗಳಡಿ ಪಶುವೈದ್ಯಕೀಯ ವಿಭಾಗ ಕಛೇರಿ ಹಾಗೂ ಸದರಿ ಕಛೇರಿಗೆ ಯಾವುದೇ ಹುದ್ದೆಗಳು ಮಂಜೂರಾಗದೆ ಇದ್ದಾಗ್ಯೂ ಹಲವಾರು ಅಧಿಕಾರಿಗಳು ಪಶುವೈದ್ಯಕೀಯ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಈ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ, ಪ್ರಸ್ತುತ ಪಾಲಿಕೆಯ ಅಧೀನದಲ್ಲಿರುವ 04 ವಧಾಗಾರಗಳ ಮೇಲುಸ್ತುವಾರಿ ಹಾಗೂ ಕೋಳಿ ಮತ್ತು ಮಾಂಸದ ಅಂಗಡಿಗಳಿಗೆ ಉದ್ದಿಮೆ ಪರವಾನಗಿ ನೀಡುವ ಕೆಲಸ ಕಾರ್ಯಗಳನ್ನು ಮಾತ್ರ ಈ ವಿಭಾಗದಿಂದ ನಿರ್ವಹಿಸುತ್ತಿದ್ದು, ಪಶು ವೈದ್ಯಕೀಯ ವಿಭಾಗ ಜಾರಿಯಲ್ಲಿ ಇಲ್ಲದ ಸಮಯದಲ್ಲಿ, ಸದರಿಯವರು ನಿರ್ವಹಿಸುತ್ತಿರುವ ಕೆಲಸ ಕಾರ್ಯಗಳನ್ನು ಪಾಲಿಕೆಯ ಆರೋಗ್ಯ ಇಲಾಖೆಯ ವತಿಯಿಂದ ನಿರ್ವಹಿಸಲಾಗುತ್ತಿದುದ್ದರಿಂದ, ಪಶುಪಾಲನೆ ವಿಭಾಗದಲ್ಲಿ ಸುಮಾರು 28 ಮಂದಿ ಅಧಿಕಾರಿ / ನೌಕರರುಗಳು ಮಂಜೂರಾತಿ ಇಲ್ಲದ ಹುದ್ದೆಗಳಲ್ಲಿ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿದ್ದು, ಇದರಿಂದಾಗಿ ಸದರಿಯವರುಗಳಿಗೆ ವೇತನ ಹಾಗೂ ಇತರೆ ಭತ್ಯೆಗಳ ಪಾವತಿಯಿಂದಾಗಿ ಪಾಲಿಕೆಗೆ ಆರ್ಥಿಕ ಹೊರೆ ಹೆಚ್ಚಾಗಿರುತ್ತದೆ.</u>**

**ಆದ್ದರಿಂದ, ಅನಗತ್ಯ ಹಾಗೂ ಮಂಜೂರಾತಿ ಇಲ್ಲದ ಹುದ್ದೆಗಳಲ್ಲಿ ಪಶುವೈದ್ಯಕೀಯಕ್ಕೆ ಸಂಬಂಧಿಸಿದ ಅಧಿಕಾರಿ/ನೌಕರರುಗಳು ಕಾರ್ಯನಿರ್ವಹಿಸುತ್ತಿದ್ದು, ಸಾರ್ವಜನಿಕ ಹಿತದೃಷ್ಟಿಯಿಂದ ಇವರುಗಳ ಅವಶ್ಯಕತೆ ಕಂಡು ಬರುತ್ತಿಲ್ಲವಾದ್ದರಿಂದ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ವ್ಯತಿರಿಕ್ತವಾಗಿ ಪಶುಪಾಲನೆ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ / ಸಿಬ್ಬಂದಿಗಳನ್ನು ಪಾಲಿಕೆಯ ಸೇವೆಯಿಂದ ಬಿಡುಗಡೆಗೊಳಿಸುವ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಗೆ ಸಭೆಯ ಮುಂದೆ ಕಡತವನ್ನು ಮಂಡಿಸುವುದೆಂದು ತೀರ್ಮಾನಿಸಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ: 16.05.2017ರ ಸಭೆಯ ನಿರ್ಣಯ.**

**ನಿರ್ಣಯ:–** ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಕೃತ ಜ್ಞಾಪನ ಪತ್ರದ ಸಂಖ್ಯೆ: ನಅಇ 375ಎಂಎನ್‌ಜೆ 2016, ದಿನಾಂಕ: 04–11–2016ರ ಆದೇಶದಂತೆ ಡಾ॥ ಕೃತಿಕಾ.ಹೆಚ್.ಕೆ, ಪಶುವೈದ್ಯಾಧಿಕಾರಿ, ಪಶು ಸಂಗೋಪನಾ ಮತ್ತು ಮೀನುಗಾರಿಕೆ ಇಲಾಖೆ ಇವರನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಕರ್ತವ್ಯ ನಿರ್ವಹಿಸಲು ನಿಯೋಜಿಸಿರುವಂತೆ ದಿನಾಂಕ: 04.11.2016 ರಂದು ಕರ್ತವ್ಯದ ಮೇಲೆ ಹಾಜರಾತಿಯನ್ನು ಸಲ್ಲಿಸಿರುವ ಇವರನ್ನು ಪಾಲಿಕೆಗೆ ಎರವಲು ಸೇವೆಯ ಮೇರೆಗೆ ಕರ್ತವ್ಯದ ಮೇಲೆ ಹಾಜರಾತಿಯನ್ನು ಸಲ್ಲಿಸಿರುವ ಇವರನ್ನು ಪಾಲಿಕೆಗೆ ಎರವಲು ಸೇವೆಯ ಮೇರೆಗೆ ಕರ್ತವ್ಯದ ಮೇಲೆ ತೆಗೆದುಕೊಂಡಿದ್ದು ಘಟನೊತ್ತರ ಮಂಜೂರಾತಿ ಕೋರಿ ಮಂಡಿಸಿರುವ ಹಿನ್ನಲೆಯಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ದಿನಾಂಕ: 16.05.2017ರ ನಿರ್ಣಯದಲ್ಲಿ ಈ ಹುದ್ದೆಗಳು ಮಂಜೂರಾತಿ ಹುದ್ದೆಗಳಾಗಿರುವುದಿಲ್ಲವೆಂದು, ಇವರುಗಳನ್ನು ಪಾಲಿಕೆಗೆ ನಿಯೋಜಿಸಿಕೊಳ್ಳುವುದರಿಂದ ಆರ್ಥಿಕವಾಗಿ ಹೊರೆಯಾಗಲಿದ್ದು, ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ವ್ಯತಿರಿಕ್ತವಾಗುವುದರಿಂದ ಈಗಾಗಲೇ ಪಶುಪಾಲನೆ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳನ್ನು ಪಾಲಿಕೆಯ ಸೇವೆಯಿಂದ ಬಿಡುಗಡೆಗೊಳಿಸುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುತ್ತಾರೆ. ಈ ವಿಷಯದ ಬಗ್ಗೆ ಸಭೆಯಲ್ಲಿ ಹಾಜರಿದ್ದ ಉಪ ಆಯುಕ್ತರು (ಆಡಳಿತ) ರವರೊಂದಿಗೆ ಚರ್ಚಿಸಲಾಗಿ, **'ಪ್ರಸ್ತಾವನೆಯಲ್ಲಿ ತಿಳಿಸಿರುವ ಅಧಿಕಾರಿ/ಸಿಬ್ಬಂದಿಗಳ ಸೇವೆಯು ಪಾಲಿಕೆಗೆ ಅವಶ್ಯಕತೆಯಿರುವುದಾಗಿ ತಿಳಿಸಿರುತ್ತಾರೆ'**. ಆದುದರಿಂದ ಈ ಪ್ರಕರಣದಲ್ಲಿ ಸದರಿ ಅಧಿಕಾರಿಯ ಸೇವೆ ನಗರ ಪಾಲಿಕೆಗೆ ಅಗತ್ಯವಿದೆಯೇ ಅಥವಾ ಇಲ್ಲವೇ? ಎಂಬ ಬಗ್ಗೆ ಹಾಗೂ ವೇತನ ಮತ್ತು ಇತರೆ ಭತ್ಯೆಗಳನ್ನು ಪಾವತಿಸುತ್ತಿರುವುದು ಕಂಡುಬಂದಿದ್ದು, ಅಂತಿಮ ತೀರ್ಮಾನಕ್ಕಾಗಿ ಪಾಲಿಕೆ ಸಭೆಯ ಮುಂದೆ ಮಂಡಿಸುವುದೆಂದು ಸಮಿತಿಯು ತೀರ್ಮಾನಿಸಿತು.

### ***331. ವಿಷಯದ ಸಂಖ್ಯೆ: ತೆಆಸ್ಥಾಸ/30/2017–18***

ಆಯುಕ್ತರ ದಿನಾಂಕ: 01–04–2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ:ನಅಇ 376 ಎಂಎನ್‌ಜೆ 2016, ದಿನಾಂಕ:07–11–2016 ರಲ್ಲಿ ಡಾ॥ ಡಿ.ಕೃಷ್ಣೇಗೌಡ, ಸಹಾಯಕ ನಿರ್ದೇಶಕರು (ಪಶುಪಾಲನೆ), ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ಇವರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ

ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಖಾಲಿ ಇರುವ ಸಹಾಯಕ ನಿರ್ದೇಶಕರು (ಪಶುಪಾಲನೆ) ಹುದ್ದೆಗೆ ನಿಯೋಜಿಸಲಾಗಿರುತ್ತದೆ.

ಡಾ॥ ಡಿ.ಕೃಷ್ಣೇಗೌಡ, ಸಹಾಯಕ ನಿರ್ದೇಶಕರು (ಪಶುಪಾಲನೆ) ರವರು ಮಾನ್ಯ ಆಯುಕ್ತರು ರವರ ಕಛೇರಿಯಲ್ಲಿ ದಿನಾಂಕ: 07-11-2016 ರಂದು ಕರ್ತವ್ಯದ ಮೇಲೆ ಹಾಜರಾತಿಯನ್ನು ಸಲ್ಲಿಸಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆಯಲ್ಲಿ ಡಾ॥ ಡಿ.ಕೃಷ್ಣೇಗೌಡ, ಸಹಾಯಕ ನಿರ್ದೇಶಕರು (ಪಶುಪಾಲನೆ), ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ಇವರನ್ನು ಪಾಲಿಕೆಗೆ ಎರವಲು ಸೇವೆಯ ಮೇಲೆ ಸಹಾಯಕ ನಿರ್ದೇಶಕರು (ಪಶುಪಾಲನೆ) ಹುದ್ದೆಯಲ್ಲಿ ಕರ್ತವ್ಯದ ಮೇಲೆ ತೆಗೆದುಕೊಂಡಿರುವ ಬಗ್ಗೆ ಘಟನೋತ್ತರ ಮಂಜೂರಾತಿಗಾಗಿ ಕಡತವನ್ನು ಮಾಹಿತಿ / ಅಭಿಪ್ರಾಯಕ್ಕಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಮೇರೆಗೆ, **ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಗಳಡಿ ಪಶುವೈದ್ಯಕೀಯ ವಿಭಾಗ ಕಛೇರಿ ಹಾಗೂ ಸದರಿ ಕಛೇರಿಗೆ ಯಾವುದೇ ಹುದ್ದೆಗಳು ಮಂಜೂರಾಗದೆ ಇದ್ದಾಗ್ಯೂ ಹಲವಾರು ಅಧಿಕಾರಿಗಳು ಪಶುವೈದ್ಯಕೀಯ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಈ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ, ಪ್ರಸ್ತುತ ಪಾಲಿಕೆಯ ಅಧೀನದಲ್ಲಿರುವ 04 ವಧಾಗಾರಗಳ ಮೇಲುಸ್ತುವಾರಿ ಹಾಗೂ ಕೋಳಿ ಮತ್ತು ಮಾಂಸದ ಅಂಗಡಿಗಳಿಗೆ ಉದ್ದಿಮೆ ಪರವಾನಗಿ ನೀಡುವ ಕೆಲಸ ಕಾರ್ಯಗಳನ್ನು ಮಾತ್ರ ಈ ವಿಭಾಗದಿಂದ ನಿರ್ವಹಿಸುತ್ತಿದ್ದು, ಪಶು ವೈದ್ಯಕೀಯ ವಿಭಾಗ ಜಾರಿಯಲ್ಲಿ ಇಲ್ಲದ ಸಮಯದಲ್ಲಿ, ಸದರಿಯವರು ನಿರ್ವಹಿಸುತ್ತಿರುವ ಕೆಲಸ ಕಾರ್ಯಗಳನ್ನು ಪಾಲಿಕೆಯ ಆರೋಗ್ಯ ಇಲಾಖೆಯ ವತಿಯಿಂದ ನಿರ್ವಹಿಸಲಾಗುತ್ತಿದುದ್ದರಿಂದ, ಪಶುಪಾಲನೆ ವಿಭಾಗದಲ್ಲಿ ಸುಮಾರು 28 ಮಂದಿ ಅಧಿಕಾರಿ / ನೌಕರರುಗಳು ಮಂಜೂರಾತಿ ಇಲ್ಲದ ಹುದ್ದೆಗಳಲ್ಲಿ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿದ್ದು, ಇದರಿಂದಾಗಿ ಸದರಿಯವರುಗಳಿಗೆ ವೇತನ ಹಾಗೂ ಇತರೆ ಭತ್ಯೆಗಳ ಪಾವತಿಯಿಂದಾಗಿ ಪಾಲಿಕೆಗೆ ಆರ್ಥಿಕ ಹೊರೆ ಹೆಚ್ಚಾಗಿರುತ್ತದೆ.**

**ಆದ್ದರಿಂದ, ಅನಗತ್ಯ ಹಾಗೂ ಮಂಜೂರಾತಿ ಇಲ್ಲದ ಹುದ್ದೆಗಳಲ್ಲಿ ಪಶುವೈದ್ಯಕೀಯಕ್ಕೆ ಸಂಬಂಧಿಸಿದ ಅಧಿಕಾರಿ/ನೌಕರರುಗಳು ಕಾರ್ಯನಿರ್ವಹಿಸುತ್ತಿದ್ದು, ಸಾರ್ವಜನಿಕ ಹಿತದೃಷ್ಟಿಯಿಂದ ಇವರುಗಳ ಅವಶ್ಯಕತೆ ಕಂಡು ಬರುತ್ತಿಲ್ಲವಾದ್ದರಿಂದ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ವ್ಯತಿರಿಕ್ತವಾಗಿ ಪಶುಪಾಲನೆ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ / ಸಿಬ್ಬಂದಿಗಳನ್ನು ಪಾಲಿಕೆಯ ಸೇವೆಯಿಂದ ಬಿಡುಗಡೆಗೊಳಿಸುವ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಗೆ ಸಭೆಯ ಮುಂದೆ ಕಡತವನ್ನು ಮಂಡಿಸುವುದೆಂದು ತೀರ್ಮಾನಿಸಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ: 16.05.2017ರ ಸಭೆಯ ನಿರ್ಣಯ.**

**ನಿರ್ಣಯ:-** ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಕೃತ ಜ್ಞಾಪನ ಪತ್ರದ ಸಂಖ್ಯೆ: ನಅಇ 376ಎಂಎನ್‌ಜಿ 2016, ದಿನಾಂಕ: 07-11-2016ರ ಆದೇಶದಂತೆ ಡಾ॥ ಡಿ.ಕೃಷ್ಣೇಗೌಡ, ಸಹಾಯಕ ನಿರ್ದೇಶಕರು (ಪಶು ಪಾಲನೆ), ಪಶು ಸಂಗೋಪನಾ ಮತ್ತು ಮೀನುಗಾರಿಕೆ ಇಲಾಖೆ ಇವರನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಕರ್ತವ್ಯ ನಿರ್ವಹಿಸಲು ನಿಯೋಜಿಸಿರುವಂತೆ ದಿನಾಂಕ: 07.11.2016 ರಂದು ಕರ್ತವ್ಯದ ಮೇಲೆ ಹಾಜರಾತಿಯನ್ನು ಸಲ್ಲಿಸಿರುವ ಇವರನ್ನು ಪಾಲಿಕೆಗೆ ಎರವಲು ಸೇವೆಯ ಮೇರೆಗೆ ಕರ್ತವ್ಯದ ಮೇಲೆ ಹಾಜರಾತಿಯನ್ನು ಸಲ್ಲಿಸಿರುವ ಇವರನ್ನು ಪಾಲಿಕೆಗೆ ಎರವಲು ಸೇವೆಯ ಮೇರೆಗೆ ಕರ್ತವ್ಯದ ಮೇಲೆ ತೆಗೆದುಕೊಂಡಿದ್ದು ಘಟನೊತ್ತರ ಮಂಜೂರಾತಿ ಕೋರಿ ಮಂಡಿಸಿರುವ

ಹಿನ್ನಲೆಯಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ದಿನಾಂಕ: 16.05.2017ರ ನಿರ್ಣಯದಲ್ಲಿ ಈ ಹುದ್ದೆಗಳು ಮಂಜೂರಾತಿ ಹುದ್ದೆಗಳಾಗಿರುವುದಿಲ್ಲವೆಂದು, ಇವರುಗಳನ್ನು ಪಾಲಿಕೆಗೆ ನಿಯೋಜಿಸಿಕೊಳ್ಳುವುದರಿಂದ ಆರ್ಥಿಕವಾಗಿ ಹೊರೆಯಾಗಲಿದ್ದು, ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ವ್ಯತಿರಿಕ್ತವಾಗುವುದರಿಂದ ಈಗಾಗಲೇ ಪಶುಪಾಲನೆ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳನ್ನು ಪಾಲಿಕೆಯ ಸೇವೆಯಿಂದ ಬಿಡುಗಡೆಗೊಳಿಸುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುತ್ತಾರೆ. ಈ ವಿಷಯದ ಬಗ್ಗೆ ಸಭೆಯಲ್ಲಿ ಹಾಜರಿದ್ದ ಉಪ ಆಯುಕ್ತರು (ಆಡಳಿತ) ರವರೊಂದಿಗೆ ಚರ್ಚಿಸಲಾಗಿ, **'ಪ್ರಸ್ತಾವನೆಯಲ್ಲಿ ತಿಳಿಸಿರುವ ಅಧಿಕಾರಿ/ಸಿಬ್ಬಂದಿಗಳ ಸೇವೆಯು ಪಾಲಿಕೆಗೆ ಅವಶ್ಯಕತೆಯಿರುವುದಾಗಿ ತಿಳಿಸಿರುತ್ತಾರೆ'**. ಆದುದರಿಂದ ಈ ಪ್ರಕರಣದಲ್ಲಿ ಸದರಿ ಅಧಿಕಾರಿಯ ಸೇವೆ ನಗರ ಪಾಲಿಕೆಗೆ ಅಗತ್ಯವಿದೆಯೇ ಅಥವಾ ಇಲ್ಲವೇ? ಎಂಬ ಬಗ್ಗೆ ಹಾಗೂ ವೇತನ ಮತ್ತು ಇತರೆ ಭತ್ಯೆಗಳನ್ನು ಪಾವತಿಸುತ್ತಿರುವುದು ಕಂಡುಬಂದಿದ್ದು, ಅಂತಿಮ ತೀರ್ಮಾನಕ್ಕಾಗಿ ಪಾಲಿಕೆ ಸಭೆಯ ಮುಂದೆ ಮಂಡಿಸುವುದೆಂದು ಸಮಿತಿಯು ತೀರ್ಮಾನಿಸಿತು.

## ***<u>34]. ವಿಷಯದ ಸಂಖ್ಯೆಃ ತೆಆಸ್ಥಾಸ/31/2017-18</u>***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 22.05.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಹೆಚ್ಚುವರಿ ಅನುದಾನವನ್ನು ಅಳವಡಿಸಿಕೊಳ್ಳಲು ಅನುಮೋದನೆಗಾಗಿ ಮಂಡಸಲಾದ ಟಿಪ್ಪಣಿ ಸರ್ಕಾರದ ಆದೇಶ ಸಂಖ್ಯೆ ನಅಇ 19 ಎಂಎನ್‌ವೈ 2017, ದಿ: 06.05.2017ರಲ್ಲಿ 2015-16ನೇ ಸಾಲಿನ 14ನೇ ಹಣಕಾಸು ಆಯೋಗದ "ಸಾಮಾನ್ಯ ಸಾಧನೆ ಅನುದಾನ"ದಡಿ 117 ಕಾಮಗಾರಿಗಳಿಗೆ 2016-17ನೇ ಸಾಲಿಗೆ ರೂ.8176.35 ಲಕ್ಷಗಳ ಅನುದಾನ ನೀಡಲಾಗಿ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್. ಮುಖಾಂತರ ನಿರ್ವಹಿಸಲು ಆದೇಶಿಸಿರುತ್ತಾರೆ.

ಸದರಿ ಸರ್ಕಾರದ ಆದೇಶದ ಪ್ರತಿಯನ್ನು ಆದೇಶಕ್ಕೆ ಸಲ್ಲಿಸಿದೆ. 2016-17ನೇ ಸಾಲಿನ 14ನೇ ಹಣಕಾಸು ಆಯೋಗದ ಕಾಮಗರಿಗಳಿಗೆ ಲೆಕ್ಕಶಿರ್ಷಿಕೆ ಪಿ-3110 ಅಡಿ ಜಾಬ್‌ಸಂಖ್ಯೆ ನೀಡಲಾಗುತ್ತಿದೆ. ಸದರಿ Performance Budget ಅನುದಾನವು ಆಯವ್ಯಯದಲ್ಲಿ ಅನುದಾನವನ್ನು ಮೀಸಲಿರಿಸಿರುವುದಿಲ್ಲ. 2016-17ನೇ ಸಾಲಿನ ಆಯವ್ಯಯದಡಿ ಜಾಬ್‌ಸಂಖ್ಯೆ ನೀಡುವ ಪ್ರಕ್ರಿಯೆ ಮಾನ್ಯ ಆಯುಕ್ತರ ಆದೇಶದಂತೆ ಈಗಾಗಲೇ ಸ್ಥಗಿತಗೊಳಿಸಲಾಗಿದೆ. ಮತ್ತು 2017-18ನೇ ಸಾಲಿನ ಕರಡು ಆಯವ್ಯಯವು ಸರ್ಕಾರದ ಅನುಮೋದನೆಯಾಗಬೇಕಿದೆ. ಸರ್ಕಾರವು 2016-17ನೇ ಸಾಲಿಗೆ 14ನೇ ಹಣಕಾಸು ಆಯೋಗದ ಸಾಮಾನ್ಯ "ಸಾಧನೆ ಅನುದಾನ"ದಡಿ ಅನುದಾನವನ್ನು ನೀಡಿರುತ್ತದೆ.

2016-17ನೇ ಸಾಲಿನ 14ನೇ ಹಣಕಾಸು ಆಯೋಗದ ಅನುದಾನದ ಲೆಕ್ಕಶೀರ್ಷಿಕೆ ಪಿ-3110 ಅಡಿ ಸದರಿ ಮೊತ್ತವನ್ನು ರೂ.8176.35 ಲಕ್ಷಗಳನು ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಬೇಕಿದೆ.

ಮೇಲ್ಕಂಡ ಅಂಶಗಳನ್ನು ತಮ್ಮ ಅವಗಾಹನೆಗೆ ಸಲ್ಲಿಸುತ್ತಾ 2016-17ನೇ ಸಾಲಿನ 14ನೇ ಹಣಕಾಸು ಆಯೋಗದ ಪಿ-3110 ಅಡಿ ರೂ.8176.35 ಲಕ್ಷಗಳನ್ನು ಹೆಚ್ಚುವರಿಯಾಗಿ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 22-05-2017ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## *351. ವಿಷಯದ ಸಂಖ್ಯೆಃ ತೆಆಸ್ಥಾಸ/32/2017-18*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 24.05.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ವಾರ್ಡ್ ಸಂಖ್ಯೆ 43, ನಂದಿನಿ ಬಡಾವಣೆಯ ಸ್ವತ್ತಿನ ಸಂಖ್ಯೆ 266, ರೈಲ್ವೆ ಮೆನ್ಸ್ ಹೆಚ್.ಬಿ.ಸಿ.ಎಸ್., ಬೆಂಗಳೂರು-96 ರಲ್ಲಿ ಅನಧಿಕೃತವಾಗಿ ಕಟ್ಟಡ ನಿರ್ಮಿಸುತ್ತಿರುವುದು ಕಂಡುಬಂದಿದ್ದು, ಕಟ್ಟಡದ ಮಾಲೀಕರಿಗೆ ಕೆಲಸವನ್ನು ಸ್ಥಗಿತಗೊಳಿಸಿ ಕೆ.ಎಂ.ಸಿ. ಕಾಯ್ದೆ 1976ರ ಅನ್ವಯ ಸೆಕ್ಷನ್ 308ರ ನೋಟೀಸ್‌ನ್ನು ದಿನಾಂಕ: 13.11.2015 ರಂದು ಜಾರಿ ಮಾಡಿ ಸ್ವತ್ತಿಗೆ ಸಂಬಂಧಿಸಿದ ಮಂಜೂರಾತಿ ನಕ್ಷೆ, ಇತರೆ ದಾಖಲಾತಿಗಳನ್ನು ನೀಡಲು ಸೂಚಿಸಿರುತ್ತಾರೆ. ಸದರಿ ನೋಟೀಸ್‌ಗೆ ಸ್ವತ್ತಿನ ಮಾಲೀಕರು ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ಸದರಿ ಕಟ್ಟಡಕ್ಕೆ ಎಲ್..ಪಿ. ಸಂಖ್ಯೆ ಎಇಇ/ಎಂಎಲ್‌ಪಿ/ಎಲ್.ಪಿ/92/14-15 ದಿನಾಂಕ: 07.11.2014 ರಂದು ನಕ್ಷೆ ಮಂಜೂರಾತಿ ಆಗಿರುತ್ತದೆ.

ಮುಂದುವರೆದಂತೆ ಮಂಜೂರಾತಿ ನಕ್ಷೆಗೆ ವ್ಯತಿರಿಕ್ತವಾಗಿ ಕಟ್ಟಡವನ್ನು ನಿರ್ಮಿಸುತ್ತಿರುವುದರಿಂದ ಕಟ್ಟಡದ ವ್ಯತಿರಿಕ್ತ ಭಾಗಗಳನ್ನು ತೆರವುಗೊಳಿಸುವಂತೆ ಸ್ವತ್ತಿನ ಮಾಲೀಕರಿಗೆ ದಿನಾಂಕ: 16.01.2016 ರಂದು ಕೆ.ಎಂ.ಸಿ. ಕಾಯ್ದೆ 1976ರ ಕಲಂ (1) & (2) ರ ಅನ್ವಯ ತಾತ್ಕಾಲಿಕ ಆದೇಶದ ನೋಟೀಸ್‌ನ್ನು ನೀಡಲಾಗಿರುತ್ತದೆ. ಆದರೆ ಮಾಲೀಕರು ಯಾವುದೇ ಉತ್ತರವನ್ನು ನೀಡದೆ ಕಟ್ಟಡದ ವ್ಯತಿರಿಕ್ತ ಭಾಗಗಳನ್ನು ತೆರವುಗೊಳಿಸಿರುವುದಿಲ್ಲ.

ಮುಂದುವರೆದು ದಿನಾಂಕ: 25.01.2016 ರಂದು ಸ್ವತ್ತಿನ ಮಾಲೀಕರಿಗೆ ಕೆ.ಎಂ.ಸಿ. ಕಾಯ್ದೆ 1976ರ ಕಲಂ 321 (3) ರ ಅನ್ವಯ ಸ್ಥಿರೀಕರಣ ಆದೇಶದ ನೋಟೀಸ್‌ನ್ನು ನೀಡಲಾಗಿದೆ. ಆದರೂ ಸಹ ಸ್ವತ್ತಿನ ಮಾಲೀಕರು ನೋಟೀಸ್‌ಗೆ ಯಾವುದೇ ಉತ್ತರವನ್ನು ನೀಡದೆ ಕಟ್ಟಡದ ವ್ಯತಿರಿಕ್ತ ಭಾಗಗಳನ್ನು ತೆರವುಗೊಳಿಸಿರುವುದಿಲ್ಲ. ದಿನಾಂಕ: 01.03.2017 ರಂದು ಕಾರ್ಯಪಾಲಕ ಅಭಿಯಂತರರು ಸ್ಥಳ ಪರಿಶೀಲಿಸಿ ಕೆ.ಎಂ.ಸಿ. ಕಾಯ್ದೆ 1976ರ ಮತ್ತು ಅದರಡಿಯಲ್ಲಿ ರಚಿತವಾಗಿರುವ ಸೆಕ್ಷನ್ 462ರ ಅನ್ವಯ ಕೂಡಲೇ ಕಟ್ಟಡದ ವ್ಯತಿರಿಕ್ತ ಭಾಗಗಳನ್ನು ತೆರವುಗೊಳಿಸಲು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ರವರಿಗೆ ಅದೇಶ ನೀಡಿರುತ್ತಾರೆ.

ಕಟ್ಟಡದ ವ್ಯತಿರಿಕ್ತ ಭಾಗಗಳನ್ನು ತೆರವುಗೊಳಿಸಲು ರೂ. 3.10 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಅನುದಾನವನ್ನು ದೊರಕಿಸಿಕೊಡಲು ಅನುಮೋದನೆಗಾಗಿ ಕೋರಿರುತ್ತಾರೆ. ಮುಖ್ಯ ಆರ್ಥಿಕ ಅಧಿಕಾರಿ ರವರು ಲೆಕ್ಕ ಶೀರ್ಷಿಕೆ ಪಿ.-0055 Encroachment clearance expenses (Demolition charges) ಅಡಿಯಲ್ಲಿ ಅನುದಾನ ಲಭ್ಯವಿರುವುದಿಲ್ಲ ಆದ್ದರಿಂದ 2016-17ನೇ ಪರಿಷ್ಕೃತ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ-0055 ಅಡಿಯಲ್ಲಿ ಕೊರತೆ ಅನುದಾನ ರೂ. 3.10 ಲಕ್ಷಗಳನ್ನು ಅಳವಡಿಸಿಕೊಂಡು ಜಾಬ್ ಸಂಖ್ಯೆ ನೀಡಲು ತೆರಿಗೆ & ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆ ಅವಶ್ಯವಿರುವುದರಿಂದ ಸಮಿತಿ ಮುಂದೆ ಟಿಪ್ಪಣಿ ಮಂಡಿಸಲು ಮಾನ್ಯ ಆಯುಕ್ತರು ಆದೇಶಿಸಿರುತ್ತಾರೆ.

ಈ ಎಲ್ಲಾ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ 2016-17ನೇ ಪರಿಷ್ಕೃತ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ-0055 ಅಡಿಯಲ್ಲಿ ಕೊರತೆ ಅನುದಾನ ರೂ. 3.10 ಲಕ್ಷಗಳನ್ನು ಅಳವಡಿಸಿಕೊಳ್ಳಲು ತೆರಿಗೆ & ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಪ್ರಕರಣವು ಘನ ನ್ಯಾಯಾಲಯದಲ್ಲಿ ಬಾಕಿ ಇರುವ ಬಗ್ಗೆ ಪರಿಶೀಲಿಸಿ, ಸೂಕ್ತ ಸ್ಪಷ್ಟೀಕರಣದೊಂದಿಗೆ ಸಮಿತಿಯ ಮುಂದೆ ಮರುಮಂಡಿಸಲು ಕಡತವನ್ನು ಹಿಂತಿರುಗಿಸುವುದೆಂದು ಸಮಿತಿಯು ತೀರ್ಮಾನಿಸಿತು.**

***36]. ವಿಷಯದ ಸಂಖ್ಯೆ: ತೆಆಸ್ಥಾಸ/33/2017–18***

ಆಯುಕ್ತರ ದಿನಾಂಕ: 06–01–2017ರ ಟಿಪ್ಪಣಿಯಲ್ಲಿ ಪ್ರಸ್ತಾಪಸಿರುವಂತೆ, ಅಧ್ಯಕ್ಷರು ಜ್ಯುಡಿಷಿಯಲ್ ಲೇಔಟ್ ಕ್ಲಬ್(ರಿ) ಬೆಂಗಳೂರು ಸಿ.ಎ,ಸೈಟ್, 10ನೇ ಮುಖ್ಯ ರಸ್ತೆ, 8ನೇ ಕ್ರಾಸ್, ಜ್ಯುಡಿಷಿಯಲ್ ಲೇಔಟ್, ಜಿ.ಕೆ.ವಿ.ಕೆ ಪೋಸ್ಟ್, ಬೆಂಗಳೂರು–65 ರವರು ಮನವಿ ಪತ್ರವನ್ನು ಸಲ್ಲಿಸಿದ್ದು, ವಾರ್ಡ್ ಸಂಖ್ಯೆ:4 ರ ವ್ಯಾಪ್ತಿಯಲ್ಲಿ ಬರುವ ನ್ಯಾಯಾಂಗ ಬಡಾವಣೆಯ ನಾಗರೀಕರ ಅನುಕೂಲಕ್ಕಾಗಿ ನ್ಯಾಯಾಂಗ ಬಡಾವಣೆಯಲ್ಲಿರುವ ಸಿ.ಎ ಸೈಟ್ ಸ್ವತ್ತಿನಲ್ಲಿ 1 ಎಕರೆ ಜಮೀನನ್ನು ಜ್ಯುಡಿಷಿಯಲ್ ಲೇಔಟ್ ಕ್ಲಬ್(ರಿ), ಬೆಂಗಳೂರು ರವರಿಗೆ ಮಂಜೂರು ಮಾಡಲು ಕೋರಿರುತ್ತಾರೆ.

ಸಂಬಂಧಪಟ್ಟ ಕಂದಾಯ ಇಲಾಖೆಯ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸಿದ್ದು, ನ್ಯಾಯಾಂಗ ಇಲಾಖೆಯ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದಿಂದ ನಿರ್ಮಿಸಿರುವ ಬಡಾವಣೆಯಲ್ಲಿರುವ ಸಿ.ಎ ಮತ್ತು ಪಾರ್ಕ್ ಸ್ವತ್ತಿನ ಜಾಗವನ್ನು ಬೃ.ಬೆಂ.ಮ.ಪಾಲಿಕೆಗೆ ಹಸ್ತಾಂತರಿಸಲಾಗುತ್ತದೆ. ಸಿ.ಎ ಮತ್ತು ಪಾರ್ಕ್ ಸ್ವತ್ತನ್ನು ಉಚ್ಚನ್ಯಾಯಾಲಯ ರಿಟ್ ಪಿಟಿಷನ್ ಸಂಖ್ಯೆ: 40994/2002ಕ್ಕೆ ಸಂಬಂಧಿಸಿದಂತೆ ನೀಡಿರುವ ಆದೇಶದಲ್ಲಿ ಸಿ.ಎ. ಮತ್ತು ಉದ್ಯಾನವನದ ನಿವೇಶನಗಳಲ್ಲಿ ತಾಂತ್ರಿಕ ಇಲಾಖೆಯಿಂದ ಭವಿಷ್ಯದಲ್ಲಿ ಕೈಗೊಳ್ಳಬಹುದಾದ ಅಭಿವೃದ್ಧಿ ಕ್ರಿಯಾ ಯೋಜನೆ ವರದಿಯಲ್ಲಿ ಸಿ.ಎ.ನಿವೇಶನದ ಸ್ವತ್ತಿನಲ್ಲಿಯೇ ಆಟದ ಮೈದಾನಕ್ಕಾಗಿ ಮತ್ತು ಉಳಿಕೆ ಸ್ವತ್ತನ್ನು ಜ್ಯುಡಿಷಿಯಲ್ ಲೇಔಟ್ ಕ್ಲಬ್‌ಗೆ ಸ್ಥಳಾವಕಾಶ ಕಲ್ಪಿಸಬಹುದಾಗಿರುತ್ತದೆ ಎಂದು ಉಲ್ಲೇಖಿಸಿರುತ್ತದೆ ಎಂದು ಜಂಟಿ ಆಯುಕ್ತರು(ಯಲಹಂಕ) ವಲಯ ರವರು ವರದಿಸಿರುತ್ತಾರೆ.

ಆದರೆ, ಸರ್ಕಾರದ ಆದೇಶ ಸಂಖ್ಯೆ:ನಅಇ 129 ಟಿಎಂಡಿ 2002, ಬೆಂಗಳೂರು ದಿನಾಂಕ: 02–06–2003ರ ಸುತ್ತೋಲೆ ಷರತ್ತಿನ ಕ್ರಮ ಸಂಖ್ಯೆ VI ರನ್ವಯ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನುಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದಲ್ಲಿ ಅಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮೂಲಕವೇ ನೀಡುವುದು ಎಂದಿದೆ. ಈ ಹಿನ್ನೆಲೆಯಲ್ಲಿ ಗುತ್ತಿಗೆ ನೀಡಲು ಅವಕಾಶವಿರುವುದಿಲ್ಲ.

ಪ್ರಸ್ತಾಪಿತ ಸ್ವತ್ತಿನ ಅಳತೆ 1 ಎಕರೆ 1089x40=43560 ಚದರ ಅಡಿಗಳಾಗಿದ್ದು, 4048.327 ಚದರ ಮೀಟರ್‌ಗಳಾಗಿದ್ದು, ದಿನಾಂಕ:01–04–2016ರ ಸರ್ಕಾರದ ಮಾರ್ಗಸೂಚಿ ದರದಂತೆ ಚದರ ಮೀಟರ್ 1ಕ್ಕೆ 54000/–ರೂ.ಗಳು ವಾಣಿಜ್ಯಕ್ಕೆ ಶೇ: 40% ರಷ್ಟು ಸೇರಿಸಿದಲ್ಲಿ, 21,600/–ರೂ.ಗಳು ಒಟ್ಟು ಮೊತ್ತ ಚದರ ಮೀಟರ್ 1ಕ್ಕೆ 75600/–ರೂ.ಗಳಾಗುತ್ತದೆ. 4048.32 ಚದರ ಮೀಟರ್‌ಗಳಿಗೆ ಸ್ವತ್ತಿನ ಮಾರುಕಟ್ಟೆ ಮೌಲ್ಯ 30,60,52,992/–ರೂ.ಗಳಾಗುತ್ತದೆ. ಶೇ: 10% ರಂತೆ ಪರಿಗಣಿಸಿದಲ್ಲಿ ವಾರ್ಷಿಕ 3,06,05,299/–ರೂ.ಗಳು, ಮಾಸಿಕ 25,50,441.58/–(25,50,442/–) ರೂ.ಗಳಾಗುತ್ತದೆ.

ಭೂಮಾಪಕರು ಸದರಿ ಸ್ವತ್ತು ಖಾಲಿ ಸ್ವತ್ತೆಂದು ವರದಿ ನೀಡಿದ್ದು, ಆಸ್ತಿ ವಹಿಯಲ್ಲೂ ದಾಖಲಾಗಿರುತ್ತದೆ. ನ್ಯಾಯಾಂಗ ಇಲಾಖೆಯ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ರವರು ಪಾಲಿಕೆಗೆ ಈ ಸ್ವತ್ತನ್ನು ರಿಲಿಕ್ವಿಶ್‌ಡೀಡ್ ಮಾಡಿರುತ್ತಾರೆ.

ಸದರಿ ಸ್ವತ್ತು ಕರ್ನಾಟಕ ರಾಜ್ಯ ಪತ್ರದಲ್ಲಿ ಅಧಿಸೂಚಿಸಲಾಗಿರುವುದಿಲ್ಲ, ಸದರಿ ಸ್ವತ್ತು 2 ಎಕರೆ 23 ಗುಂಟೆ ಇದ್ದು, ಸದರಿ ಸ್ವತ್ತಿಗೆ ಚೈನ್ ಲಿಂಕ್ ಅಳವಡಿಸಲಾಗಿರುತ್ತದೆ.

ಕರ್ನಾಟಕ ಮುನ್ಸಿಪಲ್ ಕಾಯ್ದೆ 1976 ರ ಕಲಂ 176 ಹಾಗೂ 176 ರ (6) ಹಾಗೂ (ಬಿ) ಪ್ರಕಾರ ಸದರಿ ಸ್ವತ್ತನ್ನು ಜ್ಯುಡಿಷಿಯಲ್ ಲೇಔಟ್ ಕ್ಲಬ್ (ರಿ), ಬೆಂಗಳೂರು ರವರಿಗೆ ನ್ಯಾಯಾಂಗ ಬಡಾವಣೆಯ

ನಾಗರೀಕ ಅನುಕೂಲಕ್ಕಾಗಿ ನ್ಯಾಯಾಂಗ ಬಡಾವಣೆಯಲ್ಲಿರುವ ಸಿ.ಎ ಸೈಟ್ ಸ್ವತ್ತಿನಲ್ಲಿ 1 ಎಕರೆ ಜಮೀನನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃ.ಬೆಂ.ಮ.ಪಾಲಿಕೆಯ ಮುಖಾಂತರ ಸರ್ಕಾರದ ಅನುಮೋದನೆ ಪಡೆಯಬೇಕಾಗಿರುವುದರಿಂದ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಸಭೆ ಮುಂದೆ ಮಂಡಿಸಿರುವ **ದಿನಾಂಕ: 06-01-2017ರ ಮಾನ್ಯ ಆಯುಕ್ತರ ಟಿಪ್ಪಣಿಯ ಕುರಿತು ಚರ್ಚಿಸಲಾಗಿ ನ್ಯಾಯಾಂಗ ಬಡಾವಣೆಯ ನಾಗರೀಕರ ಅನುಕೂಲಕ್ಕಾಗಿ ಸಿ.ಎ.ಸ್ವತ್ತಿನಲ್ಲಿ 1ಎಕರೆ ಜಮೀನನ್ನು ಜ್ಯೂಡಿಷಿಯಲ್ ಲೇಔಟ್ ಕ್ಲಬ್ (ರಿ) ರವರಿಗೆ ಗುತ್ತಿಗೆ ನೀಡಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ದಿನಾಂಕ12.05.2017ರ ಸಭೆಯ ನಿರ್ಣಯ.**

**-ಮುಂದೂಡಿದೆ-**

## ***37]. ವಿಷಯದ ಸಂಖ್ಯೆ: ತೆಆಸ್ಥಾಸ/34/2017-18***

ಆಯುಕ್ತರ ದಿನಾಂಕ: 28-10-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶ್ರೀ.ಪಿ.ಎ.ಉಪೇಂದ್ರ ರವರು ತಮ್ಮ ತಂದೆಯವರ ಹೆಸರಿಗೆ ಈ ಹಿಂದೆ ಹಂಚಿಕೆಯಾಗಿದ್ದ ಸ್ವತ್ತಿಗೆ ನಗರ ಪಾಲಿಕೆಯಿಂದ ಹಕ್ಕುಪತ್ರ/ಟೈಟಲ್ ಡೀಡ್/ಕ್ರಯಪತ್ರವನ್ನು ನೀಡಲು ಕೋರಿರುತ್ತಾರೆ. ಸ್ವತ್ತಿನ ಸಂಖ್ಯೆ ಹಳೆಯದು 89, ಹೊಸದು 1, 6ನೇ ಅಡ್ಡರಸ್ತೆ ನರಸಿಂಹರಾಜ ಕಾಲೋನಿ ವಾರ್ಡ್-154ರ ಸದರಿ ಸ್ವತ್ತು ಕಛೇರಿಯ ಕಂದಾಯ ದಾಖಲಾತಿ ಪುಸ್ತಕದ ಆಧಾರ ಶ್ರೀ.ಪಿ.ಎ.ಉಪೇಂದ್ರ ರವರ ಹೆಸರಿನಲ್ಲಿದ್ದು, ಇದರ ಹಾಲಿ ಕಂದಾಯ ವಾರ್ಷಿಕ ಮೊತ್ತ ರೂ.6355/- ಗಳ ಮೇಲಿದ್ದು, 2015-16ನೇ ಸಾಲಿಗೆ ಕಂದಾಯ ಪಾವತಿಯಾಗಿರುತ್ತದೆ.

ಸ್ವತ್ತಿನ ಮೂಲ ಮಾಲೀಕರಾದ ದಿ॥ ಅಣ್ಣೋಜಿರಾವ್ ರವರು ಕಾರಣಾಂತರಗಳಿಂದ ಹಕ್ಕು ನಿರೂಪಣಾ ಪತ್ರ (titledeed) ಪಡೆಯಲು ಸಾಧ್ಯವಾಗಲಿಲ್ಲವೆಂದು ಹಾಲಿ ಖಾತೆದಾರರು ಶ್ರೀ.ಪಿ.ಎ.ಉಪೇಂದ್ರ ರವರಿಗೆ ಮೂಲತ: ಮೈಸೂರು ನಾನ್ ಗೆಜೆಟೆಡ್ ಅಫೀಸರ್ಸ್ ಅಸೋಸಿಯೇಷನ್ ರವರ ವತಿಯಿಂದ ದಿ:16-02-1938 ರಲ್ಲಿ ಹಂಚಿಕೆಯಾಗಿದ್ದು, ವಿಸ್ತೀರ್ಣ 40x60=2400 ಚದರಡಿಗಳಾಗಿರುತ್ತದೆ. ಸಂಖ್ಯೆ:ಬಿಜಿ 1247/1937-38 ದಿನಾಂಕ:11-05-1938 ರಂದು City Municipal of the Revenue Officer ರವರು Endorsement ನೀಡಿ ನಿವೇಶನದ ಸಂಖ್ಯೆ:89 ನ್ನು ಪಿ.ಅಣ್ಣೋಜಿರಾವ್ ರವರಿಗೆ Poor-house Block ಬಸವನಗುಡಿ ಇಲ್ಲಿ ಹೊಸದಾಗಿ ನಿರ್ಮಿಸಿರುವ ಬಡಾವಣೆಯಲ್ಲಿ ಹಂಚಿಕೆ ಆಗಿದೆ ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ರೂ.250/- ಗಳನ್ನು ಪಾವತಿಸಬೇಕಾಗಿದ್ದು, ಕಟ್ಟಡ ನಿರ್ಮಾಣಗೊಂಡ ನಂತರ ಹಕ್ಕುಪತ್ರವನ್ನು ನೀಡುವುದಾಗಿ ತಿಳಿಸಲಾಗಿದ್ದು, ಸದರಿ ಅವಧಿಯಲ್ಲಿಯೇ ರೂ.250/- ಗಳು ಸಿಟಿ ಮುನಿಸಿಪಲ್ ಕಾರ್ಪೋರೇಷನ್ ಆಫೀಸಿಗೆ ಪಾವತಿಯಾಗಿರುತ್ತದೆ. (ಹಿಂಬರಹದ ಸಂಖ್ಯೆ:1274/1937-38, ದಿನಾಂಕ:11-05-1938)

Office of the Revenue officer City Municipality Bangalore Endorsement No 36/927/38-39 ದಿನಾಂಕ: 23-01-1939 ರಲ್ಲಿ ಶ್ರೀ.ಪಿ.ಅಣ್ಣೋಜಿರಾವ್ ರವರಿಗೆ ದಿನಾಂಕ:05-01-1939 ನೀಡಿರುವ ಮನವಿ ಪತ್ರಕ್ಕೆ ಸಂಬಂಧಿಸಿದಂತೆ ಇದ್ದು ನಿವೇಶನ ಸಂಖ್ಯೆ:89 (100 ಹೊಸ) ಕಂದಾಯ ನಿಗಧಿಪಡಿಸಿ ಖಾತೆ ನೊಂದಾವಣಿ ಮಾಡಿರುವುದಾಗಿ ತಿಳಿಸಿರುತ್ತಾರೆ. ತರುವಾಯ ಪಿ.ಅಣ್ಣೋಜಿರಾವ್ ನಿಧನದ ನಂತರ ಅವರ ಪತ್ನಿ ಶ್ರೀಮತಿ.ನಾಗುಬಾಯಿ ಸಹ ಮರಣ ಹೊಂದಿದ್ದು, ಸದರಿಯವರುಗಳ ಮರಣ ಸಮರ್ಥನಾ ಪತ್ರಗಳ ಆಧಾರದ ಮೇಲೆ ಅವರ ಮಗನಾದ ಶ್ರೀ.ಪಿ.ಎ.ಉಪೇಂದ್ರ ರವರ ಹೆಸರಿಗೆ ಖಾತೆ ವರ್ಗಾಯಿಸಲಾಗಿರುತ್ತದೆ.

Titledeed ನ್ನು ಪರಿಶೀಲನೆ ಮಾಡಲಾಗಿ ಅಂದಿನ Commissioner Corporation of the City of Bangalore ದಿನಾಂಕ:20-07-1962 ರಲ್ಲಿ ಪ್ರಸ್ತಾಪಿತ ಸ್ವತ್ತಿನ ಪಕ್ಕದ ನಿವೇಶನ ಸಂಖ್ಯೆ:85ಕ್ಕೆ (ಖಿಟಿಚಿಜಿಜಿಜ) ನ್ನು ಶ್ರೀ.ಡಿ.ಸೂರ್ಯನಾರಾಯಣ ಅಯ್ಯರ್ ರವರು ನೀಡಿರುವ ಕಡತದಲ್ಲಿ ಲಗತ್ತಿಸಿರುವುದು ಕಂಡು ಬರುತ್ತದೆಂದು ಪ್ರಸ್ತಾಪಿತ ಸ್ವತ್ತು ಕಡತದಲ್ಲಿ ಲಭ್ಯವಿರುವ ರವರಿಗೆ ನೀಡಿದ್ದು, ದಾಖಲಾತಿಗಳು ಹಾಗೂ ನಗರ ಮಾಪನ ದಾಖಲಾತಿಗಳ ಆಧಾರ ಸ್ಥಳೀಯ ನಗರ ಮಾಪನಗಳ (ಎಲ್.ಎ)20, ನರಸಿಂಹರಾಜ ಕಾಲೋನಿ ವ್ಯಾಪ್ತಿಯಲ್ಲಿನ ಸಿ.ಐ.3 ನಂ:153 ಆಗಿರುತ್ತದೆ.

ನಗರ ಮಾಪನ ದಾಖಲೆಯಾದ ಪಿ.ಆರ್.ಕಾರ್ಡ್ ಹಾಗೂ ವಿವರಣೆಯ ದಾಖಲೆಯಂತೆ ಶ್ರೀ.ಪಿ.ಅಣ್ಣೋಜಿರಾವ್ ಆಸ್ತಿದಾರದೆಂದು ದಾಖಲಾತಿಯಾಗಿರುತ್ತದೆ. ಕಟ್ಟಡ ನಿವೇಶನಗಳು ಹಿಡುವಳಿಯ ಪ್ರಮಾಣಪತ್ರದಂತೆ ಕರ್ನಾಟಕ ಸರ್ಕಾರ 1964ರ ಭೂಕಂದಾಯ ಅಧಿನಿಯಮದ ಉಪ ನಿಬಂಧ ಮೇರೆಗೆ ಬೆಂಗಳೂರು ನಗರ ಸಭೆ ಎಲ್ಲೆಗಳ ಭೂಮಿ ಸರ್ವೆ ಮಾಡಲು ಹಾಗೂ ಸಂಬಂಧಿಸಿದ ಅವಶ್ಯ ವಿಚಾರಣೆಯನ್ನು ನಡೆಸಲು ಆದೇಶಿಸಿರುವಂತೆ ಭೂದಾಖಲಾತಿಗಳ ಸಹಾಯಕ ನಿರ್ದೇಶಕರು ನಗರ ಮಾಪನ ತಂಡ–3 (ಎಲ್.ಎ–20) ನರಸಿಂಹರಾಜ ಕಾಲೋನಿ (ಸಿ.ಟಿ.ಎಸ್) ನಂ:153 ಎಂದು ಗುರುತಿಸಿ ಕಟ್ಟಡ /ನಿವೇಶನವನ್ನು ಹೊಂದಿರುವ ಸ್ಥಳ ಆಕಾರ ಮತ್ತು ಅಳತೆ ಪ್ರಕಾರ ಸರ್ವೆ ಮಾಡಿ ನಕ್ಷೆ ತಯಾರಿಸಿ ಇದರ ಒಟ್ಟು ವಿಸ್ತೀರ್ಣ 215 ಚ.ಮೀ (40x60) ಶ್ರೀ.ಪಿ.ಅಣ್ಣೋಜಿರಾವ್ ರವರ ಹೆಸರಿಗೆ ಪ್ರಮಾಣಪತ್ರವನ್ನು ನೀಡಿರುತ್ತಾರೆ.

ಶ್ರೀ.ಕೆ.ನಾಗರಾಜು, ರವರು ದಿನಾಂಕ: 27–06–2015 ರಂದು ಆಯುಕ್ತ ರವರಿಗೆ ಪತ್ರ ಬರೆದು ಶ್ರೀ.ಪಿ.ಎ.ಉಪೇಂದ್ರ ರವರ ಮನವಿಯನ್ನು ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕೈಗೊಳ್ಳುವಂತೆ ಕೋರಿರುತ್ತಾರೆ.

ನಿವೇಶನದ ಸಂಖ್ಯೆ:85ಕ್ಕೆ ಶ್ರೀ.ಡಿ.ಸೂರ್ಯನಾರಾಯಣ ಅಯ್ಯರ್ ರವರಿಗೆ (Titledeed) ನೀಡಿರುವಂತೆ ಶ್ರೀ.ಪಿ.ಎ.ಉಪೇಂದ್ರ ರವರಿಗೂ ಇದು ಅನ್ವಯಿಸುವುದರಿಂದ ಸ್ವತ್ತಿನ ಸಂಖ್ಯೆ:89/1 6ನೇ ಅಡ್ಡರಸ್ತೆ, ಎನ್.ಆರ್.ಕಾಲೋನಿ ಇದರ ಅಳತೆ 40x60 ಅಡಿಗಳ ಸ್ವತ್ತಿಗೆ (titledeed) ನೀಡಬಹುದಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಶ್ರೀ.ಪಿ.ಎ.ಉಪೇಂದ್ರ ರವರಿಗೆ ನಗರ ಪಾಲಿಕೆಯಿಂದ ಹಕ್ಕುಪತ್ರ/ಟೈಟಲ್ ಡೀಡ್ ಕ್ರಯಪತ್ರವನ್ನು ನೀಡಲು ಅನುಮತಿ ನೀಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆ ಮುಂದೆ ಮಂಡಿಸಿರುವ **ದಿನಾಂಕ: 28–10–2016ರ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಒಪ್ಪಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 12.05.2017ರ ಸಭೆಯ ನಿರ್ಣಯ.**

**–ಮುಂದೂಡಿದೆ–**

## *381. ವಿಷಯದ ಸಂಖ್ಯೆ: ತೆಆಸ್ಥಾಸ/35/2017–18*

ಆಯುಕ್ತರ ದಿನಾಂಕ: 03–02–2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,

ವಾರ್ಡ್ನಂ:79ರವ್ಯಾಪ್ತಿಯಲ್ಲಿರುವ ಎಂ.ಎಂ.ರಸ್ತೆ, ಕಾಕ್ಸ್‌ಟೌನ್‌ನಲ್ಲಿರುವ ಹೆರಿಗೆ ಆಸ್ಪತ್ರೆ ಆವರಣಕ್ಕೆ ಹೊಂದಿಕೊಂಡಿರುವ ಪಾಲಿಕೆಯ ಜಾಗದಲ್ಲಿ 10x15 ಅಡಿಗಳ ಜಾಗವನ್ನು ನಂದಿನಿ ಹಾಲಿನ ಕೇಂದ್ರ ತೆರೆಯಲು ಕೋರಿರುತ್ತಾರೆ. ಶ್ರೀ.ಎಂ.ಹರೀಶ್‌ಕುಮಾರ್ ಎಂಬುವವರು ಮನವಿಯನ್ನು ಪರಿಶೀಲಿಸಿದ ತರುವಾಯ ಎಂ.ಎಂ.ರಸ್ತೆ, ಕಾಕ್ಸ್‌ಟೌನ್ ರಸ್ತೆಯಲ್ಲಿರುವ ಪಾಲಿಕೆಯ ಸ್ವತ್ತಾಗಿದ್ದು, ಪಾಲಿಕೆಯ ಆಡಳಿತ ನಿರ್ವಹಣೆಯನ್ನು ನಗರ ಪಾಲಿಕೆಯ ಆಸ್ತಿಯಾಗಿರುತ್ತದೆಯೆಂದು ಕಂದಾಯ ಪರಿವೀಕ್ಷಕರು ವರದಿಸಿರುತ್ತಾರೆ.

ಪ್ರಸ್ತಾಪಿತ ಆಸ್ತಿಯ ಬಗ್ಗೆ ಅರ್ಜಿದಾರರಾದ ಶ್ರೀ.ಎಂ.ಹರೀಶ್‌ಕುಮಾರ್ ಎಂಬುವವರು ಮನವಿ ಪತ್ರವನ್ನು ಸಲ್ಲಿಸಿ 10x15 ಅಡಿಗಳ ಜಾಗವನ್ನು ನಂದಿನಿ ಮಳಿಗೆ ಸ್ಥಾಪಿಸಲು ಅನುಮತಿಯನ್ನು ನೀಡಲು ಕೋರಿರುತ್ತಾರೆ. ಈ ಬಗ್ಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಸಿ.ವಿ.ರಾಮನ್‌ನಗರ) ವಲಯ ಮತ್ತು ಸಂಬಂಧಿಸಿದ ಇತರೆ ಇಲಾಖೆಯವರು ಪಾಲಿಕೆಯ ಸ್ವತ್ತನ್ನು ಗುತ್ತಿಗೆಗೆ ನೀಡಬಹುದಾಗಿರುತ್ತದೆ ಎಂಬುದಾಗಿ ಟಿಪ್ಪಣಿಯಲ್ಲಿ ಅಭಿಪ್ರಾಯ ನೀಡಿರುತ್ತಾರೆ. ಆದುದರಿಂದ, ಈ ಮೂಲತ: ಕಾಕ್ಸ್‌ಟೌನ್‌ನಲ್ಲಿರುವ ಎಂ.ಎಂ.ರಸ್ತೆಯ ಹೆರಿಗೆ ಆಸ್ಪತ್ರೆಯ ಪಾಲಿಕೆಯ ಸ್ವತ್ತಾಗಿರುತ್ತದೆ. ವಾರ್ಡ್ ನಂ:79, ಸಿ.ವಿ.ರಾಮನ್‌ನಗರ ವಲಯ ವ್ಯಾಪ್ತಿಗೆ ಒಳಪಟ್ಟ ಜಾಗವಾಗಿದ್ದು, ಸದರಿ ಬಡಾವಣೆ ನಕ್ಷೆಯಂತೆ ಪಾರ್ಕ್‌ಗೆ ಮೀಸಲಿರಿಸಿರುವ ಜಾಗದ ಪೈಕಿ ಪ್ರದೇಶವಾಗಿರುತ್ತದೆ ಎಂದು ನಕ್ಷೆಯಲ್ಲಿ ಗುರ್ತಿಸಲಾಗಿರುತ್ತದೆ ಹಾಗೂ ಸದರಿ ಜಾಗವು ಪಾಲಿಕೆಗೆ ಅವಶ್ಯಕತೆ ಇರುವುದಿಲ್ಲವೆಂಬುದಾಗಿ ಸಹ ವರದಿ ಸಲ್ಲಿಸಿರುತ್ತಾರೆ.

ಪಾಲಿಕೆಯ ಯಾವುದೇ ಸ್ವತ್ತನ್ನು ಖಾಸಗಿಯವರಿಗೆ ನೀಡುವಾಗ ಈ ಕೆಳಕಂಡ ಕಾಯ್ದೆ ಅನ್ವಯ ಕ್ರಮವಹಿಸಬೇಕಾಗಿರುತ್ತದೆ.

1. ಕರ್ನಾಟಕ ಮುನಿಸಿಪಲ್ ಕಾಯ್ದೆ 1976ರ ಕಲಂ 176 ಹಾಗೂ 176ರ (6) ಹಾಗೂ (ಬಿ) 2 ಪ್ರಕಾರ 1 ವರ್ಷಕ್ಕೆ ಗುತ್ತಿಗೆ ನೀಡುವ ಅಧಿಕಾರ ಆಯುಕ್ತರಿಗೆ, 3 ವರ್ಷಗಳವರೆಗೂ ಗುತ್ತಿಗೆ ನೀಡುವ ಅಧಿಕಾರವು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, 5 ವರ್ಷದವರೆಗೂ ಗುತ್ತಿಗೆ ನೀಡುವ ಅಧಿಕಾರವು ಮಹಾನಗರ ಪಾಲಿಕೆಯ ಸಭೆಗೆ ಇರುತ್ತದೆ. ಗುತ್ತಿಗೆ ಅವಧಿಯು 5 ವರ್ಷಗಳಿಗಿಂತ ಹೆಚ್ಚಿಗೆ ಇದ್ದಲ್ಲಿ ಘನ ಸರ್ಕಾರಕ್ಕೆ ಅಧಿಕಾರವಿರುತ್ತದೆ.
2. **ಘನ ಸರ್ಕಾರವು ಆದೇಶ ಸಂಖ್ಯೆ: ನಅಇ 129 ಟಿ.ಎಂ.ಡಿ 2002 ದಿನಾಂಕ: 02-06-2003 ರಲ್ಲಿ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನುಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ /ಕ್ರಯ ಆಧಾರದ ಮೇಲೆ ನೀಡಿದಲ್ಲಿ ಅಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮುಖಾಂತರವೇ ನೀಡುವುದು ಎಂದು ಆದೇಶಿಸಿರುತ್ತದೆ.**
3. ಪಾಲಿಕೆಯ ಕೆ.ಎಂ.ಸಿ.ಕಾಯ್ದೆ 1976 ರ ನಿಯಮ 176 (6) ರಂತೆ Not with standing anything contained in this Act —

No movable property exceeding such sum in value as may be prescribed shall be sold otherwise than by public auction;

No property whether movable or immovable of whatever value shall be transferred free of cost or for an upset price;

no lease of any immovable property exceeding five years shall be granted;

no immovable property shall be disposed of by sale or by other transfer;

Except with the previous sanction of the Government. ಎಂದಿದ್ದು, ಈ ಬಗ್ಗೆ ಸೂಕ್ತ ಕ್ರಮಕ್ಕೆ ಅವಗಾಹನೆಗಾಗಿ ಸಲ್ಲಿಸಿದೆ.

ಪ್ರಸ್ತಾಪಿತ ಆಸ್ತಿಯ ಸ್ವತ್ತಿನ ಅಳತೆ 10x15ಅಡಿ =150 ಚದರಡಿ /10.76=13.94 ಚದರ ಮೀಟರ್‌ಗಳಾಗಿದ್ದು, ಮಾರುಕಟ್ಟೆ ಮೌಲ್ಯ ದಿನಾಂಕ:01-04-2016 ರಂತೆ ಚದರಡಿ ಒಂದಕ್ಕೆ 5288/- ರೂಗಳಾಗಿದ್ದು, ವಾಣಿಜ್ಯಕ್ಕೆ ಶೇ40% ರಷ್ಟು ರೂ.2115/- ಒಟ್ಟಾರೆ ಚದರಡಿ ಒಂದಕ್ಕೆ ರೂ.7403/- ಗಳಾಗಿರುತ್ತದೆ. ಸ್ವತ್ತಿನ ಮೌಲ್ಯ 7403x150= 11,10,450/- ರೂಗಳಾಗುತ್ತದೆ. ಶೇ10% ರಂತೆ ಪರಿಗಣಿಸಿದ್ದಲ್ಲಿ ವಾರ್ಷಿಕ ರೂ. 1,11,045/- ಮಾಸಿಕ 9253/- ರೂಗಳಾಗುತ್ತದೆ.

ಈ ಹಿನ್ನೆಲೆಯಲ್ಲಿ ಶ್ರೀ.ಎಂ.ಹರೀಶ್‌ಕುಮಾರ್ ರವರಿಗೆ ನಂದಿನಿ ಮಳಿಗೆ ಸ್ಥಾಪನೆಗೆ ಜಾಗವನ್ನು ಗುತ್ತಿಗೆ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ **ದಿನಾಂಕ: 03-02-2017ರ ಮಾನ್ಯ ಆಯುಕ್ತರ ಟಿಪ್ಪಣಿಯ ಕುರಿತು ಚರ್ಚಿಸಲಾಗಿ ಶ್ರೀ. ಎಂ.ಹರೀಶ್‌ಕುಮಾರ ರವರಿಗೆ 5 ವರ್ಷಗಳ ಅವಧಿಗೆ ಗುತ್ತಿಗೆ ನೀಡಲು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 12.05.2017ರ ಸಭೆಯ ನಿರ್ಣಯ.**

**ನಿರ್ಣಯ: ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, ನಿಯಮಾನುಸಾರ ಪ್ರಸ್ತುತ ಮಾರುಕಟ್ಟೆ ದರಗಳನ್ವಯ ಪರಿಷ್ಕರಿಸಿ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## ***39]. ವಿಷಯದ ಸಂಖ್ಯೆಃ ತೆಆಸ್ಥಾಸ/36/2017–18***

ಆಯುಕ್ತರ ದಿನಾಂಕ: 02–03–2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಮೆ॥ ಕೀರ್ತಿ ಕ್ರಿಯೇಷನ್ಸ್ ಸಂಸ್ಥೆಯವರು ಟಿ.ಸಿದ್ದಲಿಂಗಯ್ಯ ವೃತ್ತದಲ್ಲಿ ಕಸ್ತೂರಬಾ ರಸ್ತೆಯಲ್ಲಿ ನಿರ್ಮಿಸಿರುವ ಶಾಶ್ವತ ಸ್ವಾಗತ ಸಂದೇಶದ ಮಂಜುಳ ಮಂಟಪದ ಗುತ್ತಿಗೆ ಅವಧಿಯನ್ನು ನವೀಕರಿಸಲು ನೀಡಿದ ಮನವಿಯನ್ನು ಕೆಳಕಂಡ ಅಂಶಗಳನ್ವಯ ಪರಿಗಣಿಸಲಾಯಿತು.

1. ಮಾನ್ಯ ಆಯುಕ್ತರವರ ಆದೇಶ ಸಂಖ್ಯೆ:ಎಟಿ(2)ಪಿಆರ್:62/94–95, ದಿನಾಂಕ:25.04.1995 ರಂತೆ ಶಾಶ್ವತ ಸುಸ್ವಾಗತ ಸಂದೇಶ ಮಂಟಪ ನಿರ್ಮಿಸಲು ಪರವಾನಿಗಿ ಪಡೆದು ಕಲಾ ಆಯೋಗ ಅನುಮೋದನೆ ನೀಡಿರುವ ವಿನ್ಯಾಸದಲ್ಲಿ ಟಿ.ಸಿದ್ದಲಿಂಗಯ್ಯ ವೃತ್ತ, ಕಸ್ತೂರಬಾ ರಸ್ತೆ ಬೆಂಗಳೂರು ಈ ಸ್ಥಳದಲ್ಲಿ ಮಂಜುಳ ಮಂಟಪವನ್ನು ನಿರ್ಮಿಸಿರುತ್ತಾರೆ.
2. ಆನಂತರ ಮಾನ್ಯ ಆಯುಕ್ತರವರ ಆದೇಶ ಸಂಖ್ಯೆ:ಎಟಿ(2)ಪಿಆರ್:62/94–95, ದಿನಾಂಕ: 30.12.1996 ರಂತೆ ಸಾರ್ವಜನಿಕರ ಹಿತಾಸಕ್ತಿ ಸಂದೇಶಗಳು, ಆರೋಗ್ಯದ ಮುನ್ನುಡಿಗಳು, ಕ್ರೀಡೆಗಳು ಮತ್ತು ಜನ ಜಾಗೃತಿ ಕಾರ್ಯಕ್ರಮಗಳು, ಸರ್ಕಾರಿ/ಪಾಲಿಕೆ ಕಾರ್ಯಕ್ರಮಗಳು, ಮಾನವೀಯತೆಯನ್ನು ಬಿಂಬಿಸುವ ಹಿತೋಪದೇಶಗಳನ್ನು 24*9 ಚ.ಅಡಿ ಅಳತೆಯಲ್ಲಿ ಹಾಗೂ ಸದರಿ ಕಾರ್ಯಕ್ರಮಗಳನ್ನು ಪ್ರಾಯೋಜಿಕ ಸಂಸ್ಥೆಗಳ ಸಹಕಾರದಿಂದ ನಡೆಸಲು ಮತ್ತು 24x3 ಅಳತೆಗೆ ಮಿತಿಯೊಳಪಟ್ಟು ಜಾಹೀರಾತು ಪ್ರದರ್ಶಿಸಲು ದಿನಾಂಕ: 10.09.2009ರ ಆಯುಕ್ತರ ಅನುಮೋದನೆಯಂತೆ ದಿನಾಂಕ: 30.11.2008 ರಿಂದ 29.11.2013ರ ವರೆಗೆ 05 ವರ್ಷಗಳ ಅವಧಿಗೆ ಅತ್ಯಲ್ಪ (ನಾಮಿನಲ್) ಶುಲ್ಕ ದಿನಾಂಕ: 13.09.1994ರ ಸುತ್ತೋಲೆಯಲ್ಲಿ ನಿಗಧಿಪಡಿಸಿರುವಂತೆ ವಾರ್ಷಿಕ ರೂ.21,000/– ನೆಲ ಬಾಡಿಗೆ ಮೊತ್ತ ನಿಗಧಿಪಡಿಸಿ ಅನುಮತಿ ನೀಡಲಾಗಿರುತ್ತದೆ.
3. ನಂತರದಲ್ಲಿ ಈ ಹಿಂದೆ ನಿಗಧಿಪಡಿಸಿದ ನೆಲ ಬಾಡಿಗೆ ವಾರ್ಷಿಕ ರೂ.21,000/– ಗಳನ್ನು ಮುಂದುವರೆಸಿ ಪುನಃ ದಿನಾಂಕ:27.11.2013 ರಿಂದ 26.11.2016 ರವರೆಗೆ 03 ವರ್ಷಗಳ ಅವಧಿಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ವಿಷಯದ ಸಂಖ್ಯೆ:ನಯೋಅಸ್ಥಾಸ/45/2013–14, ದಿನಾಂಕ:03.06.2014 ರಲ್ಲಿ ನಿರ್ಣಯವಾಗಿರುವಂತೆ ಸದರಿ ಸಂಸ್ಥೆಯವರಿಗೆ 03 ವರ್ಷಗಳಿಗೆ ಅನುಮತಿಸಿರುವ ಗುತ್ತಿಗೆ ಅವಧಿಯು ದಿನಾಂಕ:26.11.2016ಕ್ಕೆ ಮುಕ್ತಾಯವಾಗಿದ್ದು, ಸದರಿ ಅವಧಿಯಲ್ಲಿ ಪಾಲಿಕೆಗೆ ಪಾವತಿಸಬೇಕಾದ ನೆಲಬಾಡಿಗೆಯನ್ನು ಪೂರ್ಣವಾಗಿ ಪಾವತಿಸಿದ್ದು, ಯಾವುದೇ ಬಾಕಿ ಉಳಿಸಿಕೊಂಡಿರುವುದಿಲ್ಲ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಮಾನ್ಯ ಸ್ಥಾಯಿ ಸಮಿತಿ ಆಧ್ಯ ಗಮನಕ್ಕೆ ತರುತ್ತಾ, ಮೆ॥ ಕೀರ್ತಿ ಕ್ರಿಯೇಷನ್ಸ್ ಸಂಸ್ಥೆಯವರು ನಿರ್ಮಿಸಿರುವ ಮಂಜುಳ ಮಂಟಪ ಜಾಹೀರಾತು ಫಲಕದಲ್ಲಿ ಯಾವುದೇ ವಾಣಿಜ್ಯ ಜಾಹೀರಾತುಗಳನ್ನು ಅಳವಡಿಸಿ ಲಾಭಂಶ ಪಡೆಯುವ ಉದ್ದೇಶವನ್ನು ಹೊಂದಿರದೇ ಸಾಮಾಜಿಕ, ಕ್ರೀಡೆ, ಆರೋಗ್ಯ, ಧಾರ್ಮಿಕ ಹಿತಾಶಕ್ತಿ ಸಂದೇಶಗಳು, ಜನ ಜಾಗೃತಿ ಕಾರ್ಯಕ್ರಮಗಳು, ಸರ್ಕಾರಿ/ಪಾಲಿಕೆ ಕಾರ್ಯಕ್ರಮಗಳು, ಮಾನವೀಯತೆಯನ್ನು ಬಿಂಬಿಸುವ ಹಿತೋಪದೇಶಗಳನ್ನು ಪ್ರಚುರಪಡಿಸುತ್ತಿದ್ದು,

ಇವುಗಳಿಗೆ ಜಾಹೀರಾತು ತೆರಿಗೆಯಿಂದ ವಿನಾಯಿತಿ ನೀಡಿ ನೆಲ ಬಾಡಿಗೆ ಪರಿಷ್ಕರಿಸುವ ಷರತ್ತಿನೊಂದಿಗೆ ಸದರಿ ಸಂಸ್ಥೆಯವರು ಇನ್ನೂ ಹೆಚ್ಚಿನ ರೀತಿಯಲ್ಲಿ ಸಾರ್ವಜನಿಕರ ಒಳಿತಿಗಾಗಿ ಸಾಮಾಜಿಕ ಸಂದೇಶಗಳನ್ನು ಅಳವಡಿಸಿ ಪ್ರೋತ್ಸಾಹಿಸಲು ದಿನಾಂಕ: 27.11.2016 ರಿಂದ 3 ವರ್ಷಗಳ ಅವಧಿಗೆ

ಗುತ್ತಿಗೆಯನ್ನು ನವೀಕರಿಸಿಕೊಡಬೇಕೆಂದು ಕೋರಿರುತ್ತಾರೆ. ಸದರಿ ಸಂಸ್ಥೆಯವರಿಗೆ ದಿನಾಂಕ: 27.11.2016 ರಿಂದ 26.11.2019ರ ವರೆಗೆ ಗುತ್ತಿಗೆಯನ್ನು ನವೀಕರಿಸುವ ಕುರಿತು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಮುಂದೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ **ದಿನಾಂಕ: 02–03–2017ರ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 12.05.2017ರ ಸಭೆಯ ನಿರ್ಣಯ.**

**ನಿರ್ಣಯ: ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯು ಗುತ್ತಿಗೆ ಅವಧಿಯನ್ನು ನವೀಕರಿಸಲು ತೀರ್ಮಾನಿಸಿರುವುದನ್ನು ಪರಿಗಣಿಸಿ, ನಿಯಮಾನುಸಾರ ಪ್ರಸ್ತುತ ಮಾರುಕಟ್ಟೆ ದರಗಳನ್ವಯ ನೆಲಬಾಡಿಗೆಯನ್ನು ಪರಿಷ್ಕರಿಸಿ ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## ***401. ವಿಷಯದ ಸಂಖ್ಯೆ: ತೆಆಸ್ಥಾಸ/37/2017–18***

ಆಯುಕ್ತರ ದಿನಾಂಕ: 17–03–2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್–145 ಸ್ವತ್ತಿನ ಸಂಖ್ಯೆ:1/2, 1ನೇ ಅಡ್ಡರಸ್ತೆ, ಹೆಚ್.ಸಿದ್ಧಯ್ಯ ರಸ್ತೆ, ಹೊಂಬೇಗೌಡ ನಗರದಲ್ಲಿರುವ ಪಾಲಿಕೆಯ 25x28 ಅಡಿಗಳ ಜಾಗವನ್ನು ಕನ್ನಡ ಯುವಜನ ಸಂಘ (ರಿ) ರವರಿಗೆ ಗುತ್ತಿಗೆಗೆ ಈ ಹಿಂದೆ ದಿನಾಂಕ:22–05–1986 ರಂದು ಮಾಹೆಯಾನ ರೂ.10/ಗಳ ಸಾಮಾನ್ಯ ಬಾಡಿಗೆ ಮೇಲೆ 25 ವರ್ಷಗಳ ಅವಧಿಗೆ ಗುತ್ತಿಗೆ ನೀಡಲು ದಿನಾಂಕ:30–10–1986 ರಂದು ನಡೆದ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ: 25(10) ರಲ್ಲಿ ನಿರ್ಣಯಿಸಲಾಗಿರುತ್ತದೆ. ಅದರಂತೆ, ದಿನಾಂಕ: 18–02–1988 ರಿಂದ 25 ವರ್ಷಗಳ ಗುತ್ತಿಗೆಗೆ ಮಂಜೂರು ಮಾಡಲು ನಿರ್ಣಯಿಸಿರುತ್ತಾರೆ. ಈ ಗುತ್ತಿಗೆ ಅವಧಿಯು ದಿನಾಂಕ: 17–02–2013ಕ್ಕೆ (25 ವರ್ಷಗಳ ಗುತ್ತಿಗೆ ಅವಧಿಯು) ಮುಕ್ತಾಯವಾಗಿರುತ್ತದೆ.

ಕನ್ನಡ ಯುವಜನ ಸಂಘ (ರಿ) ರವರು 25 ವರ್ಷಗಳ ಗುತ್ತಿಗೆ ಅವಧಿಯು ಮುಗಿದಿರುವುದರಿಂದ ಪೂಜ್ಯ ಮಹಾಪೌರರಿಗೆ ಪತ್ರವನ್ನು ದಿನಾಂಕ: 07–12–2012 ರಂದು ಪತ್ರವನ್ನು ಸಲ್ಲಿಸಿ, ಪುನ: 30 ವರ್ಷಗಳ ಗುತ್ತಿಗೆಗೆ ಮಂಜೂರು ಮಾಡುವಂತೆ ಕೋರಿರುತ್ತಾರೆ ಹಾಗೂ ಈ ಸಂಬಂಧ ಉಲ್ಲೇಖಿತ ಪತ್ರದಲ್ಲಿ ಪೂಜ್ಯ ಮಹಾಪೌರರು ಸದರಿ ಸಂಸ್ಥೆಯವರಿಗೆ 30 ವರ್ಷಗಳ ಅವಧಿಗೆ ಗುತ್ತಿಗೆಯನ್ನು ಮುಂದುವರೆಸುವ ಕುರಿತು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಿರುತ್ತಾರೆ.

ಹೊಂಬೇಗೌಡನಗರ ಕನ್ನಡ ಯುವಜನ ಸಂಘ (ರಿ) ಕಳೆದ 48 ವರ್ಷಗಳಿಂದ ಕನ್ನಡ ಪರ ಸಂಘಟನೆಗಳ ಹೋರಾಟಗಳಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿರುವ ಈ ಸಂಸ್ಥೆಯ ಸಂಘದ ಕಛೇರಿಯ ಪ್ರಸ್ತುತ ಮಹಾನಗರ ಪಾಲಿಕೆಯು ಗುತ್ತಿಗೆ ನೀಡಿರುವ ಮೇಲಿನ ವಿಳಾಸದ ನಿವೇಶನದಲ್ಲಿ ಕಾರ್ಯನಿರ್ವಹಿಸುತ್ತಾ ಬರುತ್ತಿದೆಯೆಂದು ಪೂಜ್ಯ ಮಹಾಪೌರರು ಪತ್ರದಲ್ಲಿ ತಿಳಿಸಿರುತ್ತಾರೆ. ಅಲ್ಲದೇ ಸದರಿ ಸಂಸ್ಥೆಯವರು ಸಾರ್ವಜನಿಕರಿಗೆ ಉಚಿತವಾಗಿ ವಾಚನಾಲಯಗಳನ್ನು ಸಹ ನಡೆಸಿಕೊಂಡು ಬರಲಾಗಿದೆ ಎಂದು ಸಂಸ್ಥೆಯವರು ತಿಳಿಸಿರುತ್ತಾರೆ.

ಮುಂದುವರೆದಂತೆ, ಉಲ್ಲೇಖಿತ (1) ರಂತೆ ಆಯುಕ್ತರ ಟಿಪ್ಪಣಿ ದಿನಾಂಕ:12–02–2015 ರಲ್ಲಿ ಮುಂದಿನ 30 ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸುವ ಬಗ್ಗೆ ಟಿಪ್ಪಣಿಯನ್ನು ಅನುಮೋದಿಸಲಾಗಿದೆ.

ಉಲ್ಲೇಖ (2) ರಂತೆ ದಿನಾಂಕ: 05–08–2015ರ ಪತ್ರದಲ್ಲಿ ಆಯುಕ್ತರವರು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ನಗರಾಭಿವೃದ್ಧಿ ಇಲಾಖೆ ವಿಧಾನಸೌಧ ರವರಿಗೆ ಪತ್ರ ಬರೆದು, ಪ್ರಸ್ತುತ ಸಂಸ್ಥೆಗೆ ಗುತ್ತಿಗೆ ನೀಡಲಾಗಿರುವ ಸ್ವತ್ತಿನಲ್ಲಿ 1ನೇ ಮಹಡಿಯಲ್ಲಿ ವಾಚನಾಲಯವಿದ್ದು, ನೆಲ ಅಂತಸ್ತಿನಲ್ಲಿ ಅಂಗಡಿಗಳನ್ನು

ನಿರ್ಮಿಸಿ ಬಾಡಿಗೆಗೆ ನೀಡಿ, ಸದರಿ ಗುತ್ತಿಗೆದಾರರು ಕಟ್ಟಡವನ್ನು ಮಂಜೂರಾತಿ ನಕ್ಷೆಗೆ ವಿರುದ್ಧವಾಗಿ ನಿರ್ಮಿಸಿರುವುದಾಗಿ ಅಧಿಕಾರಿಗಳ ವರದಿ ಆಧಾರದ ಮೇಲೆ ತಿಳಿಸಲಾಗಿರುತ್ತದೆ. ಸದರಿ ಸಂಸ್ಥೆಯು ಗುತ್ತಿಗೆ ನವೀಕರಣಕ್ಕೆ ಸಂಬಂಧಿಸಿದಂತೆ ಪಾಲಿಕೆಯ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿಯನ್ನು ಆಸ್ತಿ ವಿಭಾಗದಿಂದ ಮಂಡಿಸಿರುವುದಿಲ್ಲ ಹಾಗೂ ಸದರಿ ವಿಷಯದಲ್ಲಿ ಮಾನ್ಯ ಆಯುಕ್ತರ ಸಹಿಯನ್ನು ಪಡೆದು ಸ್ಥಾಯಿ ಸಮಿತಿಯ ಮುಂದೆ ಮಂಡಿಸದೇ ನೇರವಾಗಿ ಪಾಲಿಕೆಯ ಸಭೆಯಲ್ಲಿ ಮಂಡಿಸಲಾಗಿರುತ್ತದೆ ಹಾಗೂ ಪಾಲಿಕೆಯ ದಿನಾಂಕ: 27-02-2015ರ ನಡವಳಿ ಸಂಖ್ಯೆ: 03(362)2014-15 ರಲ್ಲಿ ನಿಗಧಿಪಡಿಸಲಾದ ಗುತ್ತಿಗೆ ದರವು ಕ್ರಮಬದ್ಧವಾಗಿರುವುದಿಲ್ಲವೆಂದು ತಿಳಿಸುತ್ತಾ 2014ರ ಮಾರುಕಟ್ಟೆ ದರವು ಪ್ರಸ್ತುತ ಜಾಗದ

ವಿಸ್ತೀರ್ಣವು 25x80=2000 ಅಡಿಗಳಿದ್ದು, ಈ ಪ್ರದೇಶದಲ್ಲಿ 2014ರ ಸರ್ಕಾರದ ಮಾರ್ಗಸೂಚಿ ದರದಂತೆ ಚದರಡಿ 1ಕ್ಕೆ ರೂ.7150/- ಗಳಿರುತ್ತವೆ. ಇದಕ್ಕೆ ಶೇ 15% ಹೆಚ್ಚಿಸಿದಾಗ ರೂ.8223/-ಗಳಾಗುತ್ತವೆ. ಇದರಂತೆ ಲೆಕ್ಕಚಾರ ಮಾಡಲಾಗಿ ರೂ.1,64,45,000/- ಮೊತ್ತಗಳಾಗುತ್ತದೆ. ಇದರಲ್ಲಿ ಶೇ 10% ಎಂದರೆ ವಾರ್ಷಿಕ ರೂ.16,44,500/- ಗಳು ಮಾಸಿಕ ಗುತ್ತಿಗೆ ಮೊತ್ತ ರೂ.1,37,041/-ಗಳಾಗುತ್ತವೆ. ಎಂದು ತಿಳಿಸಿ ಘನ ಸರ್ಕಾರದ ದಿನಾಂಕ:02-06-2003ರ ಆದೇಶದಂತೆ ಸಾರ್ವಜನಿಕ ಬಹಿರಂಗ ಹರಾಜು ಮುಖಾಂತರವೇ ನಿಯಮಾನುಸಾರ ಕ್ರಮದಡಿಯಲ್ಲಿ ನೀಡಬೇಕಾಗಿರುತ್ತದೆಂದು ಪತ್ರದಲ್ಲಿ ತಿಳಿಸಲಾಗಿರುತ್ತದೆ.

ಹಾಲಿ ನಿರ್ಣಯದಲ್ಲಿ ನಿಗಧಿಪಡಿಸಿರುವ ಗುತ್ತಿಗೆ ದರವು ಕ್ರಮಬದ್ಧವಾಗದೇ ಇದ್ದು, ಹಾಲಿ ಗುತ್ತಿಗೆ ದರವು ಮಾಸಿಕವಾಗಿ ರೂ.1,37,041/- ಗಳಾಗುತ್ತಿದ್ದು, ಠರಾವಿನಲ್ಲಿ ಅಂದರೆ ಹಿಂದಿನ ನಿರ್ಣಯದಲ್ಲಿ 13,704/-ಎಂದು ನಮೂದಿಸಿದ್ದು, ಇದು ಆರ್ಥಿಕ ನಿಯಮಾವಳಿಗೆ ವಿರುದ್ಧವಾಗಿರುತ್ತದೆಂದು ಹಾಗೂ ಸಂಬಂಧಪಟ್ಟ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸಭೆಯಲ್ಲಿ ಮಂಡಿಸದೇ ಇರುವುದರಿಂದ ದಿನಾಂಕ:27-02-2015 ರಂದು ನಡೆದ ಪಾಲಿಕೆಯ ಸಭೆಯ ಪ್ರಸ್ತಾವನೆಯನ್ನು ನೇರವಾಗಿ (SUO-MOTTO) ನಿರ್ಣಯವಾಗಿ ಕೈಗೊಂಡಿದ್ದು, 30 ವರ್ಷಗಳ ಅವಧಿಗೆ ಗುತ್ತಿಗೆಯನ್ನು ನವೀಕರಿಸುವ ಬಗ್ಗೆ ಮಾನ್ಯ ಆಯುಕ್ತರ ಟಿಪ್ಪಣಿ ಒಪ್ಪಬಹುದೆಂದು ಸಭೆಯು ಅನುಮೋದಿಸಿದ್ದು ಎಂದು ವಿವರಿಸಲಾಗಿರುತ್ತದೆ.

ಮುಂದುವರೆದಂತೆ ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ 129 ಟಿಎಂಡಿ 2002 ದಿನಾಂಕ:02-03-2003 ರಂತೆ ಸಾರ್ವಜನಿಕ ಹರಾಜು ಮೂಲಕ ಗುತ್ತಿಗೆಯನ್ನು ನೀಡಬೇಕಾಗಿರುವುದರಿಂದ ಹಾಗೂ ಪ್ರಸ್ತುತ ಸಂಘವು ಗುತ್ತಿಗೆ ನಿಯಮಾವಳಿಗಳನ್ನು ಉಲ್ಲಂಘಿಸಿರುವುದರಿಂದ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗಳು ಯಾವುದೇ ತೀರ್ಮಾನ ಕೈಗೊಳ್ಳುವ ಮುನ್ನವೇ ಪಾಲಿಕೆಯಲ್ಲಿ ಏಕಪಕ್ಷೀಯ ತೀರ್ಮಾನ ಕೈಗೊಂಡಿರುವ ಮೇರೆಗೆ ಈ ತೀರ್ಮಾನವು ನಿಯಮಾವಳಿಗೆ ವಿರುದ್ಧವಾಗಿರುವುದರಿಂದ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಕೆಎಂಸಿ ಕಾಯ್ದೆ 1927ರ ಕಲಂ 72 ಅಡಿಯಲ್ಲಿ ದಿನಾಂಕ:27-02-2015ರ ಕೌನ್ಸಿಲ್ ನಿರ್ಣಯವನ್ನು ರದ್ದುಪಡಿಸಲು ಸರ್ಕಾರಕ್ಕೆ ಪತ್ರ ಬರೆಯಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಸರ್ಕಾರದ ಪತ್ರದ ಸಂಖ್ಯೆ:ನಅಇ 224 ಎಂಎನ್‌ಜಿ 2016 ದಿನಾಂಕ:03-10-2016ರ ಸರ್ಕಾರದ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಅಧಿನಿಯಮ 1976ರ ಕಲಂ98/2 ರಡಿ ಕಾರಣ ಕೇಳುವ ನೋಟೀಸನ್ನು ಬಿಬಿಎಂಪಿ ಆಯುಕ್ತರಿಗೆ ನೀಡಿ, ಆಯುಕ್ತರವರ ದಿನಾಂಕ:05-08-2015ರ ಪತ್ರದಲ್ಲಿ ತಿಳಿಸಿರುವಂತೆ ಗುತ್ತಿಗೆ ಅವಧಿ ಪೂರ್ಣಗೊಂಡಿದ್ದು, ಮುಂದಿನ 30 ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸುವ ಬಗ್ಗೆ ಪಾಲಿಕೆಯ ಕೌನ್ಸಿಲ್ ಸಭೆಯ ವಿಷಯ ಸಂಖ್ಯೆ: 03(362)2014-15, ದಿನಾಂಕ:

27–02–2015 ಎಂದು ಕೈಗೊಂಡಿರುವ ನಿರ್ಣಯವು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976ರ ಕಲಂ 176ರ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ಆದುದರಿಂದ, ಸದರಿ ನಿರ್ಣಯವನ್ನು ಏಕೆ ರದ್ದುಗೊಳಿಸಬಾರದು ಎಂಬ ಬಗ್ಗೆ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976ರ ಕಲಂ 98(2) ರನ್ವಯ ಈ ನೋಟೀಸನ್ನು ಜಾರಿಗೊಳಿಸಲಾಗಿದೆ ಎಂದು ತಿಳಿಸಿ, ಈ ನಿರ್ಣಯವನ್ನು ರದ್ದುಗೊಳಿಸುವ ಬಗ್ಗೆ ಪಾಲಿಕೆಯ ಕೌನ್ಸಿಲ್ ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ಈ ನೋಟೀಸ್ ತಲುಪಿದ ದಿನಾಂಕದಿಂದ 15 ದಿನಗಳೊಳಗಾಗಿ ಲಿಖಿತವಾಗಿ ಹೇಳಿಕೆಗಳನ್ನು ಕೌನ್ಸಿಲ್‌ನಿಂದ ಪಡೆದು ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಲಾಗಿರುತ್ತದೆ.

ಮೇಲ್ಕಂಡಂತೆ ಸರ್ಕಾರದ ದಿನಾಂಕ: 03–10–2016ರ ನೋಟೀಸ್‌ಗೆ ಲಿಖಿತ ಹೇಳಿಕೆ ನೀಡಬೇಕಾಗಿರುವ ಅಂಶದ ಹಿನ್ನೆಲೆಯಲ್ಲಿ ತೀರ್ಮಾನಕ್ಕಾಗಿ ಎಲ್ಲಾ ಮಾಹಿತಿಗಳನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ **ದಿನಾಂಕ: 17–03–2017ರ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಪರಿಶೀಲಿಸಲಾಗಿ ಕನ್ನಡ ಯುವಜನ ಸಂಘ (ರಿ) ರವರಿಗೆ ಗುತ್ತಿಗೆ ಅವಧಿಯನ್ನು ನವೀಕರಿಸಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ದಿನಾಂಕ: 12.05.2017ರ ಸಭೆಯ ನಿರ್ಣಯ.**

**ನಿರ್ಣಯ: ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯು ಗುತ್ತಿಗೆ ಅವಧಿಯನ್ನು ನವೀಕರಿಸಲು ತೀರ್ಮಾನಿಸಿರುವುದನ್ನು ಪರಿಗಣಿಸಿ, ನಿಯಮಾನುಸಾರ ಪ್ರಸ್ತುತ ಮಾರುಕಟ್ಟೆ ದರಗಳನ್ವಯ ಪರಿಷ್ಕರಿಸಿ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## ***41]. ವಿಷಯದ ಸಂಖ್ಯೆ: ತೆಆಸ್ಥಾಸ/38/2017–18***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 07–04–2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಮಹಾಲಕ್ಷ್ಮೀಪುರಂ ವಿಭಾಗ ವ್ಯಾಪ್ತಿಯ ವಾರ್ಡ್ ಸಂಖ್ಯೆ: 67ರ ನಾಗಪುರ ಬಿ.ಬಿ.ಎಂ.ಪಿ ಕಛೇರಿಯು ಅವರಣದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಮಹಿಳೆಯರ ಮತ್ತು ಮತ್ತು ಪುರುಷರ ವ್ಯಾಯಾಮ ಮತ್ತು ಆರೋಗ್ಯ ಸದೃಡ ಕೇಂದ್ರವನ್ನು ಉತ್ತಮ ಅನುಭವವುಳ್ಳ ಶ್ರೀ. ದೇವಾನಂದ್ ಮಸಲ್ ಕ್ರಾಫ್ಟ್ ರವರಿಗೆ ನಿರ್ವಹಣೆ ಮಾಡಲು ಅನುವು ಮಾಡಿಕೊಡುವಂತೆ ಉಲ್ಲೇಖ ಪತ್ರದಲ್ಲಿ ಸನ್ಮಾನ್ಯ ಶ್ರೀ. ಡಿ.ವಿ.ಸದಾನಂದಗೌಡ, ಮಾನ್ಯ ಸಾಂಖ್ಯಿಕ ಮತ್ತು ಯೋಜನೆ ಅನುಷ್ಠಾನ ಸಚಿವರು, ಭಾರತ ಸರ್ಕಾರ ರವರು ಮಾನ್ಯ ಆಯುಕ್ತರವನ್ನು ಕೋರಿರುತ್ತಾರೆ. ಸದರಿ ಪತ್ರದ ಮೇಲೆ ಮಾನ್ಯ ಆಯುಕ್ತರು, ಅಪರ ಆಯುಕ್ತರು (ಎಸ್ಟೇಟ್) ರವರಿಗೆ "Please put up" ಎಂದು ಷರಾ ಬರೆದು ಮನವಿ ಪತ್ರವನ್ನು ಮುಂದಿನ ಕ್ರಮಕ್ಕಾಗಿ ಕಳುಹಿಸಿರುತ್ತಾರೆ (ಪತ್ರ ಲಗತ್ತಿಸಿದೆ)

ಶ್ರೀ. ದೇವಾನಂದ್ ಪ್ರೊಪ್ರೇಟರ್ ಮಸಲ್ ಕ್ರಾಫ್ಟ್ ಜಿಮ್ ರವರು ವ್ಯಾಯಾಮ ಕೇಂದ್ರಕ್ಕೆ ಬರುವ ಯುವಜನ ಹಾಗೂ ಹಿರಿಯ ನಾಗರೀಕರಿಗೆ ಉಚಿತವಾಗಿ ತರಬೇತಿ ನೀಡಲು ಅನುಭವಿ ತರಬೇತುದಾರರು ಇರುವುದಾಗಿ ತಿಳಿಸುತ್ತಾ ತರಬೇತಿ ನೀಡಲು ಅನುಮತಿ ನೀಡುವಂತೆ ಕೋರಿರುತ್ತಾರೆ. (ಪ್ರತಿ ಲಗತ್ತಿಸಿದೆ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ರೂ. 100.00 ಲಕ್ಷಗಳ ಅಂದಾಜು ಮೊತ್ತದಲ್ಲಿ ವಾರ್ಡ್ 67ರ ಕಛೇರಿಯ ಆವರಣದಲ್ಲಿ ನೂತನವಾಗಿ ಈಗಾಗಲೇ ಕಟ್ಟಡ ನಿರ್ಮಿಸಿ ಜಿಮ್ ಉಪಕರಣಗಳನ್ನು ಅಳವಡಿಸಲಾಗಿರುತ್ತದೆ.

**ಕಟ್ಟಡದ ವಿವರ:**

ನೆಲ ಅಂತಸ್ತು: 26*37 ಚ.ಅ
ಮೊದಲನೆ ಮಹಡಿ: 26*37 ಚ.ಅ

ಯಂತ್ರೋಪಕರಣಗಳ ವಿವರ:

**Gents (Ground Floor)**

1. Upright bike -1 No
2. Stayfit (CTX-3) Tread Mill- 2Nos
3. Cross Trainer- 1 No
4. Functional Trainer -1 No
5. Smith Machine -1 No
6. Chest cum Shoulder press -1 No
7. Twister with Stand -2 No.s
8. Squat Machine -1 No
9. Inclined bench cum flat bench 2 in one
10. Multi function bench adjustable
11. Dumble rack -1 No
12. Flooring rubber mat in room- 78 No's
13. Gym Yoga mat -40 Nos
14. Gym Ball -10 No's
15. Twister (small) -4 No's

**Ladies (first floor)**

1. Upright bike -1 No
2. Stayfit (CTX-3) Tread Mill- 3 No's
3. Dumble rack small-1 Nos
4. Flooring rubber mat in room -78 No's
5. Twister (small) -1 Nos

ಕೆ.ಎಂ.ಸಿ ಕಾಯ್ದೆ 176ರ ಸ್ವತ್ತು ಮತ್ತು ಅದರಲ್ಲಿನ ಹಿತಾಸಕ್ತಿಯ ವಿಲೆ ಪ್ರಕಾರ ಆಯುಕ್ತರವರು ಸ್ಥಾಯಿ ಸಮಿತಿಯ ಮಂಜೂರಾತಿಯೊಡನೆ ನಿಗಮದ ಯಾವುದೇ ಸ್ಥಿರ ಸ್ವತ್ತನ್ನು ಬಾಡಿಗೆಗೆ ಅಥವಾ ರಿಯಾಯಿತಿಗೆ ಮೂರು ವರ್ಷಗಳ ಅವಧಿಗೆ ವಹಿಸಿ ಕೊಡಬಹುದಾಗಿರುತ್ತದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಮಹಾಲಕ್ಷ್ಮೀಪುರಂ ವಿಭಾಗ ವ್ಯಾಪ್ತಿಯ ವಾರ್ಡ್ ಸಂಖ್ಯೆ: 67ರ ನಾಗಪುರ ಬಿಬಿಎಂಪಿ ಕಛೇರಿಯ ಆವರಣದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಮಹಿಳೆಯರ ಮತ್ತು ಪುರುಷರ ವ್ಯಾಯಾಮ ಮತ್ತು ಆರೋಗ್ಯ ಸದೃಡ ಕೇಂದ್ರವನ್ನು ನಡೆಸಲು ಶ್ರೀ. ದೇವಾನಂದ್ ಮಸಲ್ ಕ್ರಾಫ್ಟ್ ರವರೊಂದಿಗೆ MOU ಮಾಡಿಕೊಳ್ಳಲು ಅನುಮತಿ ಕೋರಿರುವ ಮೇರೆಗೆ **ದಿನಾಂಕ: 07–04–2017ರ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿಯನ್ನು ಒಪ್ಪಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ದಿನಾಂಕ: 12.05.2017ರ ಸಭೆಯ ನಿರ್ಣಯ.**

**–ಮುಂದೂಡಿದೆ–**

***42]. ವಿಷಯದ ಸಂಖ್ಯೆ: ತೆಆಸ್ಥಾಸ/39/2017-18***

ಆಯುಕ್ತರ ದಿನಾಂಕ: 25-03-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:82, ಹೊಯ್ಸಳನಗರ, ಮರ್ಫಿಟೌನ್, ನಿವೇಶನ ಸಂಖ್ಯೆ:64 ರಲ್ಲಿ ವಾಸವಿರುವ ಶ್ರೀಮತಿ.ಅಂಜಲಿದೇವಿ ರವರ ನಿವೇಶನದ ತಿದ್ದುಪಡಿ ಆದೇಶದ ಬಗ್ಗೆ ಸಹಾಯಕ ಕಂದಾಯ ಅಧಿಕಾರಿ (ಭಾರತಿನಗರ) ಉಪ ವಿಭಾಗ, ಬೆಂಗಳೂರು ಮಹಾನಗರ ಪಾಲಿಕೆ ಪತ್ರದ ಸಂಖ್ಯೆ: ಸ.ಕ.ಅ(ಭಾ.ನಗರ) ವಿ.ಪ:ವ್ಯ.ನೋ:51:97-98 ದಿನಾಂಕ:14-12-2006 ರಂತೆ ಬೆಂಗಳೂರಿನ ಮರ್ಫಿಟೌನ್‌ನಲ್ಲಿರುವ ನಗರ ಪಾಲಿಕೆ ವಸತಿ ಗೃಹಗಳಲ್ಲಿ ಶ್ರೀಮತಿ.ಅಂಜಲಿದೇವಿ ರವರಿಗೆ ಕ್ರಯಕ್ಕೆ ನೀಡಿರುವುದು ವ್ಯಕ್ತವಾಗುತ್ತದೆ. ಅದರಂತೆ, ಮಹಾನಗರ ಪಾಲಿಕೆ ವಸತಿ ಗೃಹಗಳನ್ನು ಕ್ರಯಕ್ಕೆ ನೀಡಿರುವ ಜಾಗವು ಬಿಬಿಎಂಪಿಯ ಜಾಗವಾಗಿರುವುದು ವ್ಯಕ್ತವಾಗಿರುತ್ತದೆ. ಅರ್ಜಿದಾರರು ಹೆಚ್ಚುವರಿ ಜಾಗಕ್ಕೆ ತಿದ್ದುಪಡಿ ಪತ್ರವನ್ನು ಮಾಡಿಕೊಡಲು ಕೋರಿರುವ ಸಂಬಂಧ ಈ ಹೆಚ್ಚುವರಿ ವಿಸ್ತೀರ್ಣವು ಈ ಹಿಂದೆ ಮರ್ಫಿಟೌನ್‌ನಲ್ಲಿರುವ ವಸತಿ ಗೃಹಗಳನ್ನು ವಿತರಿಸಿರುವ ಬಗ್ಗೆ ದೃಢೀಕೃತ ಬಡಾವಣೆ ನಕ್ಷೆಯಂತೆ ಪರಿಶೀಲಿಸಿಕೊಳ್ಳಬಹುದಾಗಿರುತ್ತದೆ. ಆದುದರಿಂದ, ಪಾಲಿಕೆಯ ಆಸ್ತಿಯನ್ನು ಕ್ರಯ/ಗುತ್ತಿಗೆ ನೀಡುವಾಗ ಈ ಕೆಳಕಂಡ ಕಾಯ್ದೆ ಮತ್ತು ನಿಯಮವನ್ನು ಪಾಲಿಸಬೇಕಾಗಿರುತ್ತದೆ.

ಕರ್ನಾಟಕ ಮುನಿಸಿಪಲ್ ಕಾಯ್ದೆ 1976ರ ಕಲಂ 176 ಹಾಗೂ 176ರ (6) ಹಾಗೂ (ಬಿ) 2 ಪ್ರಕಾರ ಕ್ರಯಪತ್ರ/ತಿದ್ದುಪಡಿ ಪತ್ರ ಅಥವಾ ಗುತ್ತಿಗೆಗೆ ನೀಡಲು ಮಾನ್ಯ ಆಯುಕ್ತರು ರವರಿಗೆ 1 ವರ್ಷಕ್ಕೆ ಅಧಿಕಾರ ವ್ಯಾಪ್ತಿ, 3 ವರ್ಷಗಳವರೆಗೆ ಅಧಿಕಾರವು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, 5 ವರ್ಷದವರೆವಿಗೂ ಗುತ್ತಿಗೆ/ಕ್ರಯಕ್ಕೆ ನೀಡುವ ಅಧಿಕಾರವು ಮಹಾನಗರ ಪಾಲಿಕೆಯ ಸಭೆಗೆ ವ್ಯಾಪ್ತಿಗೆ ಒಳಪಡುತ್ತದೆ. 5 ವರ್ಷದವರೆವಿಗೂ ಇಲ್ಲವೇ ಹೆಚ್ಚಿನ ವರ್ಷಗಳಿಗೆ ಇದ್ದಲ್ಲಿ ಘನ ಸರ್ಕಾರಕ್ಕೆ ಅಧಿಕಾರವಿರುತ್ತದೆ.

**ಘನ ಸರ್ಕಾರವು ಆದೇಶ ಸಂಖ್ಯೆ: ನಅಇ 129 ಟಿ.ಎಂ.ಡಿ 2002 ದಿನಾಂಕ:02-06-2003 ರಲ್ಲಿ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನುಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ /ಕ್ರಯ ಆಧಾರದ ಮೇಲೆ ನೀಡಿದಲ್ಲಿ ಅಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮುಖಾಂತರವೇ ನೀಡುವುದು ಎಂದು ಆದೇಶಿಸಿರುತ್ತದೆ.**

ಪಾಲಿಕೆಯ ಕೆ.ಎಂ.ಸಿ.ಕಾಯ್ದೆ 1976 ರ ನಿಯಮ 176 (6) ರಂತೆ Not with standing anything contained in this Act —

No movable property exceeding such sum in value as may be prescribed shall be sold otherwise than by public auction;
No property whether movable or immovable of whatever value shall be transferred free of cost or for an upset price;
no lease of any immovable property exceeding five years shall be granted;
no immovable property shall be disposed of by sale or by other transfer;
Except with the previous sanction of the Government. ಎಂದಿದ್ದು, ಈ ಬಗ್ಗೆ ಸೂಕ್ತ ಕ್ರಮಕ್ಕೆ ಅವಗಾಹನೆಗಾಗಿ ಸಲ್ಲಿಸಿದೆ.

ಸದರಿ ಸ್ವತ್ತಿನ ಅಳತೆ 624 ಚದರಡಿಗಳಿಗೆ ಈಗಾಗಲೇ ಜಂಟಿ ಆಯುಕ್ತರು (ಪೂರ್ವ) ವಲಯ ರವರು ಕ್ರಯಪತ್ರವನ್ನು ನೀಡಿರುತ್ತಾರೆ. ಹಲಸೂರು ಉಪ ನೊಂದಾವಣಾ ಅಧಿಕಾರಿ ಕಛೇರಿಯಲ್ಲಿ ಈ ಅರ್ಜಿದಾರರಾದ ಶ್ರೀಮತಿ.ಅಂಜಲಿದೇವಿ ರವರು ಸ್ವತ್ತಿನ ಪಕ್ಕದಲ್ಲಿರುವ ಜಾಗವು ಪಾಲಿಕೆ ಸ್ವತ್ತಾಗಿದ್ದು, ಅದರ ಪೈಕಿ 438.76 ಚದರಡಿಗಳನ್ನು ಹೆಚ್ಚುವರಿಯಾಗಿ ಒತ್ತುವರಿ ಮಾಡಿಕೊಂಡು ಕಟ್ಟಡವನ್ನು

ನಿರ್ಮಿಸಿರುತ್ತಾರೆ. ಆದ್ದರಿಂದ, ಅರ್ಜಿದಾರರು ಸದರಿ ಜಾಗಕ್ಕೆ ತಗಲುವ ಮಾರುಕಟ್ಟೆ ದರವನ್ನು ಪಾವತಿಸಲು ಸಿದ್ದವಾಗಿರುತ್ತೇವೆ ಎಂದು ಮನವಿ ಸಲ್ಲಿಸಿರುತ್ತಾರೆ. ಕಡತದ ಕಂಡಿಕೆ ಸಂಖ್ಯೆ:29 ರಲ್ಲಿ ಮಾನ್ಯ ಆಯುಕ್ತರು ರವರು ಆದೇಶಿಸಿ ಸೂಚಿಸಿರುವಂತೆ ಪ್ರಸ್ತಾಪಿತ ಆಸ್ತಿಯ ಸ್ವತ್ತಿನ ಅಳತೆ 438.76 ಚದರಡಿಗಳು /10.764=40.76 ಚದರ ಮೀಟರ್‌ಗಳಾಗಿದ್ದು, ಕರ್ನಾಟಕ ರಾಜ್ಯಪತ್ರ ಹೊರಡಿಸಿರುವಂತೆ ಮಾರುಕಟ್ಟೆ ಮೌಲ್ಯ 01-04-2016 ರಂತೆ ಚದರಡಿ ಒಂದಕ್ಕೆ ರೂ.3633/- ಗಳಾಗಿದ್ದು, ವಸತಿಯ ಉಪಯೋಗಕ್ಕೆ ಶೇ 10% ರಷ್ಟು ರೂ ಸೇರಿಸಿ 363.3/- ಚದರಡಿ ಒಂದಕ್ಕೆ 3633+363.3=3996/- ಗಳಾಗುತ್ತದೆ. ಒಟ್ಟಾರೆ 438.76x3996=17,53,416/- ರೂಗಳಾಗುತ್ತದೆ.

ಈ ಹಿಂದೆ ಸರ್ಕಾರದ ಆದೇಶದ ಸಂಖ್ಯೆ:ನಅಇ 290 ಎಂಎನ್‌ಜಿ 2011 ಬೆಂಗಳೂರು ದಿ:31-05-2014 ರಲ್ಲಿ ನೀಡಿರುವ ನಿರ್ದೇಶನದಂತೆ ನಗರ ಪಾಲಿಕೆಯ ಸ್ವತ್ತನ್ನು ಗುತ್ತಿಗೆ ನೀಡುವ ಪ್ರಕ್ರಿಯೆ ಹಾಗೂ ದರ ನಿಗಧಿಪಡಿಸಿರುವ ಬಗ್ಗೆ ದಿನಾಂಕ:02-06-2003ರ ಸರ್ಕಾರಿ ಆದೇಶದಲ್ಲಿ ನಿರ್ದಿಷ್ಟಪಡಿಸಿರುವ ಮಾರ್ಗಸೂಚಿ ಅನ್ವಯ ಕ್ರಮವಹಿಸುವಂತೆ ಹಾಗೂ ಇನ್ನು ಮುಂದೆ ಇಂತಹ ಎಲ್ಲಾ ಪ್ರಕರಣಗಳನ್ನು ಮೇಲ್ಕಂಡ ಸರ್ಕಾರಿ ಆದೇಶದಂತೆ ಪರಿಶೀಲಿಸಿ ಅಗತ್ಯವಿದ್ದಲ್ಲಿ ಮಾತ್ರ ಸ್ಪಷ್ಟ ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿಕೊಡುವಂತೆ ನಿರ್ದೇಶನ ನೀಡಲಾಗಿರುತ್ತದೆ.

ಸರ್ಕಾರದ ಆದೇಶಗಳ ಅನ್ವಯ ಪರಿಗಣಿಸಿ ಕ್ರಯದ ಮೊತ್ತವನ್ನು ನಿಗಧಿಪಡಿಸಿ, ಅರ್ಜಿದಾರರಾದ ಶ್ರೀಮತಿ.ಅಂಜಲಿದೇವಿ ರವರಿಗೆ ಹೆಚ್ಚುವರಿ ವಿಸ್ತೀರ್ಣಕ್ಕೆ ತಿದ್ದುಪಡಿ ಮಾಡಿಕೊಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ **ಆಯುಕ್ತರವರ ದಿನಾಂಕ: 25.03.2017ರ ಟಿಪ್ಪಣಿಯ ಬಗ್ಗೆ ಚರ್ಚಿಸಿ, ಶ್ರೀಮತಿ ಅಂಜಲಿದೇವಿರವರಿಗೆ ಹೆಚ್ಚುವರಿ ವಿಸ್ತೀರ್ಣಕ್ಕೆ ತಿದ್ದುಪಡಿ ಮಾಡುವ ಪ್ರಸ್ತಾವನೆಯನ್ನು ಒಪ್ಪಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ದಿನಾಂಕ: 12.05.2017ರ ಸಭೆಯ ನಿರ್ಣಯ.**

**-ಮುಂದೂಡಿದೆ-**

## *431. ವಿಷಯದ ಸಂಖ್ಯೆ: ತೆಆಸ್ಥಾಸ/40/2017-18*

ಆಯುಕ್ತರ ದಿನಾಂಕ: 22-03-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ರಾಜರಾಜೇಶ್ವರಿನಗರ ವಲಯದ ವಾರ್ಡ್ ನಂ: 160 ವ್ಯಾಪ್ತಿಯಲ್ಲಿ ಬರುವ ಕೆಂಚೇನಹಳ್ಳಿ ಮುಖ್ಯ ರಸ್ತೆಯನ್ನು ಚೈನೇಜ್ 1800.00 ಮೀ.ನಿಂದ 2200.00 ಮೀ.ವರೆಗೆ 24 ಮೀಟರಿಗೆ ಅಗಲೀಕರಣಗೊಳಿಸಲು ಉದ್ದೇಶಿಸಲಾಗಿದ್ದು, ಈ ರಸ್ತೆಯು ಸಿ.ಡಿ.ಪಿ. -2015 ರಲ್ಲಿ 24.00 ಮೀಟರ್‌ಗಳಿಗೆ ವಿಸ್ತರಿಸಲು ಯೋಜನೆಯನ್ನು ತೋರಿಸಲಾಗಿರುತ್ತದೆ. ಈ ಕೆಂಚೇನಹಳ್ಳಿ ಮುಖ್ಯರಸ್ತೆಯು ಒಂದು ಪ್ರಮುಖ ಲಿಂಕ್ ರಸ್ತೆಯಾಗಿದ್ದು, ಉತ್ತರಹಳ್ಳಿ ಮುಖ್ಯರಸ್ತೆಯಿಂದ-ಮೈಸೂರು ರಸ್ತೆಯ ರಾಜರಾಜೇಶ್ವರಿನಗರದ ಕಮಾನು (Arch) ವರೆಗೂ ಸಂಪರ್ಕಿಸುವ ಏಕೈಕ ರಸ್ತೆಯಾಗಿರುತ್ತದೆ. ಈ ರಸ್ತೆಯನ್ನು ನಾಗರೀಕರು ಮೈಸೂರು ರಸ್ತೆಯಿಂದ ಉತ್ತರಹಳ್ಳಿ ಕಡೆಗೆ ಅಥವಾ ಕೆಂಗೇರಿಯ ಕಡೆಗೆ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬನಶಂಕರಿ 6ನೇ ಹಂತದ ಪ್ರದೇಶಗಳಿಗೆ ಸಂಪರ್ಕಿಸುವ ಪ್ರಮುಖ ರಸ್ತೆಯಾಗಿರುತ್ತದೆ.

ಈ ರಸ್ತೆಯು ಈಗಾಲೇ ಮೈಸೂರು ರಸ್ತೆಯ ರಾಜರಾಜೇಶ್ವರಿನಗರ ಕಮಾನು (Arch) ನಿಂದ ಹಲಗೆವಡೇರಹಳ್ಳಿಯವರೆಗೂ ಅಗಲೀಕರಣಗೊಂಡಿದ್ದು, ಹಲಗೆವಡೇರಹಳ್ಳಿಯಿಂದ ಉತ್ತರಹಳ್ಳಿ ರಸ್ತೆಯವರೆಗೂ ಚೈನೇಜ್ 0.00 ಮೀ.ನಿಂದ 2200.00 ಮೀ. ವರೆಗೂ ರಸ್ತೆ ಅಗಲೀಕರಣ

ಕಾಮಗಾರಿಯನ್ನು 2012-13ನೇ ಸಾಲಿನಲ್ಲಿ ನಗರೋತ್ಥಾನ ಯೋಜನೆ ಅಡಿಯಲ್ಲಿ ಕೈಗೊಳ್ಳಲಾಗಿರುತ್ತದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಚೈನೇಜ್ 0.00 ಮೀ.ನಿಂದ 1800.00 ಮೀ.ವರೆಗೂ ಖಿಆಖ ಯೋಜನೆ ಅಡಿಯಲ್ಲಿ ಹಾಗೂ ಹಲಗೆವಡೇರಹಳ್ಳಿ (ಗ್ರಾಮವ್ಯಾಪ್ತಿ) ಪ್ರದೇಶದಲ್ಲಿ ಹೊಸ ಭೂಸ್ವಾಧೀನ ಕಾಯ್ದೆ 2013 ರಂತೆ ನಗದು ಪರಿಹಾರ ರೂಪದಲ್ಲಿ ಖಾಸಗಿ ಸ್ವತ್ತುಗಳನ್ನು ಭೂಸ್ವಾಧೀನ ಪಡಿಸಿಕೊಳ್ಳಲು ಯೋಜನೆಯನ್ನು ರೂಪಿಸಲಾಗಿರುತ್ತದೆ.

ಸದರಿ ರಸ್ತೆ ಅಗಲೀಕರಣಕ್ಕಾಗಿ ಹಲಗೆವಡೇರಹಳ್ಳಿ (ಗ್ರಾಮವ್ಯಾಪ್ತಿ) ಪ್ರದೇಶದಲ್ಲಿ ಹೊಸ ಭೂಸ್ವಾಧೀನ ಕಾಯ್ದೆ 2013 ರಂತೆ ನಗದು ಪರಿಹಾರ ರೂಪದಲ್ಲಿ ಖಾಸಗಿ ಸ್ವತ್ತುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ದಿನಾಂಕ:09-11-2011 ರಂದು ಪ್ರಾಥಮಿಕ ಭೂಸ್ವಾಧೀನ ಅಧಿಸೂಚನೆಯನ್ನು ಹಾಗೂ ದಿನಾಂಕ:05-02-2013 ರಂದು ಅಂತಿಮ ಭೂಸ್ವಾಧೀನ ಅಧಿಸೂಚನೆಯನ್ನು ಹೊರಡಿಸಲಾಗಿ ಅಂತಿಮವಾಗಿ ದಿನಾಂಕ:17-09-2014 ರಂದು ಸಂಖ್ಯೆ:ಕಂಇ/ 114/ಭೂಸ್ವಾಬೆ/2014 ರಂತೆ ಒಟ್ಟು 54929.32 ಚದರಡಿಗಳಷ್ಟು ಭೂಸ್ವಾಧೀನಪಡಿಸಿಕೊಂಡು ಇತರೆ ವೆಚ್ಚಗಳೆಲ್ಲವೂ ಸೇರಿ ಒಟ್ಟು ರೂ.24,26,37,514.00 ಗಳ ಮೊತ್ತವನ್ನು ಖಾಸಗಿ ಭೂಮಾಲೀಕರಿಗೆ ನೀಡಿ ಭೂಸ್ವಾಧೀನಪಡಿಸಿಕೊಳ್ಳಲಾಗಿರುತ್ತದೆ.

ಈ ಮಧ್ಯೆ ಸದರಿ ಭೂಸ್ವಾಧೀನ ಪ್ರಕ್ರಿಯೆಯಿಂದ ಎರಡು ಖಾಸಗಿ ಸ್ವತ್ತುಗಳು ಬಿಟ್ಟು ಹೋಗಿರುವುದು ರಸ್ತೆ ಅಗಲೀಕರಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವ ಸಂದರ್ಭದಲ್ಲಿ ಗುರುತು ಮಾಡಲಾಗಿರುತ್ತದೆ. ಈ ಎರಡು ಸ್ವತ್ತುಗಳು

ಅವಶ್ಯಕವಾಗಿ ರಸ್ತೆ ಅಗಲೀಕರಣ ಕಾಮಗಾರಿಗೆ ಬೇಕಾಗಿರುತ್ತದೆ. ಸದರಿ ಎರಡು ಖಾಸಗಿ ಸ್ವತ್ತುಗಳಿಗಾಗಿ ಮತ್ತೆ ಹೊಸ ಭೂಸ್ವಾಧೀನ ಕಾಯ್ದೆ 2013 ರನ್ವಯ ಕ್ರಮ ಕೈಗೊಳ್ಳಲು ಹೆಚ್ಚಿನ ಸಮಯ ಮತ್ತು ರಸ್ತೆ ಅಗಲೀಕರಣಕ್ಕೆ ಕಾಲ ವಿಳಂಬವಾಗುವುದನ್ನು ತಪ್ಪಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ದತ್ತವಾದ ಕೆ.ಎಂ.ಸಿ. ಕಾಯ್ದೆ 1976ರ ಸೆಕ್ಷನ್ 175 ರ ಅಡಿಯಲ್ಲಿ ಭೂಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಲಾಗಿರುತ್ತದೆ. ಸದರಿ ಖಾಸಗಿ ಸ್ವತ್ತುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ಸಂಖ್ಯೆ: ಕಾ.ಪಾ.ಅ/ಯೋ.ಕೇಂ-02/ಪಿಆರ್/04/2016-17 ದಿನಾಂಕ: 13-04-2016 ರಂತೆ ವಿಶೇಷ ಆಯುಕ್ತರು (ಯೋಜನೆ) ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿ ದಿನಾಂಕ: 05-08-2016 ರಂದು ಇಬ್ಬರು ಖಾಸಗಿ ಭೂಮಾಲೀಕರೊಂದಿಗೆ ದರ ಸಂಧಾನ ಸಭೆಯನ್ನು ನಡೆಸಲಾಗಿ ಸದರಿಯವರು ಕೆಳಕಂಡಂತೆ ದರಗಳನ್ನು ಕೋರಿರುತ್ತಾರೆ.

**ಕೋಷ್ಟಕ - 1**

| ಕ್ರ. ಸಂ | ಖಾಸಗಿ ಭೂಮಾಲೀಕರ ಹೆಸರು | ನಿವೇಶನದ ವಿಸ್ತೀರ್ಣ (ಚ.ಅಡಿ) | 01-04-2016ರ ನೋಂದಣಾಧಿಕಾರಿಗಳ ಮಾರ್ಗಸೂಚಿ ಬೆಲೆಯಂತೆ ಒಟ್ಟು ಭೂಪರಿಹಾರ ಮೊತ್ತ (ರೂ.3301/ ಚ.ಅಡಿಗೆ) |
|---|---|---|---|
| 1 | ಶ್ರೀ ಜಿ.ಕೃಷ್ಣಮೂರ್ತಿ<br>ತಂದೆ ದಿ॥ಗಂಗಣ್ಣ,<br>ಆಸ್ತಿ ಸಂಖ್ಯೆ:1290/119, ಹಲಗೆವಡೇರಹಳ್ಳಿ | 208.47 | 6,88,160.00 |
| 2 | ಶ್ರೀ ಜಿ.ನರಸಿಂಹಮೂರ್ತಿ<br>ತಂದೆ ದಿ॥ಗಂಗಣ್ಣ,<br>ಆಸ್ತಿ ಸಂಖ್ಯೆ:1126, ಹಲಗೆವಡೇರಹಳ್ಳಿ | 237.73 | 7,84,747.00 |
| | **ಒಟ್ಟು ರೂ.** | **446.20** | **14,72,907.00** |

ಸದರಿ ಇಬ್ಬರು ಭೂಮಾಲೀಕರು ಕೋರಿರುವ ದರವನ್ನು ವಿಶ್ಲೇಷಿಸಲಾಗಿ, ಈ ಹಿಂದೆ ದಿನಾಂಕ: 17–09–2014 ರಂದು ಸಂಖ್ಯೆ:ಕಂಇ/114/ಭೂಸ್ವಾಬೆ/2014 ರಂತೆ ಒಟ್ಟು 54929.32 ಚದರಡಿಗಳಷ್ಟು ಭೂಸ್ವಾಧೀನಪಡಿಸಿಕೊಂಡು ಇತರೆ ವೆಚ್ಚಗಳೆಲ್ಲವೂ ಸೇರಿ ಒಟ್ಟು ರೂ.24,26,37,514.00 ಗಳಿಗೆ ಹೋಲಿಸಿದಾಗ 1.00 ಚದರಡಿಗಳಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ರೂ.4407.29 ಗಳಷ್ಟು ವೆಚ್ಚವಾಗಿದ್ದು,

ಭೂಸ್ವಾಧೀನ ವೆಚ್ಚವಷ್ಟೇ ಪರಿಗಣಿಸಿದಾಗ (ಕಟ್ಟಡಗಳನ್ನು ಬಿಟ್ಟು) ಚದರಡಿಗೆ ರೂ.3854.00 ಗಳನ್ನು ನೀಡಲಾಗಿರುತ್ತದೆ. ಈಗ ಖಾಸಗಿ ಭೂಮಾಲೀಕರೊಂದಿಗೆ ನೇರವಾಗಿ ಸಂಧಾನದ ಅಡಿಯಲ್ಲಿ ರೂ.3301.00 ಚದರಡಿಗಳಿಗೆ ಲಭ್ಯವಾಗುತ್ತಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸಾಕಷ್ಟು ಆರ್ಥಿಕ ಉಳಿತಾಯವಾಗಿದ್ದು, ಉಳಿತಾಯದ ಪಟ್ಟಿಯನ್ನು ಕೆಳಕಂಡಂತೆ ತೋರಿಸಲಾಗಿರುತ್ತದೆ.

**ಕೋಷ್ಟಕ – 2**

| ಕ್ರ. ಸಂ | ಖಾಸಗಿ ಭೂಮಾಲೀಕರ ಹೆಸರು | ನಿವೇಶನದ ವಿಸ್ತೀರ್ಣ (ಚ.ಅಡಿ) | 01–04–2016ರ ನೋಂದಣಾಧಿಕಾರಿಗಳ ಮಾರ್ಗಸೂಚಿ ಬೆಲೆಯಂತೆ ಒಟ್ಟು ಭೂಪರಿಹಾರ ಮೊತ್ತ (ರೂ.3301/ ಚ.ಅಡಿಗೆ) | 2013ರ ಭೂಸ್ವಾಧೀನ ಕಾಯ್ದೆಯಂತೆ ಈಗಾಗಲೇ ನೀಡಿರುವ ಭೂಪರಿಹಾರ ಮೊತ್ತ (ರೂ.6602/ ಚ.ಅಡಿಗೆ) | 2013ರ ಭೂಸ್ವಾಧೀನ ಕಾಯ್ದೆ ಮತ್ತು ಭೂಮಾಲೀಕರು ಕೋರಿರುವ ಮೊತ್ತಕ್ಕೆ ಹೋಲಿಸಿದಾಗ ಪಾಲಿಕೆಗೆ ಉಳಿತಾಯವಾಗುವ ಮೊತ್ತ |
|---|---|---|---|---|---|
| 1 | ಶ್ರೀ ಜಿ.ಕೃಷ್ಣಮೂರ್ತಿ ತಂದೆ ದಿ॥ಗಂಗಣ್ಣ, ಆಸ್ತಿ ಸಂಖ್ಯೆ:1290/119, ಹಲಗೆವಡೇರಹಳ್ಳಿ | 208.47 | 6,88,160.00 | 13,76,320.00 | 6,88,160.00 |
| 2 | ಶ್ರೀ ಜಿ.ನರಸಿಂಹಮೂರ್ತಿ ತಂದೆ ದಿ॥ಗಂಗಣ್ಣ, ಆಸ್ತಿ ಸಂಖ್ಯೆ:1126, ಹಲಗೆವಡೇರಹಳ್ಳಿ | 237.73 | 7,84,747.00 | 15,69,494.00 | 7,84,747.00 |
| | **ಒಟ್ಟು ರೂ.** | **446.20** | **14,72,907.00** | **29,45,814.00** | **14,72,907.00** |

ಈ ಹಿನ್ನೆಲೆಯಲ್ಲಿ ಕೋಷ್ಟಕ –1 ರಲ್ಲಿ ತೋರಿಸಿರುವ ಒಟ್ಟು ಭೂಸ್ವಾಧೀನ ವೆಚ್ಚ ರೂ. 14,72,907.00 ಗಳನ್ನು ಬಿಡುಗಡೆ ಮಾಡಲು ಕೋರಿ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿದೆ.

1. ಕೆಂಚೇನಹಳ್ಳಿ ಮುಖ್ಯ ರಸ್ತೆಯನ್ನು ಚೈನೇಜ್ 1800.00 ಮೀ. ನಿಂದ 2200.00 ಮೀ. ವರೆಗೆ 24 ಮೀಟರಿಗೆ ಅಗಲೀಕರಣಗೊಳಿಸಲು ಎರಡು ಖಾಸಗಿ ಭೂಮಾಲೀಕರಿಂದ, ಕೆ.ಎಂ.ಸಿ.ಕಾಯ್ದೆ 1976 ಸೆಕ್ಷನ್ 175 ರಂತೆ, ಮೇಲೆ ತೋರಿಸಿರುವ ಕೋಷ್ಟಕ–(1) ರಂತೆ ಭೂಸ್ವಾಧೀನಪಡಿಸಿಕೊಳ್ಳಲು ಅನುಮೋದನೆ.
2. ಕೆಂಚೇನಹಳ್ಳಿ ಮುಖ್ಯರಸ್ತೆಯನ್ನು ಚೈನೇಜ್ 0.00 ಮೀ. ನಿಂದ 1800.00 ಮೀ. ವರೆಗೆ 24 ಮೀಟರಿಗೆ ರಸ್ತೆ ಅಗಲೀಕರಣದ ಭೂಪರಿಹಾರವನ್ನು ಘನ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿ ಖಾಸಗಿ ಭೂಮಾಲೀಕರಿಗೆ ಹಣ ಪಾವತಿಸಲು ಹಾಗೂ ಉಪ ನೋಂದಣಾಧಿಕಾರಿಗಳು, (ರಾಜರಾಜೇಶ್ವರಿನಗರ) ರವರ ಕಛೇರಿಯಲ್ಲಿ ಭೂಮಿ ನೊಂದಾವಣೆ ಮಾಡಿಕೊಳ್ಳಲು ಮತ್ತು ಖರೀದಿಸಿದ ಭೂಮಿಯನ್ನು ಪಾಲಿಕೆಯ ಕಾಮಗಾರಿ ಇಲಾಖೆಗೆ ಹಸ್ತಾಂತರಿಸಲು ಜಂಟಿ ಆಯುಕ್ತರು(ರಾಜರಾಜೇಶ್ವರಿನಗರ) ರವರನ್ನು ಅಧಿಕೃತಗೊಳಿಸಲು ಅನುಮೋದನೆಯನ್ನು ಕೋರಿದೆ.

ಮೇಲಿನ ಅಂಶಗಳಿಗೆ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ **ದಿನಾಂಕ: 22-03-2017ರ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಒಪ್ಪಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ದಿನಾಂಕ: 12.05.2017ರ ಸಭೆಯ ನಿರ್ಣಯ.**

**-ಮುಂದೂಡಿದೆ-**

### ***44]. ವಿಷಯದ ಸಂಖ್ಯೆ: ತೆಆಸ್ಥಾಸ/41/2017-18***

ಆಯುಕ್ತರ ದಿನಾಂಕ: 04-05-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಮಾನ್ಯ ಅಧ್ಯಕ್ಷರು ಅಪೀಲು ಸ್ಥಾಯಿ ಸಮಿತಿ ಹಾಗೂ ಸ್ಥಳೀಯ ನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಸೀಮಾ ಅಲ್ತಾಫ್ ಖಾನ್ ರವರು ಪತ್ರವನ್ನು ನೀಡಿ ಪಾಲಿಕೆಯ ಬಹುಪಯೋಗಿ ಕಟ್ಟಡದ ನೆಲ ಮಾಳಿಗೆಯು ಖಾಲಿ ಇರುತ್ತದೆ ಅದ್ದರಿಂದ ಜೆ.ಜೆ.ಆರ್ ನಗರ ಸುತ್ತಮುತ್ತಲಿನ ಜನರಿಗೆ ಅಂಚೆ ಕಛೇರಿಯ ಅವಶ್ಯಕತೆ ಇರುವುದರಿಂದ ಸಾರ್ವಜನಿಕರ ಹಿತದೃಷ್ಟಿಯಿಂದ ಪಾಲಿಕೆ ನೆಲ ಮಹಡಿಯಲ್ಲಿ ಬಾಡಿಗೆ ಕರಾರನ್ನು ಮಾಡಿಕೊಂಡು ಅಂಚೆ ಕಛೇರಿಯನ್ನು ತೆರೆಯಲು ಈ ಮೂಲಕ ಕೋರಿರುತ್ತಾರೆ.

ಸಂಬಂಧಪಟ್ಟಂತೆ ಕಂದಾಯ ಇಲಾಖೆಯ ಮತ್ತು ಕಾಮಗಾರಿ ಇಲಾಖೆಯ ಜೆ.ಜೆ.ಆರ್ ನಗರ ಉಪ ವಿಭಾಗ ದವರು ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸಿರುತ್ತಾರೆ.

ಪ್ರಸ್ತಾಪಿತ ಸ್ವತ್ತಿನ ಅಳತೆ 600 ಚದರ ಅಡಿಗಳಾಗಿದ್ದು, 56 ಚದರ ಮೀಟರ್‌ಗಳಾಗಿದ್ದು, ದಿನಾಂಕ: 14-04-2016ರ ಸರ್ಕಾರದ ಮಾರ್ಗಸೂಚಿ ದರದಂತೆ ಚದರ ಮೀಟರ್ 1ಕ್ಕೆ 3400/- ರೂ ವಾಣಿಜ್ಯಕ್ಕೆ ಶೇ. 40% ರಷ್ಟು ಸೇರಿಸಿದಲ್ಲಿ 13600/- ರೂಗಳ ಒಟ್ಟು ಮೊತ್ತ ಚದರ ಮೀಟರ್ 1ಕ್ಕೆ 4760 ರೂ. ಗಳಾಗಿರುತ್ತದೆ. 56 ಚದರ ಮೀಟರ್‌ಗಳಿಗೆ ಸ್ವತ್ತಿನ ಮಾರುಕಟ್ಟೆ ಮೌಲ್ಯ 2,66,560 ಶೇ. 10% ರಂತೆ ಪರಿಗಣಿಸಿದಲ್ಲಿ ವಾರ್ಷಿಕ 26,656.00/- ರೂಗಳು ಮಾಸಿಕ 2,665.60/- (2665/-)ರೂ.ಗಳಾಗುತ್ತದೆ.

ಕರ್ನಾಟಕ ಮುನ್ಸಿಪಲ್ ಕಾಯ್ದೆ 1976ರ ಕಲಂ 176 ಹಾಗೂ 176 ರ (6) ಹಾಗೂ (ಬಿ) ಪ್ರಕಾರ ಸದರಿ ಸ್ವತ್ತನ್ನು ನೀರಿಕ್ಷಕರು ಅಂಚೆ ಕಛೇರಿ ಬೆಂಗಳೂರು ದಕ್ಷಿಣ ರವರಿಗೆ ನಾಗರಿಕರ ಅನುಕೂಲಕ್ಕಾಗಿ ಅಂಚೆ ಕಚೇರಿಯನ್ನು ತೆರೆಯಲು ವಾರ್ಡ್ ಸಂಖ್ಯೆ: 136ರ ಪಾಲಿಕೆ ಕಟ್ಟಡದ ನೆಲ ಮಹಡಿಯ 600 ಚದರ ಅಡಿಗಳ ಕಟ್ಟಡವನ್ನು ಮಂಜೂರು ಮಾಡುವ ಸಂಬಂಧ ಮುಂದಿನ ಸೂಕ್ತ ನಿರ್ಣಯಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಾಸಿಕ ಸಭೆಯಲ್ಲಿ ಅನುಮೋದನೆ ಪಡೆಯಬೇಕಾಗಿದ್ದು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಸಭೆ ಮುಂದೆ ಮಂಡಿಸಿರುವ **ದಿನಾಂಕ: 04-05-2017ರ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಒಪ್ಪಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ದಿನಾಂಕ: 12.05.2017ರ ಸಭೆಯ ನಿರ್ಣಯ.**

**ನಿರ್ಣಯ: ಆಯುಕ್ತರ ದಿನಾಂಕ: 04.05.2017ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

### ***45]. ವಿಷಯದ ಸಂಖ್ಯೆ: ತೆಆಸ್ಥಾಸ/42/2017-18***

ಆಯುಕ್ತರ ದಿನಾಂಕ: 22-04-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ನಂ:97 (ಹಳೇ ನಂ:24), ಸ್ವತ್ತಿನ ನಂ:1, 7ನೇ ಅಡ್ಡರಸ್ತೆ, ಶ್ರೀರಾಮಪುರ, ಹರಿಜನ ಕಾಲೋನಿಯಲ್ಲಿರುವ 30*80=2880 ಚ.ಅ.ಗಳ ಸ್ವತ್ತನ್ನು ಪಾಲಿಕೆಯ ವತಿಯಿಂದ ಅಧ್ಯಕ್ಷರು,

ಆರುಂಧತಿ ವಿವಿದ್ಧೋದ್ದೇಶ ಸಂಘದವರಿಗೆ ದಿನಾಂಕ: 28.10.2011 ರಿಂದ 5–ವರ್ಷಗಳ ಅವಧಿಗೆ ವಾರ್ಷಿಕ ಗುತ್ತಿಗೆ ಮೊತ್ತ ರೂ.2000/– ಆಧಾರದ ಮೇಲೆ ಗುತ್ತಿಗೆಗೆ ನೀಡಲಾಗಿದ್ದು, ಸದರಿ ಗುತ್ತಿಗೆ ಅವಧಿಯು ದಿನಾಂಕ: 28.10.2016ಕ್ಕೆ ಮುಕ್ತಾಯಗೊಂಡಿರುತ್ತದೆ.

ಸದರಿ ಸಂಸ್ಥೆಯವರು ಮೇಲ್ಕಂಡ ಜಾಗವನ್ನು ಅಭಿವೃದ್ಧಿಪಡಿಸಿ ಬಹಳ ವರ್ಷಗಳ ಹಿಂದೆಯೇ ಶ್ರೀ ವಿದ್ಯಾಗಣಪತಿ ದೇವಸ್ಥಾನ, ನವಗ್ರಹ, ಶ್ರೀ ಶಿರಡಿಸಾಯಿ ಬಾಬಾರವರ ದೇವಸ್ಥಾನವನ್ನು ನಿರ್ಮಿಸಲಾಗಿದ್ದು, ಬಡ ಜನರಿಗೆ ನಿತ್ಯ ಅನ್ನ ಬ್ರಹ್ಮ ವಿದ್ಯಾ ಶಾರದೆ ಅಡಿಯಲ್ಲಿ ಇಸ್ಕಾನ್ ವತಿಯಿಂದ ಊಟವನ್ನು ಏರ್ಪಡಿಸಲಾಗಿರುತ್ತದೆ. ಕನ್ನಡ ಕಲಿಯುವಿಕೆ, ಬಡ ಮಕ್ಕಳಿಗೆ ವಿದ್ಯಾದಾನ ವೈದ್ಯಕೀಯ ಪರೀಕ್ಷೆ, ಮಕ್ಕಳಿಗಾಗಿ ಲೆಕ್ಕ ಕಲಿಯಲು ಐ.ಕ್ಯೂಬ್ ಸಂಸ್ಥೆಯನ್ನು ಸ್ಥಾಪಿಸಿದ್ದು, ಹಾಗೂ ಗಾಂಧಿ ಜಯಂತಿ, ಕನ್ನಡ ರಾಜ್ಯೋತ್ಸವ, ಅಂಬೇಡ್ಕರ್ ಜಯಂತಿ, ಬಸವ ಜಯಂತಿ ಇತರೆ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬಂದಿರುತ್ತಾರೆ.

ಸದರಿ ಸಂಸ್ಥೆಯವರು ಗುತ್ತಿಗೆಯ ಮೊತ್ತವನ್ನು ಇಲ್ಲಿಯವರೆಗೂ ಪಾವತಿ ಮಾಡಿರುತ್ತಾರೆ. ಗುತ್ತಿಗೆ ಅವಧಿಯನ್ನು ನವೀಕರಿಸುವಂತೆ ಕೋರಿ ಅರ್ಜಿ ಸಲ್ಲಿಸಿದ್ದು, ಗುತ್ತಿಗೆ ಅವಧಿಯನ್ನು ಮುಂದುವರೆಸುವ ಸಂಬಂಧವಾಗಿ ಸದರಿ ಸ್ಥಳದ ಇಂದಿನ ಪ್ರಸಕ್ತ ಮಾರುಕಟ್ಟೆ ದರವು ಚ.ಅ.ಒಂದಕ್ಕೆ ರೂ.1989/–ಗಳಿದ್ದು, ಸದರಿ ಸ್ವತ್ತಿನ ಒಟ್ಟು ವಿಸ್ತೀರ್ಣ 36*80=2880 ಚ.ಅ.ಗಳಾಗಿದ್ದು, ಅದರಂತೆ, ಲೆಕ್ಕಾಚಾರ ಮಾಡಲಾಗಿ ಸ್ವತ್ತಿನ ಒಟ್ಟು ಮೌಲ್ಯ ರೂ.57,28,320/– ಅದರಲ್ಲಿ ಶೇ.10% ರಂತೆ ಪರಿಗಣಿಸಲಾಗಿ, ವಾರ್ಷಿಕ ಗುತ್ತಿಗೆ ಮೌಲ್ಯವು ರೂ.5,72,832/– ಮಾಸಿಕ ಗುತ್ತಿಗೆ ಮೊತ್ತವು ರೂ.47,736/– ಗಳಾಗುತ್ತದೆ. ಸದರಿ ಸಂಸ್ಥೆಯು ಸಾಮಾಜಿಕ ಕಾರ್ಯ ಚಟುವಟಿಕೆಗಳನ್ನು ನಡೆಸುತ್ತಿರುವ ಕಾರಣ, ರಿಯಾಯಿತಿ ದರದಲ್ಲಿ ಗುತ್ತಿಗೆಯ ಮೊತ್ತವನ್ನು ನಿಗಧಿಪಡಿಸಲು ದಿನಾಂಕ: 01–03–2002 ರ ಪಾಲಿಕೆಯ ಸುತ್ತೋಲೆಯ ಪ್ರಕಾರ ಅಂಗವಿಕಲರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ.100%ರಷ್ಟು ಸಮಾಜಸೇವೆ ಸಲ್ಲಿಸುತ್ತಿರುವ ಸಂಘ–ಸಂಸ್ಥೆಗಳಿಗೆ ಮತ್ತು ಧರ್ಮದತ್ತಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಮಾನ್ಯ ಆಯುಕ್ತರು ನಿರ್ಧರಿಸುವರು ಎಂಬುದಾಗಿ ಇರುತ್ತದೆ.

ಕರ್ನಾಟಕ ಮುನಿಸಿಪಲ್ ಕಾಯ್ದೆ ಅನ್ವಯ 1976 ಕಲಂ 176ರ (6) ಹಾಗೂ (ಬಿ)2 ಪ್ರಕಾರ 1–ವರ್ಷಕ್ಕೆ ಗುತ್ತಿಗೆ ನೀಡುವ ಅಧಿಕಾರ ಮಾನ್ಯ ಆಯುಕ್ತರಿಗೆ ಇರುತ್ತದೆ. ನಗರ ಯೋಜನೆ ಮತ್ತು ಅಭಿವೃದ್ಧಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆಯೊಡನೆ 3–ವರ್ಷಗಳ ಅವಧಿಗೆ ಮೀರದಂತೆ ಗುತ್ತಿಗೆ ನೀಡಲು ಅವಕಾಶವಿರುತ್ತದೆ. ಈ ಸ್ಥಾಯಿ ಸಮಿತಿಗಳು ಮತ್ತು ಮಹಾನಗರ ಪಾಲಿಕೆಯ ಸಭೆಯ ಅನುಮೋದನೆಯೊಡನೆ 5–ವರ್ಷಗಳ ಅವಧಿಗೆ ಮೀರದಂತೆ ಗುತ್ತಿಗೆ ನಿಡಲು ಅವಕಾಶವಿರುತ್ತದೆ ಗುತ್ತಿಗೆ ಅವಧಿಯು 5–ವರ್ಷಗಳಿಗಿಂತ ಹೆಚ್ಚಿಗೆ ಇದ್ದಲ್ಲಿ ಸರ್ಕಾರದ ಅನುಮೋದನೆ ಅವಶ್ಯವಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ನಅಇ 129 ಟಿ.ಎಂ.ಡಿ. 2002, ದಿನಾಂಕ:02–06–2003 ರ ಪ್ರಕಾರ ನಗರ ಸ್ಥಳೀಯ ಸಂಸ್ಥೆಯು ತಮ್ಮ ಅಧಿಕಾರಗಳನ್ನು ಉಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದಲ್ಲಿ, ಇಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮುಖಾಂತರವೇ ನೀಡುವುದು ಎಂಬುದಾಗಿರುತ್ತದೆ.

ಈ ಮೇಲ್ಕಂಡ ಅಂಶಗಳನ್ನು ಪರಿಗಣಿಸಿ ಗುತ್ತಿಗೆಯನ್ನು ಸದರಿ ಸಂಸ್ಥೆಯವರಿಗೆ 5–ವರ್ಷದ ಅವಧಿಗೆ ಕರಾರು ಪತ್ರ ನೊಂದಾಯಿಸಿದ ದಿನಾಂಕದಿಂದ ಗುತ್ತಿಗೆಯನ್ನು ನವೀಕರಿಸುವ ಸಂಬಂಧವಾಗಿ ಗುತ್ತಿಗೆ ಹಣವನ್ನು ನಿಗಧಿಪಡಿಸಿ ಕರಾರು ನೊಂದಾಯಿಸಿರುವ ದಿನಾಂಕದಿಂದ 5–ವರ್ಷಗಳ ಅವಧಿಗೆ ನವೀಕರಿಸಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ **ದಿನಾಂಕ: 22.04.2017ರ ಮಾನ್ಯ ಆಯುಕ್ತರ ಟಿಪ್ಪಣೆಯನ್ನು ಪರಿಶೀಲಿಸಲಾಗಿ ಆರುಂಧತಿ ವಿವಿದೋದ್ದೇಶ ಸಂಘರವರಿಗೆ ಗುತ್ತಿಗೆ ನವೀಕರಿಸುವ ಗುತ್ತಿಗೆ**

**ಅವಧಿಯನ್ನು ನವೀಕರಿಸುವ ಪ್ರಸ್ತಾವನೆಯನ್ನು ಒಪ್ಪಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ದಿನಾಂಕ: 12.05.2017ರ ಸಭೆಯ ನಿರ್ಣಯ.**

**ನಿರ್ಣಯ: ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯು ಗುತ್ತಿಗೆ ಅವಧಿಯನ್ನು ನವೀಕರಿಸಲು ತೀರ್ಮಾನಿಸಿರುವುದನ್ನು ಪರಿಗಣಿಸಿ, ಗುತ್ತಿಗೆ ಮೊತ್ತ ರೂ.10,000/- (ಹತ್ತು ಸಾವಿರ ಮಾತ್ರ) ಗಳನ್ನು ನಿಗಧಿಪಡಿಸಲು ಸಮಿತಿಯು ತೀರ್ಮಾನಿಸಿತು.**

## *461. ವಿಷಯದ ಸಂಖ್ಯೆ: ತೆಆಸ್ಥಾಸ/43/2017-18*

ಆಯುಕ್ತರ ದಿನಾಂಕ: 20-05-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶ್ರೀ.ಮುನೇಶ್ವರಸ್ವಾಮಿ ಮತ್ತು ಶ್ರೀ.ಶನೇಶ್ವರಸ್ವಾಮಿ (ರಿ) ಟ್ರಸ್ಟ್ ಅಧ್ಯಕ್ಷರಾದ ಶ್ರೀ.ಎಂ.ಅಶ್ವಥನಾರಾಯಣ ರವರು ದಿನಾಂಕ: 29-09-2012 ರಂದು ಬಿಬಿಎಂಪಿ ವಾರ್ಡ್-105ರ ಮಾನ್ಯ ಸದಸ್ಯರಾದ ಶ್ರೀಮತಿ.ರೂಪಾದೇವಿ ವಿಜಯಕುಮಾರ್ ರವರಿಗೆ ಸಲ್ಲಿಸಿರುವ ಮನವಿಯಲ್ಲಿ ತಮ್ಮ ಟ್ರಸ್ಟನ್ನು 2008-09ನೇ ಸಾಲಿನಲ್ಲಿ ನೊಂದಾಯಿಸಲಾಗಿದ್ದು, ಸುಮಾರು 40-ವರ್ಷಗಳಿಂದ ದೇವಸ್ಥಾನದಲ್ಲಿ ಧಾರ್ಮಿಕ ಕಾರ್ಯಕ್ರಮಗಳನ್ನು ನಾಗರೀಕರಿಗೆ ನಡೆಸಿಕೊಂಡು ಬಂದಿದ್ದು, ದೇಶದ ಧರ್ಮ ಮತ್ತು ಶಾಂತಿಯುತ ಸಮಾಜಕ್ಕೆ ಸ್ಮಾರಕವಾಗಿ ಹಲವಾರು ರೀತಿ ಉಪಯೋಗ ನೆರೆವೇರಿಸಿಕೊಂಡು ಬಂದಿರುವುದಾಗಿಯೂ ಹಾಗೂ ಸದರಿ ಆಸ್ತಿ ಸಂಖ್ಯೆ:5/1 ಪಾಲಿಕೆಯ ಸ್ವತ್ತಾಗಿರುವುದರಿಂದ ಸಾರ್ವಜನಿಕರಿಗೆ ಅನುಕೂಲಕರ ಉಪಯುಕ್ತ ಕಾರ್ಯಗಳನ್ನು ಮಾಡುತ್ತಾ ಬಂದಿದ್ದು, ತಮ್ಮ ಟ್ರಸ್ಟ್ ಹಲವಾರು ರೀತಿ ಸಾರ್ವಜನಿಕ ಉಪಯೋಗ ಧಾರ್ಮಿಕ ಕೆಲಸ ಕಾರ್ಯ ಮಾಡುತ್ತಿರುವ ಹಿನ್ನೆಲೆ ಬಿಬಿಎಂಪಿ ವತಿಯಿಂದ ಗುತ್ತಿಗೆ ಆಧಾರ ಸ್ವತ್ತನ್ನು ಕಾನೂನಿನ್ವಯ ನೊಂದಾಯಿಸಿಕೊಡಲು ಕೋರಿರುತ್ತಾರೆ. ಇದೇ ಟ್ರಸ್ಟ್ (ರಿ) ರವರಿಗೆ ನಿಯಮಾನುಸಾರ ವಹಿಸಿಕೊಡಲು ಶಿಫಾರಸ್ಸು ಪತ್ರ ನೀಡಿರುತ್ತಾರೆ. ಹಿಂದಿನ ವಸತಿ ಸಚಿವರು, ಕರ್ನಾಟಕ ಸರ್ಕಾರ ಮಾನ್ಯ ಶ್ರೀ.ವಿ.ಸೋಮಣ್ಣ ರವರು ಸಹ ಶಿಫಾರಸ್ಸು ಪತ್ರವನ್ನು ನೀಡಿದ್ದು, 5ನೇ ಅಡ್ಡರಸ್ತೆ, 4ನೇ ಮುಖ್ಯರಸ್ತೆ, ಅಗ್ರಹಾರ ದಾಸರಹಳ್ಳಿಯಲ್ಲಿರುವ ಬಿಬಿಎಂಪಿ ಜಾಗವನ್ನು ಪೂಜ್ಯ ಮಹಾಪೌರರು ಕೂಡ ಅರ್ಜಿದಾರರ ಟ್ರಸ್ಟ್ ರವರಿಗೆ ಸ್ಥಳವನ್ನು ಗುತ್ತಿಗೆ ಆಧಾರ ನೀಡುವಲ್ಲಿ ನಿಯಮಾನುಸಾರ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಕೋರಿರುತ್ತಾರೆ.

ಸದರಿ ವಿಷಯವಾಗಿ ದಿ: 28-10-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ನಡೆದ ಬಿಬಿಎಂಪಿಯ ವಿಷಯದ ಸಂಖ್ಯೆ:102/2013-14 ಸಭಾ ನಿರ್ಣಯದಲ್ಲಿ ವಾರ್ಡ್-105ರ ವ್ಯಾಪ್ತಿಯ 5ನೇ ಕ್ರಾಸ್, 4ನೇ ಮೈನ್ 'ಎ' ಬ್ಲಾಕ್ ಅಗ್ರಹಾರ ದಾಸರಹಳ್ಳಿ ಬೆಂಗಳೂರು ಈ ಸ್ವತ್ತಿನಲ್ಲಿ ನಗರ ಪಾಲಿಕೆಯ ಟೈಲರಿಂಗ್ ಸೆಂಟರ್, ಅಂಗನವಾಡಿ ಕೇಂದ್ರ ಮತ್ತು ಈ ಜಾಗಕ್ಕೆ ಹೊಂದಿಕೊಂಡಂತೆ ಇರುವ ಪಾಲಿಕೆ ಜಾಗದಲ್ಲಿ ಸುಮಾರು 50*28 ಅಡಿಗಳ ಜಾಗದಲ್ಲಿ ಶ್ರೀ.ಶನೇಶ್ವರ ಹಾಗೂ ಮುನೇಶ್ವರ ದೇವಸ್ಥಾನಗಳಿದ್ದು, ಸದರಿ ಜಾಗವನ್ನು ದೇವಸ್ಥಾನದ ಉಸ್ತುವಾರಿ ನಡೆಸುತ್ತಿರುವ ಶ್ರೀ.ಮುನೇಶ್ವರ ದೇವಾಲಯ ಟ್ರಸ್ಟ್ (ರಿ) ರವರಿಗೆ ಗುತ್ತಿಗೆ ಆಧಾರದ ಮೇಲೆ ನೀಡಲು ಸೂಕ್ತ ಪ್ರಸ್ತಾವನೆಯನ್ನು ಸಭೆಗೆ ಮಂಡಿಸಲು ಆಯುಕ್ತರವರು ಕ್ರಮಕೈಗೊಳ್ಳುವುದೆಂದು ತೀರ್ಮಾನವಾಗಿರುತ್ತದೆ.

ವಲಯಾಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ನೀಡಿರುವ ವರದಿಯಂತೆ ಟ್ರಸ್ಟ್ ರವರು ಕೋರಲಾದ ಜಾಗವು ಪಾಲಿಕೆ ಜಾಗವಾಗಿದ್ದು, ಆಸ್ತಿ ಸಂಖ್ಯೆ:46 ಎಂಬುದಾಗಿದ್ದು, ಒಟ್ಟು 4120 ಚದರಡಿಗಳಲ್ಲಿ ನಗರ ಪಾಲಿಕೆಯ ಟೈಲರಿಂಗ್ ಸೆಂಟರ್ ಮತ್ತು ಅಂಗನವಾಡಿ ಕೇಂದ್ರವನ್ನು 2720 ಚದರಡಿಗಳ ಕಟ್ಟಡದಲ್ಲಿ ನಡೆಸಲಾಗಿರುತ್ತದೆ. ಉಳಿದ 1400 ಚದರಡಿಗಳಲ್ಲಿ ದೇವಾಲಯದಲ್ಲಿ ಟ್ರಸ್ಟ್ (ರಿ) ರವರು ದೇವಸ್ಥಾನ

ನಿರ್ಮಿಸಿ ಪೂಜೆ ಪುರಸ್ಕಾರಗಳನ್ನು ನಡೆಸುತ್ತಿದ್ದು, ಟ್ರಸ್ಟ್ ರವರು ಗುತ್ತಿಗೆ ಕೋರುತ್ತಿರುವ ಜಾಗವು ಕಾಮಗಾರಿ ಇಲಾಖೆಯ ಅಭಿಪ್ರಾಯದಂತೆ ಪಾಲಿಕೆಯು ಯಾವುದೇ ಯೋಜನೆ ರೂಪಿಸಿಲ್ಲವಾಗಿದ್ದು ಮತ್ತು ಕಂದಾಯ ಇಲಾಖೆಯ ಯಾವುದೇ ಉಪಯೋಗಕ್ಕೆ ಸದ್ಯದಲ್ಲಿ ಅವಶ್ಯಕತೆ ಇಲ್ಲದ ಕಾರಣ, ಶ್ರೀ.ಮುನೇಶ್ವರ ದೇವಾಲಯ ಟ್ರಸ್ಟ್ (ರಿ) ರವರಿಗೆ ಗುತ್ತಿಗೆ ಆಧಾರದ ಮೇಲೆ ಬಿಬಿಎಂಪಿ ಆಸ್ತಿ ಸಂಖ್ಯೆ:46, 4ನೇ ಅಡ್ಡರಸ್ತೆ, ಅಗ್ರಹಾರ ದಾಸರಹಳ್ಳಿ ವಾರ್ಡ್–105 ರಲ್ಲಿನ ಸ್ವತ್ತಿನಲ್ಲಿನ ಉತ್ತರ ಭಾಗದ ಅಳತೆ 50ಥ28 ಅಡಿಗಳು 1400 ಚದರಡಿಗಳ ಜಾಗ ಮತ್ತು ಅದರಲ್ಲಿರುವ ದೇವಸ್ಥಾನವನ್ನು ಶ್ರೀ.ಶನೇಶ್ವರಸ್ವಾಮಿ ಮತ್ತು ಮುನೇಶ್ವರ ದೇವಾಲಯ ಟ್ರಸ್ಟ್ (ರಿ) ರವರಿಗೆ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡಬಹುದೆಂದು ವರದಿಸಿರುತ್ತಾರೆ.

ಕರ್ನಾಟಕ ಮುನಿಸಿಪಲ್ ಕಾಯ್ದೆ 1976ರ ಕಲಂ 176ರ (6) ಹಾಗೂ (ಬಿ) 2 ಪ್ರಕಾರ 1 ವರ್ಷಕ್ಕೆ ಗುತ್ತಿಗೆ ನೀಡುವ ಅಧಿಕಾರ ಆಯುಕ್ತರಿಗೆ, 3 ವರ್ಷಗಳವರೆಗೂ ಗುತ್ತಿಗೆ ನೀಡುವ ಅಧಿಕಾರವು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, 5 ವರ್ಷದವರೆಗೂ ಗುತ್ತಿಗೆ ನೀಡುವ ಅಧಿಕಾರವು ಮಹಾನಗರ ಪಾಲಿಕೆಯ ಸಭೆಗೆ ಇರುತ್ತದೆ. ಗುತ್ತಿಗೆ ಅವಧಿಯು 5 ವರ್ಷಗಳಿಗಿಂತ ಹೆಚ್ಚಿಗೆ ಇದ್ದಲ್ಲಿ ಘನ ಸರ್ಕಾರಕ್ಕೆ ಅಧಿಕಾರವಿರುತ್ತದೆ.

**ಘನ ಸರ್ಕಾರವು ಆದೇಶ ಸಂಖ್ಯೆ: ನಅಇ 129 ಟಿ.ಎಂ.ಡಿ 2002 ದಿನಾಂಕ:02–06–2003 ರಲ್ಲಿ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನುಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದಲ್ಲಿ ಅಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮುಖಾಂತರವೇ ನೀಡುವುದು ಎಂದು ಆದೇಶಿಸಿರುತ್ತದೆ.**

ಪ್ರಸ್ತಾಪಿತ ಸ್ವತ್ತಿನ ಅಳತೆ 50ಥ28 ಅಡಿಗಳಾಗಿದ್ದು, ಒಟ್ಟು 1400 ಚದರಡಿಗಳಾಗಿದ್ದು, ದಿನಾಂಕ:12–08–2014ರ ಮಾರ್ಗಸೂಚಿ ದರದಂತೆ ಚದರಡಿ 1ಕ್ಕೆ 4000/– ರೂ ಗಳಿದ್ದು, ಒಟ್ಟು 1400ಥ4000=56,00,000/– ರೂ ಗಳಾಗುತ್ತದೆ. ಸ್ವತ್ತಿನ ಮೌಲ್ಯದ ಶೇ 10% ರಂತೆ ಪರಿಗಣಿಸಿದಲ್ಲಿ, **ವಾರ್ಷಿಕ 5,60,000/– ರೂ ಗಳು ಮಾಸಿಕ ರೂ.46,667/– ಗಳಾಗುತ್ತದೆ.**

ಜಂಟಿ ಆಯುಕ್ತರು (ಪಶ್ಚಿಮ) ರವರು ಪ್ರಸ್ತುತ ಸದರಿ ಜಾಗವನ್ನು ದಿ:02–06–2003ರ ಸರ್ಕಾರಿ ಆದೇಶದಂತೆ ಹರಾಜು ಮುಖಾಂತರ ಗುತ್ತಿಗೆ ನೀಡಲು ಸಾಧ್ಯವಾಗುವುದಿಲ್ಲ. ಕಾರಣ, ಸದರಿ ಸ್ಥಳದಲ್ಲಿ ಈಗಾಗಲೇ ದೇವಸ್ಥಾನದ ಕಟ್ಟಡಗಳಿದ್ದು, ದೇವಾಲಯಗಳು ಕ್ರಿಯಾತ್ಮಕವಾಗಿ ನಡೆಯುತ್ತಿದ್ದು, ನೂರಾರು ಭಕ್ತರು ದಿನನಿತ್ಯ ಪೂಜೆಗೆ ಹಾಗೂ ಪ್ರದಕ್ಷಣೆಗೆ ಬಂದು ಹೋಗುತ್ತಿರುವುದರಿಂದ ಬಹಿರಂಗ ಹರಾಜಿನ

ಮೂಲಕ ವಿಲೇವಾರಿ ಮಾಡುವುದು ಕಷ್ಟಸಾಧ್ಯವಾಗುತ್ತದೆ. ಸಲುವಾಗಿ ಪ್ರಸ್ತುತ ಮಾರುಕಟ್ಟೆ ದರವನ್ನು ಅನುಸರಿಸಿ ಸದರಿ ಟ್ರಸ್ಟಿನವರ ಕೋರಿಕೆಯಂತೆ 30 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಬೇಕೆಂದು ಕೋರಿರುವುದರಿಂದ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟಕ್ಕೆ ಕಳುಹಿಸಬೇಕಾಗಿರುತ್ತದೆ ಎಂದು ಅಭಿಪ್ರಾಯಿಸಿರುತ್ತಾರೆ.

ಆದುದರಿಂದ, ಶ್ರೀ.ಮುನೇಶ್ವರಸ್ವಾಮಿ ಮತ್ತು ಶ್ರೀ.ಶನೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್ ರವರ ಹೆಸರಿಗೆ ಪ್ರಸ್ತಾಪಿತ ಸ್ವತ್ತನ್ನು ಗುತ್ತಿಗೆಗೆ ನೀಡುವ ಬಗ್ಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಪಾಲಿಕೆ ಸಭೆಯ ಮುಂದೆ ಟಿಪ್ಪಣಿಯನ್ನು ಮಂಡಿಸಲಾಗಿದೆ.

ಈ ಬಗ್ಗೆ ವಿಷಯ ಸಂಖ್ಯೆ:ನಯೋಅಸ್ಥಾಸ/87/2014–15, ದಿ:13–01–2015 ರಂದು ನಡೆದ ಸಭೆಯ ನಡವಳಿಯಲ್ಲಿ **ಪ್ರಸ್ತುತ ಮಾರುಕಟ್ಟೆ ದರವನ್ನು ಅನುಸರಿಸಿ ಟ್ರಸ್ಟಿನವರ ಕೋರಿಕೆಯಂತೆ 30 ವರ್ಷಗಳ ಅವಧಿಗೆ ಸರ್ಕಾರದ ಅನುಮೋದನೆ ಪಡೆದು ಗುತ್ತಿಗೆ ನೀಡಬಹುದೆಂದು ಸಮಿತಿಯು ತೀರ್ಮಾನಿಸಿರುತ್ತದೆ.**

ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ವಿಷಯ ಸಂಖ್ಯೆ:ತೆಆಸ್ಥಾಸ/118/14-15, ದಿ:16-02-2015ರ ನಡವಳಿಯಲ್ಲಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿ:13-01-2015ರ ನಿರ್ಣಯವನ್ನು ಒಪ್ಪುತ್ತಾ, **ರೂ.1000/- ಗಳಿಗೆ ಬಾಡಿಗೆ ನಿಗಧಿಪಡಿಸಿ 30 ವರ್ಷಗಳ ಅವಧಿಗೆ ಗುತ್ತಿಗೆ ನೀಡುವುದೆಂದು ಸಮಿತಿಯು ತೀರ್ಮಾನಿಸಿರುತ್ತದೆ.** ಪಾಲಿಕೆಯ ಸಭೆಯ ವಿಷಯ ಸಂಖ್ಯೆ:01(360)14-15 ದಿ:27-02-2015ರ ನಿರ್ಣಯದಲ್ಲಿ ದಿನಾಂಕ:16-02-2015ರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಗಿರುತ್ತದೆ.

ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಆರ್ಥಿಕ ಸ್ಥಾಯಿ ಸಮಿತಿ ನಿರ್ಣಯದ ಪ್ರತಿ ಹಾಗೂ ಬಿಬಿಎಂಪಿ ಸಭೆಯ ನಡವಳಿಯನ್ನು ಲಗತ್ತಿಸಿ, ಸಕ್ಷಮ ಪ್ರಾಧಿಕಾರವಾದ ಘನ ಸರ್ಕಾರದಲ್ಲಿ ಸೂಕ್ತ ತೀರ್ಮಾನಕ್ಕಾಗಿ ಸಲ್ಲಿಸಲಾಗಿ, ಸರ್ಕಾರವು ತನ್ನ ಆದೇಶ ಸಂಖ್ಯೆ: ನಅಇ 183 ಎಂಎನ್‌ಜಿ 2016, ಬೆಂಗಳೂರು ದಿನಾಂಕ: 25.02.2017 ರಂದು ಸರ್ಕಾರದ ಆದೇಶ ಸಂಖ್ಯೆ: ನಅಇ 129 ಟಿಎಂಡಿ 2002, ದಿ: 02.06.2003 ರಲ್ಲಿ ಹರಾಜಿನ ಮೂಲಕ ವಿಲೇವಾರಿ ಮಾಡಬೇಕೆಂಬ ನಿಬಂಧನೆಯನ್ನು ಸಡಿಲಿಸಿ ವಾರ್ಡ್ ನಂ:105ರ 5ನೇ ಅಡ್ಡರಸ್ತೆ, 4ನೇ ಮುಖ್ಯರಸ್ತೆ 'ಎ' ಬ್ಲಾಕ್ ಅಗ್ರಹಾರ ದಾಸರಹಳ್ಳಿಯಲ್ಲಿ 50x28 ಅಡಿಗಳ ಜಾಗವನ್ನು ಶ್ರೀ ಶನೇಶ್ವರ ಹಾಗೂ ಶ್ರೀ ಮುನೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್ (ರಿ) ರವರಿಗೆ ದೇವಸ್ಥಾನದ ಜಾಗವನ್ನು ಧಾರ್ಮಿಕ ಉದ್ದೇಶಕ್ಕಾಗಿ ಮಾತ್ರ ಬಳಸಬೇಕೆಂಬ ಷರತ್ತಿನೊಂದಿಗೆ ಮಾಸಿಕ ಗುತ್ತಿಗೆ ದರ ತಿಂಗಳಿಗೆ 1000/- ರೂ.ಗಳಂತೆ ನಿಗಧಿಪಡಿಸಿ 30-ವರ್ಷಗಳ ಅವಧಿಗೆ ಅನುಮೋದನೆ ನೀಡಿದೆ.

ಆದುದರಿಂದ, ಸರ್ಕಾರದ ಆದೇಶವನ್ನು ಸ್ಥಾಯಿ ಸಮಿತಿಗಳು ಹಾಗೂ ಬಿಬಿಎಂಪಿ ಸಭೆ ಮುಂದೆ ದಾಖಲಾತಿಗಾಗಿ ಮಂಡಿಸಿರುವ **ಆಯುಕ್ತರ ದಿನಾಂಕ: 20-05-2017ರ ಟಿಪ್ಪಣಿಯನ್ನು ಒಪ್ಪಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ದಿನಾಂಕ: 25.05.2017ರ ಸಭೆಯ ನಿರ್ಣಯ..**

**ನಿರ್ಣಯ: ಆಯುಕ್ತರ ದಿನಾಂಕ: 20.5.2017ರ ಟಿಪ್ಪಣಿಯನ್ನು ಒಪ್ಪುತ್ತಾ, ದಾಖಲಾತಿಗಾಗಿ ಪಾಲಿಕೆ ಸಭೆಯ ಮುಂದೆ ಮಂಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## *47]. ವಿಷಯದ ಸಂಖ್ಯೆ: ತೆಆಸ್ಥಾಸ/44/2017-18*

ಆಯುಕ್ತರ ದಿನಾಂಕ: 29.05.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಈ ಹಿಂದೆ ವಿವಿಧ ಬ್ಯಾಂಕ್‌ಗಳಿಂದ ಬೆಂಗಳೂರಿನ ಸರ್ವತೋಮುಖ ಅಭಿವೃದ್ಧಿ ಉದ್ದೇಶಗಳಿಗೆ ಅವಶ್ಯಕವಾದ ಹಣವನ್ನು ಹೊಂದಿಸಿಕೊಳ್ಳಲು ಹುಡ್ಕೋ ಸಂಸ್ಥೆ ವತಿಯಿಂದ ಒಟ್ಟು 6 ಸಂಖ್ಯೆಯ ಸಾಲಗಳನ್ನು ಆಯಾ ಅವಧಿಯಲ್ಲಿ ಚಾಲ್ತಿಯಲ್ಲಿದ್ದ 10.25% ದರದಲ್ಲಿ, ಮತ್ತೊಂದು ಸಾಲವನ್ನು ಬೇರೆ ಬ್ಯಾಂಕ್‌ಗಳಿಂದ Swap ಮೂಲಕ ಪಡೆದ ನಿಗಧಿತ 10.15% ದರದಲ್ಲಿ ಪಡೆಯಲಾಗಿರುತ್ತದೆ. ಪ್ರಸ್ತುತ ಒಟ್ಟಾರೆ ಸಾಲ ರೂ.1348.00 ಕೋಟಿ ಅಸಲು ಮೊತ್ತ ಪಾವತಿಗೆ ಬಾಕಿ ಉಳಿದಿರುತ್ತದೆ.

ಈ ಬಡ್ಡಿದರಗಳು ಪ್ರಸ್ತುತ ಇರುವ ಮಾರುಕಟ್ಟೆ ದರಗಳಿಗೆ ಹೋಲಿಸಿದಾಗ ಅತೀ ಹೆಚ್ಚಾಗಿರುವುದು ಕಂಡುಬಂದಿರುತ್ತದೆ. ಇದನ್ನು ಕುರಿತು ಹುಡ್ಕೋ ಸಂಸ್ಥೆಗೆ ಪತ್ರ ಬರೆದು ಬಡ್ಡಿದರ ಕಡಿಮೆ ಮಾಡಲು ಕೋರಲಾಗಿತ್ತು. ಸದರಿ ಸಂಸ್ಥೆಯು ಮೇಲೆ ಪ್ರಸ್ತಾಪಿಸಿದ 6 ಸಾಲಗಳಿಗೆ ಮಾತ್ರ ಶೇ.9.5 ಬಡ್ಡಿದರ ಮಾತ್ರ ನೀಡಿರುತ್ತದೆ. ಬೇರೆ ಬ್ಯಾಂಕ್‌ಗಳಿಂದಲೂ ಸಹ ದರಪಟ್ಟಿ ಆಹ್ವಾನಿಸಲಾಗಿ, ಒಟ್ಟು 11 ವಾಣಿಜ್ಯ

ಬ್ಯಾಂಕ್‌ಗಳು ಸ್ಪರ್ಧಾತ್ಮಕ ಚಾಲ್ತಿಯಲ್ಲಿರುವ ಬಡ್ಡಿದರಗಳು ಹಾಗೂ ಷರತ್ತು/ನಿಬಂಧನೆಗಳನ್ನು ಸಲ್ಲಿಸಿದ್ದು, ಇವುಗಳ ತುಲನಾತ್ಮಕ ಪಟ್ಟಿಯನ್ನು ತಯಾರಿಸಿ ಸಮಿತಿಯ ವರದಿಯ ಅನುಬಂಧ–1 ರಲ್ಲಿ ಲಗತ್ತಿಸಿದೆ. ಸದರಿ ತುಲನಾತ್ಮಕ ಪಟ್ಟಿಯನ್ನು ಹೋಲಿಸಿದಾಗ ಹೆಚ್.ಡಿ.ಎಫ್.ಸಿ ಬ್ಯಾಂಕ್ ಮಾತ್ರ ಕಡಿಮೆ ಬಡ್ಡಿದರ ಶೇ.8.15 ನೀಡಿರುತ್ತದೆ. ಸದರಿ ಬಡ್ಡಿ ದರವನ್ನು ಆಧರಿಸಿ ಸಮಿತಿಯು ವರದಿ ನೀಡಿದ್ದು, ಸಂಕ್ಷಿಪ್ತ ವಿವರ ಈ ಕೆಳಕಂಡಂತಿದೆ.

ಹುಡ್ಕೋ ಮತ್ತು 11 ವಾಣಿಜ್ಯ ಬ್ಯಾಂಕ್‌ಗಳು ಸಲ್ಲಿಸಿರುವ ದರಗಳು ಮತ್ತು ಷರತ್ತು/ನಿಬಂಧನೆಗಳ ಜೊತೆಗೆ ಪಾಲಿಕೆಗೆ ಆಗುವ ಲಾಭ/ನಷ್ಟಗಳನ್ನು ಪರಿಶೀಲಿಸಲು ಆಯುಕ್ತರ ಅನುಮೋದನೆಯೊಂದಿಗೆ ಒಂದು ತಜ್ಞರ ಸಮಿತಿಯನ್ನು ರಚಿಸಲಾಗಿರುತ್ತದೆ. ತಜ್ಞರ ಸಮಿತಿಯ ವರದಿಯನ್ನು ಇದರೊಂದಿಗೆ ಲಗತ್ತಿಸಿದೆ.

**ತಜ್ಞರ ಸಮಿತಿಯು ಪರಿಶೀಲಿಸಿ ನೀಡಿರುವ ಶಿಫಾರಸ್ಸು ಈ ಕೆಳಕಂಡಂತಿದೆ :**

- 6 ಸಂಖ್ಯೆಯ ಸಾಲಗಳಾದ – ಲೋನ್ ಅಕೌಂಟ್–20040, 20060, 20153, 20160, 20232 ಮತ್ತು 20336 ಇವುಗಳನ್ನು ವರ್ಗಾವಣೆ (Swap) ಮಾಡಲು ಶಿಫಾರಸ್ಸು ಮಾಡಲಾಗಿರುತ್ತದೆ.
- ಮತ್ತೊಂದು ಸಾಲವಾದ – ಲೋನ್ ಅಕೌಂಟ್–20939 ನ್ನು ಹುಡ್ಕೋ ಸಂಸ್ಥೆಯಲ್ಲಿಯೇ ಮುಂದುವರೆಯಲು ಸಹಾ ಶಿಫಾರಸ್ಸು ಮಾಡುತ್ತಾ, ಇದನ್ನು ವರ್ಗಾವಣೆ (Swap) ಮಾಡಿದಲ್ಲಿ ಪಾಲಿಕೆಗೆ ರೂ.4.34 ಕೋಟಿ ನಷ್ಟ ಸಂಭವಿಸುತ್ತದೆ ಎಂದು ತಿಳಿಸಿರುತ್ತಾರೆ. ಕಾರಣ – ಸಂಸ್ಥೆಯು Pre closure charges & mortgage charges ಆಗಿ ಸುಮಾರು ರೂ.9.39 ಕೋಟಿ ಪಾವತಿಸಬೇಕಾಗುತ್ತದೆ.
- 6 ಸಾಲಗಳನ್ನು ವರ್ಗಾವಣೆ (Swap) ಮಾಡುವುದರಿಂದ ಪಾಲಿಕೆಗೆ ಈ ಕೆಳಕಂಡಂತೆ ಬಡ್ಡಿ ರೂಪದಲ್ಲಿ ಉಳಿತಾಯವಾಗುತ್ತದೆ.

1) ಸಾಲವನ್ನು ಮಾಹೆಯಾನ ಮರುಪಾವತಿಸಿದಲ್ಲಿ – ರೂ.124.90 ಕೋಟಿ ಬಡ್ಡಿ ರೂಪದಲ್ಲಿ ಉಳಿತಾಯವಾಗುತ್ತದೆ.
2) ಸಾಲವನ್ನು ತ್ರೈಮಾಸಿಕ ಅವಧಿಯಲ್ಲಿ ಮರುಪಾವತಿಸಿದಲ್ಲಿ – ರೂ.118.20 ಕೋಟಿ ಬಡ್ಡಿ ರೂಪದಲ್ಲಿ ಉಳಿತಾಯವಾಗುತ್ತದೆ.

- ಈ ಸಂಬಂಧದಲ್ಲಿ ಹುಡ್ಕೋ ಸಂಸ್ಥೆಯನ್ನು ಪ್ರಸ್ತುತ ಇರುವ ಸಾಲಕ್ಕೆ ಚಾಲ್ತಿಯಲ್ಲಿರುವ 9.5% ಬಡ್ಡಿ ದರದಲ್ಲಿ ಒದಗಿಸಲು ಕೋರಲಾಗಿ, 6 ಸಾಲಗಳಿಗೆ ವಿಧಿಸುತ್ತಿರುವ ಬಡ್ಡಿದರವನ್ನು 9.5% ಕ್ಕೆ ಕಡಿಮೆ ಮಾಡಲು ಒಪ್ಪಿರುತ್ತದೆ. ಆದರೆ ಲೋನ್ ಅಕೌಂಟ್ – 20939 ಗೆ ಮಾತ್ರ 10.15% ಬಡ್ಡಿದರವನ್ನು ಸದ್ಯಕ್ಕೆ ಮುಂದುವರೆಸಿದ್ದು, 9.5% ಬಡ್ಡಿದರ ನಿರೀಕ್ಷಿಸಲಾಗಿದೆ.
- ಸಮಿತಿಯ ಶಿಫಾರಸ್ಸಿನೊಂದಿಗೆ ಸಲ್ಲಿಸಿರುವ ಎಲ್ಲಾ 13 ಬ್ಯಾಂಕ್‌ಗಳ ಬಡ್ಡಿದರ ಮತ್ತು ಷರತ್ತು/ ನಿಬಂಧನೆಗಳನ್ನು ಪರಿಶೀಲಿಸಲಾಗಿ ಹೆಚ್.ಡಿ.ಎಫ್.ಸಿ. ಬ್ಯಾಂಕ್ ಸಲ್ಲಿಸಿರುವ ವಾರ್ಷಿಕ ದರ 8.15% ಇದ್ದು, ಇದು ಇತರೆ ಬ್ಯಾಂಕ್‌ಗಳಿಗಿಂತ ಕಡಿಮೆ ಬಡ್ಡಿದರವಾಗಿದ್ದು ಹಾಗೂ ಹುಡ್ಕೋ ಸಂಸ್ಥೆಯವರಿಗಿಂತ ಸಹಾ ಕಡಿಮೆ ಬಡ್ಡಿದರವಾಗಿರುತ್ತದೆ.
- ಇದರಿಂದ ಪಾಲಿಕೆಗೆ ತ್ರೈಮಾಸಿಕ ಕಂತಿನಲ್ಲಿ ಮರು ಪಾವತಿ ಮಾಡಿದ್ದಲ್ಲಿ ರೂ.118.20 ಕೋಟಿ ಉಳಿತಾಯವಾಗುತ್ತದೆ. ಹಾಗೂ ಮಾಸಿಕ ಕಂತಿನಲ್ಲಿ ಮರು ಪಾವತಿ ಮಾಡಿದ್ದಲ್ಲಿ ರೂ.124.90 ಕೋಟಿಗಳ ಉಳಿತಾಯವಾಗಲಿದ್ದು, ಅನುಮೋದಿಸಬಹುದಾಗಿದೆ.

ಈ ಮೇಲಿನ ಎಲ್ಲಾ ಅಂಶಗಳು ಹಾಗೂ ತಜ್ಞರ ಸಮಿತಿಯ ಶಿಫಾರಸ್ಸನ್ನು ಪರಿಗಣಿಸಿ, ಒಟ್ಟು ಬಾಕಿ ಸಾಲದ ಮೊತ್ತ ರೂ.1348.00 ಕೋಟಿಯನ್ನು ಹುಡ್ಕೋ ಸಂಸ್ಥೆಯಿಂದ ಹೆಚ್.ಡಿ.ಎಫ್.ಸಿ. ಬ್ಯಾಂಕ್‌ಗೆ ವರ್ಗಾಯಿಸುವ ಬಗ್ಗೆ ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಟಿಪ್ಪಣಿ ಮಂಡಿಸಲಾಗಿದೆ.

**–ಮುಂದೂಡಿದೆ–**

## ***48]. ವಿಷಯದ ಸಂಖ್ಯೆ: ತೆಆಸ್ಥಾಸ/45/2017-18***

ಆಯುಕ್ತರ ದಿನಾಂಕ: 24.05.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಸರ್ಕಾರದ ಆದೇಶ ಸಂಖ್ಯೆ: ನಅಇ 104 ಎಂಎನ್‌ಜಿ 2013, ದಿನಾಂಕ: 13-10-2014 ರಲ್ಲಿ ಆದೇಶ ಹೊರಡಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಿಫಾರಸ್ಸಿನಂತೆ ವಾರ್ಡ್ ನಂ: 154ರ ಬಸವನಗುಡಿ, 1ನೇ ಮುಖ್ಯರಸ್ತೆ, ಎನ್.ಆರ್.ಕಾಲೋನಿ, ಅಂಗಡಿ ಬೀದಿ ಮಧ್ಯ ಇರುವ 130x60 ಅಡಿಗಳ ಪಾಲಿಕೆಯ ಸ್ವತ್ತನ್ನು ಸಾರ್ವಜನಿಕರಿಗೆ ಸಾರಿಗೆ ಮೂಲ ಸೌಕರ್ಯಗಳನ್ನು ಒದಗಿಸಲು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ಮಾರಾಟ ಮಾಡಲು ಈ ಕೆಳಕಂಡ ಷರತ್ತುಗಳನ್ನು ವಿಧಿಸಿ ಸರ್ಕಾರದ ಅನುಮೋದನೆ ನೀಡಲಾಗಿರುತ್ತದೆ.

1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿದ ವಾರ್ಡ್ ಸಂಖ್ಯೆ: 154ರ ಬಸವನಗುಡಿ ಒಂದನೇ ಮುಖ್ಯರಸ್ತೆಯ ಎನ್.ಆರ್.ಕಾಲೋನಿ ಅಂಗಡಿ ಬಿದಿ ಮಧ್ಯೆ ದೇಶಿಯ ವ್ಯಾಯಾಮ ಶಾಲೆಯವರಿಗೆ ಗುತ್ತಿಗೆಗೆ ನೀಡಿದ್ದ ಸ್ವತ್ತನ್ನು ಹಿಂಪಡೆದು ಸದರಿ ಸ್ವತ್ತನ್ನು ಶೇ 50% ರ ಮಾರುಕಟ್ಟೆ ದರದಲ್ಲಿ ಅಂದರೆ, ರೂ.1,75,50,000/- (ಒಂದು ಕೋಟಿ ಎಪ್ಪತ್ತೈದು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ) ಗಳಿಗೆ ಸರ್ಕಾರಿ ಸ್ವಾಮ್ಯದ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ಮಾರಾಟ ಮಾಡಲು,
2. ಸದರಿ ನಿವೇಶನದಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ತನ್ನ ವೆಚ್ಚದಲ್ಲಿ ಮೂರು ಮಹಡಿಗಳ ಕಟ್ಟಡವನ್ನು ನಿರ್ಮಿಸಿ ಕೆಳ ಅಂತಸ್ತಿನಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಿ, ನೆಲ ಮಹಡಿಯ ಪ್ರದೇಶವನ್ನು ಬಸ್ ನಿಲ್ದಾಣವಾಗಿ ಒಂದನೇ ಮಹಡಿ ಪ್ರದೇಶವನ್ನು ಉಪಯೋಗಿಸಿಕೊಳ್ಳಲು ಹಾಗೂ 2ನೇ ಮಹಡಿಯ ಪ್ರದೇಶವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಉಭಯತ್ರರು ಕೂಡಿ ನಿಗದಿಪಡಿಸಿದ ದರಕ್ಕೆ ಗುತ್ತಿಗೆಗೆ ನೀಡಲು,
3. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಪಾಲಿಕೆಗೆ ಗುತ್ತಿಗೆಗೆ ನೀಡುವ ಸದರಿ ಎರಡನೇ ಮಹಡಿ ಕಟ್ಟಡವನ್ನು ಸರ್ಕಾರದ ಆದೇಶ ಸಂಖ್ಯೆ:ನಅಇ 129 ಟಿಎಂಡಿ 2002 ದಿನಾಂಕ:02-06-2003ರ ಕಂಡಿಕೆ (5) ಅನ್ನು ಸಡಿಲಿಸಿ ದೇಶಿಯ ವ್ಯಾಯಾಮ ಶಾಲೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಗುತ್ತಿಗೆಗೆ ನೀಡಲು,

ಮುಂದುವರೆದು ಸರ್ಕಾರ ಆದೇಶ ಸಂಖ್ಯೆ: ನಅಇ 104 ಎಂಎನ್‌ಜಿ 2013 ದಿನಾಂಕ: 13-10-2014ರ ಆದೇಶದ ಕ್ರಮ ಸಂಖ್ಯೆ: 2 ರಂತೆ ಎರಡನೇ ಮಹಡಿ ಪ್ರದೇಶವನ್ನು ದೇಶಿಯ ವ್ಯಾಯಾಮ ಶಾಲೆಗೆ ಮಾಹೆಯಾನ ರೂ.4,45,875/- ಗಳಂತೆ ಬಾಡಿಗೆಯನ್ನು ಪಾಲಿಕೆಯ ನಿಗದಿಪಡಿಸಿದ್ದು, ತದನಂತರ ದಿನಾಂಕ: 16-11-2016ರ ಆದೇಶದಲ್ಲಿ ದಿನಾಂಕ: 13-10-2014ರ ಆದೇಶವನ್ನು ಭಾಗಶ: ಮಾರ್ಪಡಿಸಿ, ಮಹಾನಗರ ಸಾರಿಗೆ ಸಂಸ್ಥೆಯವರಿಗೆ ಮಾರಾಟ ಮಾಡಲು ನಿಗಧಿಪಡಿಸಿರುವ ರೂ.1,75,50,000/- ಮೊತ್ತವನ್ನು ಮನ್ನಾ ಮಾಡಿ ಮಾಸಿಕ ರೂ.25,000/- ಗಳ ಬಾಡಿಗೆ ಮೊತ್ತವನ್ನು ನಿಗಧಿಪಡಿಸಿ ಕರಾರು ನೊಂದಾಯಿಸುವ ದಿನಾಂಕದಿಂದ 10 ವರ್ಷಗಳ ಅವಧಿಗೆ ಗುತ್ತಿಗೆ ನೀಡಲು ಆದೇಶಿಸಿದೆ.

ಈ ಮಧ್ಯೆ ಬಿ.ಎಸ್.ಸತ್ಯನಾರಾಯಣ (ಕಟ್ಟೆ ಸತ್ಯ) ಮಾಜಿ ಮಹಾಪೌರರು, ಹಾಲಿ ಪಾಲಿಕೆ ಸದಸ್ಯರು ವಾರ್ಡ್-154 ರವರು ದಿನಾಂಕ: 15-04-2017 ರಂದು ಮಾನ್ಯ ಆಯುಕ್ತರಿಗೆ ಮನವಿ ಸಲ್ಲಿಸಿ ದೇಶಿಯ ಆಡಳಿತ ಮಂಡಳಿಯು ನಾಗರೀಕ ಅನುಕೂಲಕ್ಕಾಗಿ 2ನೇ ಮಹಡಿಯಲ್ಲಿ ವ್ಯಾಯಾಮ ಶಾಲೆ ನಡೆಸುತ್ತಿದ್ದು,

ಈ ವ್ಯಾಯಾಮ ಶಾಲೆಯು ಸುಮಾರು 50-60 ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದು, ಬೆಂಗಳೂರಿಗೆ ಹಳೆಯದಾದ ಗುರುಪರಂಪರೆಯುಳ್ಳ ವ್ಯಾಯಾಮ ಶಾಲೆಯಾಗಿದ್ದು, ಇಲ್ಲಿಗೆ ಬರುವವರು ಮಧ್ಯಮ ಹಾಗೂ ಕೆಳ ಮಧ್ಯಮದಿಂದ ಬರುವಂತಹ ಯುವಕರಾಗಿದ್ದು, ಅವರುಗಳಿಂದ ದುಬಾರಿ ಶುಲ್ಕ ವಸೂಲಿ ಮಾಡಲು ಆಗದ ಕಾರಣ ಮಹಾನಗರ ಸಾರಿಗೆ ಸಂಸ್ಥೆಯವರಿಗೆ ಮಾರಾಟ ಮಾಡಲು ನಿಗಧಿಪಡಿಸಿದ್ದ ಮೊತ್ತ ರೂ.1,75,50,000/- ಗಳನ್ನು ಸರ್ಕಾರವು ಮನ್ನಾ ಮಾಡಿರುವಂತೆ ಮಾಸಿಕ ರೂ.25,000/-

ಗಳನ್ನು ಸಹ ಮನ್ನಾ ಮಾಡುವಂತೆ ಕೋರಿರುವ ಮೇರೆಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ತೀರ್ಮಾನಕ್ಕಾಗಿ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ: ಆಯುಕ್ತರ ದಿನಾಂಕ: 24.05.2017ರ ಟಿಪ್ಪಣಿಯನ್ನು ಒಪ್ಪುತ್ತಾ, ಮಾಸಿಕ ಗುತ್ತಿಗೆ ರೂ.10,000/– (ಹತ್ತು ಸಾವಿರ) ಗಳನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## *49]. ವಿಷಯದ ಸಂಖ್ಯೆ: ತೆಆಸ್ಥಾಸ/46/2017–18*

ಆಯುಕ್ತರ ದಿನಾಂಕ: 18.04.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಕರ್ನಾಟಕ ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ – 2013 ಅಧ್ಯಾಯ – III ಪ್ರಕಾರ ಅನುಸೂಚಿತ ಜಾತಿಗಳ ಉಪ–ಯೋಜನೆ ಹಾಗೂ ಬುಡಕಟ್ಟು ಉಪ–ಯೋಜನೆ ನಿಧಿ ಹಾಗೂ ಸ್ಕೀಮುಗಳಿಗಾಗಿ ಯೋಜನೆ ರೂಪಿಸುವುದು, ಸಂಪನ್ಮೂಲದ ಹಂಚಿಕೆ ಬಗ್ಗೆ ಸ್ಪಷ್ಟಪಡಿಸಲಾಗಿರುತ್ತದೆ. ಅದರಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪರಿಶಿಷ್ಟ ಜಾತಿ/ಪಂಗಡ (SC-SP/TSP) ವರ್ಗದವರಿಗೆ ಸಂಬಂಧಿಸಿದಂತೆ ಆಯವ್ಯಯದಲ್ಲಿ ಒದಗಿಸಿದ ಅನುದಾನಕ್ಕೆ ಅನುಗುಣವಾಗಿ ಪ್ರತಿ ವರ್ಷ ಕಲ್ಯಾಣ ಇಲಾಖೆಯಿಂದ ಕ್ರಿಯಾಯೋಜನೆ ರೂಪಿಸಿ, ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿರುತ್ತದೆ.

ಶೇ24.10% ಕಾರ್ಯಕ್ರಮಗಳಿಗೆ (ಕಾಮಗಾರಿ ಬಿಲ್ಲುಗಳನ್ನು ಹೊರತುಪಡಿಸಿ) ಸಂಬಂಧಿಸಿದಂತೆ ಅನುದಾನ ಬಿಡುಗಡೆಗೊಳಿಸಲು ವಲಯ ಉಪ ನಿಯಂತ್ರಕರು (ಹಣಕಾಸು)ರವರ ಮೂಲಕ ಕೇಂದ್ರ ಕಛೇರಿಗೆ ಪ್ರಸ್ತಾವನೆಗಳನ್ನು ಸಲ್ಲಿಸುತ್ತಿದ್ದು, ಅದರಂತೆ ಕೇಂದ್ರ ಕಛೇರಿಯಲ್ಲಿ ಪರಿಶೀಲಿಸಿ, ಸಕ್ಷಮ ಪ್ರಾಧಿಕಾರದ ಅನುಮೋದನೆ ಮೇರೆಗೆ ಅನುದಾನವನ್ನು ವಲಯ ಉಪ ನಿಯಂತ್ರಕರು(ಹಣಕಾಸು) ರವರಿಗೆ ಬಿಡುಗಡೆ ಮಾಡಲಾಗುತ್ತಿರುತ್ತದೆ.

ಪಾಲಿಕೆಯಲ್ಲಿ ಪರಿಶಿಷ್ಟ ಜಾತಿ/ಪಂಗಡ (SC-SP/TSP) ದವರಿಗೆ ಆಯವ್ಯಯದಲ್ಲಿ ಮೀಸಲಿರಿಸಿದ ಅನುದಾನವನ್ನು ಸಮರ್ಪಕವಾಗಿ ಬಳಕೆ ಮಾಡಿಕೊಂಡು ಯೋಜನೆಗಳನ್ನು ತ್ವರಿತವಾಗಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿರುತ್ತದೆ. ಆದ್ದರಿಂದ ಆಯಾ ವಲಯದ ಉಪ ನಿಯಂತ್ರಕರು (ಹಣಕಾಸು) ರವರ ಕಛೇರಿಯಲ್ಲಿ ಆಯುಕ್ತರವರ ಹೆಸರಿನಲ್ಲಿ ಈ ಯೋಜನೆಗೆ ಒಂದು ಪ್ರತ್ಯೇಕ ಉಳಿತಾಯ ಖಾತೆಯನ್ನು ಕೆನರಾ ಬ್ಯಾಂಕ್‌ನಲ್ಲಿ ತೆರೆಯಲು ಸೂಚಿಸಲಾಗಿದೆ.

ಈ ಕುರಿತಂತೆ ಹೊಸದಾಗಿ ಬ್ಯಾಂಕ್ ಖಾತೆ ತೆರೆಯಲು ಅನುಮೋದನೆ ನೀಡುವ ಅಧಿಕಾರವು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಪ್ರದತ್ತವಾಗಿದ್ದು, ಈ ಬಗ್ಗೆ ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಟಿಪ್ಪಣಿ ಮಂಡಿಸಲಾಗಿದೆ.

**–ಮುಂದೂಡಿದೆ–**

## *50]. ವಿಷಯದ ಸಂಖ್ಯೆ: ತೆಆಸ್ಥಾಸ/47/2017–18*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 06.06.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ದಕ್ಷಿಣ ವಲಯ ವ್ಯಾಪ್ತಿಯ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಕೆಂಪೇಗೌಡನಗರ ಉಪವಿಭಾಗದ ಪಾಲಿಕೆ ಸುಂಕೇನಹಳ್ಳಿ ವಾರ್ಡ್ ಸಂಖ್ಯೆ: 142 ಸಂಬಂಧಿಸಿದಂತೆ ಈ ಕೆಳಕಂಡ ಕಾಮಗಾರಿಗೆ ಚಿಕ್ಕಪೇಟೆ ಶಾಸಕರಾದ ಮಾನ್ಯ ಶ್ರೀ. ಆರ್.ವಿ.ದೇವರಾಜ್ ರವರು 2016–17ರ

ಲೆಕ್ಕಶೀರ್ಷಿಕೆ ಪಿ–0055 ಅಡಿ ಕೊರತೆ ಅನುದಾನ ರೂ.9.00 ಲಕ್ಷಗಳನ್ನು ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡುವಂತೆ ಕೋರಿರುತ್ತಾರೆ.

| ಕ್ರಮ ಸಂಖ್ಯೆ | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| 1 | Dismantling of Deviation Portion of building at site #.68, (Old No.5), Shankar mutt main road, K.G.Nagar, Bangalore in ward No.142. PID No.49-54-69-8 | 9.00 |

ಮುಂದುವರೆದಂತೆ ಸದರಿ ತೆರವುಗೊಳಿಸವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳಬೇಕಾಗಿರುವುದರಿಂದ 2016–17ರ ಪರಿಷ್ಕೃತ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ–0055 ಅಡಿ ಕೊರತೆ ಅನುದಾನ ರೂ.7.35 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಪ್ರಕರಣವು ಘನ ನ್ಯಾಯಾಲಯದಲ್ಲಿ ಬಾಕಿ ಇರುವ ಬಗ್ಗೆ ಪರಿಶೀಲಿಸಿ, ಸೂಕ್ತ ಸ್ಪಷ್ಟೀಕರಣದೊಂದಿಗೆ ಸಮಿತಿಯ ಮುಂದೆ ಮರುಮಂಡಿಸಲು ಕಡತವನ್ನು ಹಿಂತಿರುಗಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## ***ಹೆಚ್ಚುವರಿ ವಿಷಯಗಳು:–***

### ***51]. ವಿಷಯದ ಸಂಖ್ಯೆ: ತೆಆಸ್ಥಾಸ/48/2017–18***

ಆಯುಕ್ತರ ದಿನಾಂಕ: 09.06.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೆಂಗಳೂರು ನಗರ ಕನ್ನಡ ಜಿಲ್ಲಾ ಸಾಹಿತ್ಯ ಪರಿಷತ್ತು (ರಿ) ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು 560 018 ರವರು 10ನೇ ಮಹಿಳಾ ಕನ್ನಡ ಸಮ್ಮೇಳನವನ್ನು ದಿನಾಂಕ: 14, 15 ಅಕ್ಟೋಬರ್ 2016 ರಂದು ಸರ್ ಪುಟ್ಟಣ್ಣಶೆಟ್ಟಿ ಪುರಭವನ ಜೆ.ಸಿ.ರಸ್ತೆ, ಬೆಂಗಳೂರು ಸಭಾಂಗಣದಲ್ಲಿ ನಡೆಸಲಾಗಿದ್ದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಸಹಾಯಧನ ಕೋರಿ ಮನವಿ ಸಲ್ಲಿಸಿರುತ್ತಾರೆ.

ಈ ಸಂಬಂಧವಾಗಿ ಸದರಿ ಸಂಸ್ಥೆಯವರ ಕೋರಿಕೆಯಂತೆ 2016–17ನೇ ಸಾಲಿನ ಅನುಮೋದಿತ ಆಯವ್ಯಯದಲ್ಲಿ ಸಂಘ/ಸಂಸ್ಥೆಗಳಿಗೆ ಪಿ–ಕೋಡ್ 0048ರ ಕೊಡುಗೆಗಳು ಮತ್ತು ಸಹಾಯಧನದ ಅಡಿಯಲ್ಲಿ ಮೊತ್ತ ರೂ.500.00 (ಐದುನೂರು) ಲಕ್ಷಗಳನ್ನು ಮೀಸಲಿರಿಸಿದ್ದು, ಮುಖ್ಯಲೆಕ್ಕಾಧಿಕಾರಿಗಳ ಕಛೇರಿಯ ವರದಿಯನ್ನು ಪರಿಶೀಲಿಸಲಾಗಿ ಕಂಡಿಕೆ (47)ರಲ್ಲಿ ಉಪನಿಯಂತ್ರಕರು (ಹಣಕಾಸು) ರವರು 2016–17ನೇ ಸಾಲಿನ ಆಯವ್ಯಯವು ಮುಗಿದಿರುವುದರಿಂದ 2017–18ನೇ ಸಾಲಿನಲ್ಲಿ ಪರಿಗಣಿಸಲು ಸೂಚಿಸಿರುವ ಮಾಹಿತಿಯನ್ನು ತಮ್ಮ ಗಮನಕ್ಕೆ ತರುತ್ತಾ ಸದರಿ ಸಂಸ್ಥೆಯವರ ಕೋರಿಕೆಯಂತೆ 2017–18ನೇ ಸಾಲಿನ ಆಯವ್ಯಯದಲ್ಲಿ ಸದರಿ ಸಂಸ್ಥೆಯವರು ಕೋರಿರುವ ಮೊತ್ತ ರೂ.10.00 (ಹತ್ತು) ಲಕ್ಷಗಳನ್ನು ಮಂಜೂರು ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಸದರಿ ಸಂಸ್ಥೆಗೆ ರೂ.5.00 (ರೂ. ಐದು ಲಕ್ಷ ಮಾತ್ರ) ಲಕ್ಷಗಳ ಸಹಾಯ ಧನವನ್ನು ಮಂಜೂರು ಮಾಡಲು ಸಮಿತಿಯು ತೀರ್ಮಾನಿಸಿತು.**

## *52]. ವಿಷಯದ ಸಂಖ್ಯೆ: ತೆಆಸ್ಥಾಸ/49/2017-18*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 13.06.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪಶ್ಚಿಮ ವಲಯಕ್ಕೆ ಸೇರಿರುವ ವಾರ್ಡ್-27 (ಹೊಸ ವಾರ್ಡ್ ಸಂಖ್ಯೆ: 94) ರಲ್ಲಿ ಕಾಮಗಾರಿಯಾದ Providing CC to Footpath and improvements to Drain at Acharya Tulasi Marga Road and surroundings ನಲ್ಲಿ ಪ್ರಸ್ತಾಪಿತ ಕಾಮಗಾರಿಗೆ ರೂ.49.80 ಲಕ್ಷಗಳಿಗೆ ಜಾಬ್‌ಕೋಡ್ (027-09-M-G-E-R-AS-016) ನೀಡಲಾಗಿರುತ್ತದೆ. ಈ ಕಾಮಗಾರಿಗೆ ಅಂದಾಜು ಪಟ್ಟಿಯನ್ನು 2008-09ನೇ ಸಾಲಿನ ದರಪಟ್ಟಿಯ ದರಗಳನ್ನು ಅಳವಡಿಸಿ ತಯಾರಿಸಲಾಗಿರುತ್ತದೆ.

| Sl No | Zone | Ward No. | Name of work | Est cost (In Lakhs) | Job code |
|---|---|---|---|---|---|
| 1 | West | 27 (New Ward No.94) | Providing CC to Footpath and improvements to Drain at Acharya Tulasi Marga Road and surroundings | 49.80 | (027-09-M-G-E-R-AS-016) |

ಮೇಲ್ಕಾಣಿಸಿದ ಕಾಮಗಾರಿಗೆ ಮುಖ್ಯ ಅಭಿಯಂತರರು ರವರು ಕಾಮಗಾರಿ ಸಂಕೇತ ಪುನರ್ ನವೀಕರಣ ಮಾಡುವ ಬಗ್ಗೆ ಪ್ರಸ್ತಾವನೆ ಸಲ್ಲಿಸಿದ್ದು ಸದರಿ ಪ್ರಸ್ತಾವನೆಯ ಬಗ್ಗೆ ಮುಖ್ಯ ಅಭಿಯಂತರರು ಜಾಗೃತಕೋಶ ರವರು ಪರಿಶೀಲಿಸಿ ವರದಿಯಲ್ಲಿ ಸೂಚಿಸಿರುವಂತೆ ಸದರಿ ಕಾಮಗಾರಿಯ 2009-10ನೇ ಸಾಲಿನಲ್ಲಿ ಕಾರ್ಯದೇಶವನ್ನು ನೀಡಿರುವುದರಿಂದ ಹಾಗೂ ಪ್ರಶ್ನಿತ ಕಾಮಗಾರಿಯು ಸಿ.ಐ.ಡಿ ಇಲಾಖೆ ತನಿಖೆಗೆ ಒಳಪಟ್ಟಿರುವ ಅಥವಾ ಒಳಪಡೆದೆ ಇರುವ ಬಗ್ಗೆ ಸಿ.ಐ.ಡಿ ಇಲಾಖೆಯಿಂದ ಖಚಿತ ಪಡಿಸಿಕೊಂಡು ನಿಯಮಾನುಸಾರ ಮುಂದಿನ ಕ್ರಮಕೈಗೊಳ್ಳ ಬಹುದಾಗಿರುತ್ತದೆಂದು ಅಭಿಪ್ರಾಯಿಸಿದ್ದು, ಅದರಂತೆ ಸಿ.ಐ.ಡಿ ಇಲಾಖೆಯವರೊಂದಿಗೆ ವ್ಯವಹರಿಸಲಾಗಿದ್ದು, ಸಂಬಂಧಪಟ್ಟ ಪೋಲೀಸ್ ಉಪಾಧ್ಯಕ್ಷಕರು / ತನಿಖಾಧಿಕಾರಿ ಸಿ.ಐ.ಡಿ ಬೆಂಗಳೂರು ರವರು ಉಲ್ಲೇಖ (1)ರ ಅಡಿಯಲ್ಲಿ ಸದರಿ ಕಾಮಗಾರಿಯು ಸಿ.ಐ.ಡಿ ತನಿಖೆಗೆ ಒಳಪಟ್ಟಿರುವ 285 ಕಾಮಗಾರಿಗಳ ಪಟ್ಟಿಯಲ್ಲಿ ಇರುವುದಿಲ್ಲವೆಂದು ತಿಳಿಸಿ ಕಾರ್ಯಪಾಲಕ ಅಭಿಯಂತರರು ರವರಿಗೆ ಪತ್ರ ಬರೆದಿರುತ್ತಾರೆ.

ಸದರಿ ಪ್ರಸ್ತಾವನೆ ಅನುದಾನ ಲಭ್ಯತೆಯ ಬಗ್ಗೆ ಹಾಗೂ ಕಾಮಗಾರಿ ಸಂಕೇತವನ್ನು ಪುನರ್ ನವೀಕರಣ ಮಾಡುವ ಬಗ್ಗೆ ಮುಖ್ಯ ಆರ್ಥಿಕ ಅಧಿಕಾರಿಗಳು ಈ ಕೆಳಕಂಡಂತೆ ಅಭಿಪ್ರಾಹಿಸಿರುತ್ತಾರೆ.

1) 2017-18ರ ಸಾಲಿನ ಆಯವ್ಯಯವು ಸರ್ಕಾರದಿಂದ ಅನುಮೋದನೆಯಾಗಬೇಕಾಗಿರುತ್ತದೆ.
2) ಪಿ-2650 ರ ಮುಂದುವರೆದ ಕಾಮಗಾರಿಗಳ Reserve for spill over works ಲೆಕ್ಕ-ಶೀರ್ಷಿಕೆ ಯಡಿಯಲ್ಲಿ ಸದರಿ ಅನುದಾನವನ್ನು ಅಳವಡಿಸಿಕೊಳ್ಳಲು ಬೇಕಾಗಿರುತ್ತದೆ.

ಮುಖ್ಯ ಲೆಕ್ಕಾಧಿಕಾರಿಗಳು ಅಭಿಪ್ರಾಯದಂತೆ ಪ್ರಸ್ತಾಪಿತ ಕಾಮಗಾರಿಯಯು 2017-18ನೇ ಸಾಲಿನ ಪಾಲಿಕೆ ಆಯವ್ಯಯದಲ್ಲಿ ಮುಂದುವರೆದ ಕಾಮಗಾರಿಗಳ ಪಟ್ಟಿಯಲ್ಲಿ ಸೇರ್ಪಡೆ ಆಗದಿರುವ ಬಗ್ಗೆ ವರದಿ ಮಾಡಿರುತ್ತಾರೆ, ಮುಂದುವರೆದಂತೆ ಸದರಿ ಕಾಮಗಾರಿಯ ಅಂದಾಜು ಮೊತ್ತವಾದ ರೂ.49.80 ಲಕ್ಷಗಳನ್ನು 2016-17ನೇ ಸಾಲಿನ ಪಾಲಿಕೆ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ-2650 ರಲ್ಲಿ ಮರು ಹೊಂದಾಣಿಕೆ ಮಾಡಿಕೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ನಿಯಮಾನುಸಾರ ಪರಿಗಣಿಸಬಹುದಾಗಿದೆಂದು ಅಭಿಪ್ರಾಯಿಸಿದ್ದು, ಮೇಲ್ಕಂಡ ಉಲ್ಲೇಖ (1) ರಡಿಯಲ್ಲಿ ಮಾನ್ಯ ಆಯುಕ್ತರು ಒಪ್ಪಿಗೆ ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಕಾಮಗಾರಿ ಸಂಖೇತವನ್ನು ಪುನರ್ ನವೀಕರಣ ಮಾಡಲು ಮುಖ್ಯ ಅಭಿಯಂತರರು (ಪಶ್ಚಿಮ) ರವರು ಕೋರಿದ್ದು, ಈಗಾಗಲೇ ನಿಯಮಾನುಸಾರ ಜಾಗೃತ ಕೋಶದಿಂದ ಪ್ರೀ-ಆಡಿಟ್ ಮಾಡಿಸಿದ್ದು ಹಾಗೂ ಮುಖ್ಯ ಲೆಕ್ಕಾಧಿಕಾರಿಗಳ ಅಭಿಪ್ರಾಯದಂತೆ ಸದರಿ ಪ್ರಸ್ತಾವನೆಗೆ ಕಾಮಗಾರಿ ಸಂಖೇತನವನ್ನು ಪುನರ್ ನವೀಕರಣ ಮಾಡಲು (Re-Validation certificate) ಮಾಡಲು ಕೋರಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 13–06–2017ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

**(ಎಂ.ಕೆ. ಗುಣಶೇಖರ್)**
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**